ಸೋಮವಾರ, ಏಪ್ರಿಲ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 107 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**
ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಹಂತವನ್ನು ಯಶಸ್ವಿಯಾಗಿ ಪೂರೈಸಲು ಪಠ್ಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಇರಬೇಕು. ಇವು ಓದು ಹಾಗೂ ನೆನಪಿನ ಕ್ಷಮತೆಯನ್ನು ಹೆಚ್ಚಿಸುತ್ತವೆ.



‘ಮಠಗಳಿಗೂ ಶೇ 30ರಷ್ಟು ಕಮಿಷನ್ ನಿಗದಿ’ 6
ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ, ಸಿಐಡಿ ತನಿಖೆ ಚುರುಕು
ಆಳ-ಅಗಲ
ಆರ್‌ಬಿಐನಲ್ಲಿ ಹಸ್ತಕ್ಷೇಪ ಸರ್ಕಾರದ ನಿರಂತರ ಯತ್ನ
ಗುಜರಾತ್‌ಗೆ ಏ.21ರಂದು ಬ್ರಿಟನ್ ಪ್ರಧಾನಿ 7
ಬಿಜೆಪಿ ನಾಯಕಿ ಮನೆ ಮೇಲೆ ಸಿಐಡಿ ದಾಳಿ 6

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ #ಬಟ್ಟೆಅಂದರೆ BSC
BSC B.S. CHANNABASAPPA & SONS ಸ್ಥಾಪನೆ - 1938
ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ
Shop Online @ www.bscfashion.com
88804 33000

## ವಿವಾದಾತ್ಮಕ ವಿಡಿಯೊ ಸ್ಟೇಟಸ್ ಸೃಷ್ಟಿಸಿದ ಅವಾಂತರ: 89 ಮಂದಿ ಬಂಧನ

# ಹುಬ್ಬಳ್ಳಿ ಗಲಭೆ: ಪೊಲೀಸ್ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಯುವಕನೊಬ್ಬ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ ವಿವಾದಾತ್ಮಕ ವಿಡಿಯೊದಿಂದಾಗಿ ಶನಿವಾರ ರಾತ್ರಿ ಬಿಗುವಿನ ಸ್ಥಿತಿ ತಲೆದೋರಿದ್ದ ಹುಬ್ಬಳ್ಳಿಯಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಗಲಭೆಯು ಇಡೀ ನಗರವನ್ನು ಉದ್ವಿಗ್ನಗೊಳಿಸಿದೆ. ಮೇಲ್ನೋಟಕ್ಕೆ ಪರಿಸ್ಥಿತಿ ತಣ್ಣಗಾದಂತೆ ಕಂಡರೂ ಬಿಗುವಿನ ಸ್ಥಿತಿಯೇ ಇದೆ.

ಮುನ್ನೆಚ್ಚರಿಕೆ ಕ್ರಮವಾಗಿ ನಗರದಾದ್ಯಂತ ಏಪ್ರಿಲ್ 20ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಘಟನೆಗೆ ಕಾರಣವಾದ ಆರೋಪಿ, ಆನಂದನಗರ ನಿವಾಸಿ ಅಭಿಷೇಕ ಹಿರೇಮಠ ಹಾಗೂ ನಂತರ ನಡೆದ ಗಲಭೆಗೆ ಸಂಬಂಧಿಸಿದಂತೆ ಪಾಲಿಕೆಯ 77ನೇ ವಾರ್ಡ್‌ನ ಎಐಎಂಐಎಂ ಪಕ್ಷದ ಸದಸ್ಯೆ ಹುಸೇನಬಿ ನಾಲತವಾಡ ಅವರ ಪತಿ ಇರ್ಫಾನ್ ನಾಲತವಾಡ ಸೇರಿದಂತೆ 89 ಮಂದಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಗಲಭೆಯಲ್ಲಿ 12 ಪೊಲೀಸರು ಹಾಗೂ ಇಬ್ಬರು ಗೃಹ ರಕ್ಷಕ ಸಿಬ್ಬಂದಿ ಗಾಯಗೊಂಡಿದ್ದಾರೆ. ಗಲಭೆಯಲ್ಲಿ ಭಾಗಿಯಾಗಿದ್ದವರ ಪತ್ತೆಗೆ 8 ತಂಡಗಳನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಲಭೆ, ಅಹಿತಕರ ಘಟನೆಗಳು ನಡೆದಿದ್ದ ಇಂಡಿ ಪಂಪ್ ವೃತ್ತ ಸೇರಿದಂತೆ, ಕೋಮು ಸೂಕ್ಷ್ಮ ಪ್ರದೇಶಗಳು, ಪ್ರಮುಖ ವೃತ್ತಗಳಲ್ಲಿ ಪೊಲೀಸರು ಪಥ ಸಂಚಲನ ನಡೆಸಿ ಕಟ್ಟೆಚ್ಚರ ವಹಿಸಿದ್ದಾರೆ.

6ನೇ ಪುಟ ನೋಡಿ

ಗಲಭೆ ನಡೆದ ಹಳೇ ಹುಬ್ಬಳ್ಳಿ ಪ್ರದೇಶದಲ್ಲಿ ಪೊಲೀಸರು ಭಾನುವಾರ ಪಥ ಸಂಚಲನ ನಡೆಸಿದರು – ಪ್ರಜಾವಾಣಿ ಚಿತ್ರ

### ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ: ಸಿದ್ದರಾಮಯ್ಯ

ಹಾಸನ: ‘ಹುಬ್ಬಳ್ಳಿಯಲ್ಲಿ ಗಲಭೆಗೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು. ಆದರೆ, ನಿರಪರಾಧಿಗಳನ್ನು ಬಂಧಿಸಬಾರದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಇಲ್ಲಿ ಹೇಳಿದರು.

‘ಘಟನೆ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ನಾವು ಯಾರ ಪರವೂ ಇಲ್ಲ, ವಿರುದ್ಧವೂ ಇಲ್ಲ. ಎಲ್ಲ ಧರ್ಮದವರನ್ನು ಸಮಾನವಾಗಿ ಕಾಣುತ್ತೇವೆ. ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲಿ’ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇನ್ನಷ್ಟು ಸುದ್ದಿಗಳು 6

### ‘ರಾಜಕೀಯ ಬಣ್ಣ ಕೊಡುವ ಅಗತ್ಯವಿಲ್ಲ’

ಹೊಸಪೇಟೆ (ವಿಜಯನಗರ): ‘ಹುಬ್ಬಳ್ಳಿಯ ಘಟನೆಗೆ ರಾಜಕೀಯ ಬಣ್ಣ ಕೊಡುವ ಅಗತ್ಯವಿಲ್ಲ. ಇದನ್ನು ಕಾನೂನು ಸುವ್ಯವಸ್ಥೆ ಘಟನೆಯಾಗಿ ನೋಡಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಪ್ರತಿಕ್ರಿಯಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಭಾಗವಹಿಸಲು ಇಲ್ಲಿಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಚೋದನಕಾರಿಯಾಗಿ ಪೊಲೀಸ್ ಠಾಣೆ ಎದುರು ಬಂದು ಗಲಾಟೆ ಮಾಡಿ, ಪೊಲೀಸರಿಗೂ ಏಟು ಬೀಳುವ ರೀತಿ ಹಲವರು ನಡೆದುಕೊಂಡಿದ್ದಾರೆ. ಹಳೇ ಹುಬ್ಬಳ್ಳಿಯ ವಿವಿಧ ಭಾಗಗಳಲ್ಲಿ ಕಲ್ಲು ತೂರಾಟ ನಡೆಸಿದ್ದು ತೀವ್ರ ಅಕ್ಷಮ್ಯ’ ಎಂದು ಹೇಳಿದರು.

‘ಈ ಘಟನೆ, ಪ್ರಚೋದನೆ ಹಿಂದೆ ಇರುವವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು. ದೊಡ್ಡ ಪ್ರಮಾಣದಲ್ಲಿ ಜನ ಠಾಣೆಗೆ ಬಂದಿದ್ದಾರೆ ಎಂದರೆ ಇದನ್ನು ವ್ಯವಸ್ಥಿತವಾಗಿ ಮಾಡಿರುವಂತೆ ಕಾಣುತ್ತದೆ’ ಎಂದರು.

### ಸುಮ್ಮನೆ ಬಿಡುವುದಿಲ್ಲ: ಗೃಹ ಸಚಿವ

‘ಪೊಲೀಸರು ಸ್ವಲ್ಪ ಎಚ್ಚರ ತಪ್ಪಿದ್ದರೂ ಬೆಂಗಳೂರಿನ ಕೆ.ಜೆ. ಹಳ್ಳಿ, ಡಿ.ಜೆ. ಹಳ್ಳಿ ಘಟನೆಯಂತೆ ಆಗುತ್ತಿತ್ತು. ಕಾನೂನು ಕೈಗೆ ತೆಗೆದುಕೊಂಡವರನ್ನು ಸುಮ್ಮನೆ ಬಿಡುವುದಿಲ್ಲ. ಎಡಿಜಿಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು. ಬಂಧಿತರ ಹಿನ್ನೆಲೆ ಪರಿಶೀಲಿಸಲಾಗುತ್ತಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಕ್ರಿಯಿಸಿದರು. ಹುಬ್ಬಳ್ಳಿಗೆ ಭೇಟಿ ನೀಡಿದ್ದ ಅವರು, ‘ಆರೋಪಿ ವಿರುದ್ಧ ದೂರು ಕೊಟ್ಟ ನಂತರವೂ ಇದಕ್ಕಿದ್ದಂತೆ ಸಾವಿರಾರು ಮಂದಿ ಬಂದು ಹಿಂಸಾಚಾರ ನಡೆಸಿದ್ದು ಅಕ್ಷಮ್ಯ. ಆದಾಗ್ಯೂ ಕಡಿಮೆ ಸಂಖ್ಯೆಯ ಪೊಲೀಸರು ಅವರನ್ನು ಹಿಮ್ಮೆಟ್ಟಿಸಿದ್ದಾರೆ. ಅನೇಕರಿಗೆ ಪೆಟ್ಟಾಗಿವೆ, ವಾಹನಗಳೂ ಜಖಂ ಆಗಿವೆ’ ಎಂದು ಹೇಳಿದರು.

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಾರೋಪದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಏಲಕ್ಕಿ ಪೇಟ ತೊಡಿಸಿ, ಗೋಪಾಲಕೃಷ್ಣನ ಕಾಷ್ಠ ಮೂರ್ತಿ ಕೊಟ್ಟು ಗೌರವಿಸಿದರು. ಸಚಿವರಾದ ಶಶಿಕಲಾ ಜೊಲ್ಲೆ, ಆನಂದ್ ಸಿಂಗ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಶಾಸಕ ಬಿ.ಎಸ್‌.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಜಗದೀಶ ಶೆಟ್ಟರ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಇದ್ದಾರೆ –ಪ್ರಜಾವಾಣಿ ಚಿತ್ರ

## ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಾರೋಪ

# ‘ದಕ್ಷಿಣದಲ್ಲಿ ಬದಲಾವಣೆಗೆ ಕರ್ನಾಟಕ ನಾಂದಿ ಹಾಡಲಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಕರ್ನಾಟಕ ಸುವರ್ಣ ಯುಗ ಕಂಡಿದೆ. ಸಾಧನೆಗಳಿಂದಲೇ ರಾಜ್ಯದಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕು. ದಕ್ಷಿಣ ಭಾರತದಲ್ಲಿ ಬದಲಾವಣೆಗೆ ಕರ್ನಾಟಕ ನಾಂದಿ ಹಾಡಬೇಕು. ಇದಕ್ಕಾಗಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸಲಹೆ ನೀಡಿದರು.

ಭಾನುವಾರ ಇಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಸಮಾರೋಪ ಭಾಷಣ ಮಾಡಿದ ನಡ್ಡಾ, ರಾಜ್ಯ, ಕೇಂದ್ರದ ಬಿಜೆಪಿ ಸರ್ಕಾರದ ಸಾಧನೆಗಳ ಪಟ್ಟಿ ಮಾಡಿದರು. ಕಾಂಗ್ರೆಸ್, ಎಎಪಿ ಸೇರಿದಂತೆ ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದರು.

> **ಕಾಂಗ್ರೆಸ್ ಭಾಯಿ–ಬೆಹನ್‌ಜೀ ಪಕ್ಷವಾಗಿ ಉಳಿದಿದೆ. ಆದರೆ, ಬಿಜೆಪಿ ಹಾಗಿಲ್ಲ. ನಾಯಕರು, ಕಾರ್ಯಕರ್ತರ ದೊಡ್ಡ ಪಡೆಯೇ ಇದೆ**
> **ಜೆ.ಪಿ.ನಡ್ಡಾ**
> ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

‘ಕರ್ನಾಟಕದಲ್ಲಿ ಬಿಜೆಪಿ ಸರ್ಕಾರದ ಕಾರ್ಯವೈಖರಿ ತೃಪ್ತಿ ನೀಡಿದೆ. ಬರುವ ದಿನಗಳಲ್ಲಿ ‘ಮಿಷನ್ ರಿಪೀಟ್’ ಗುರಿ ಸಾಧನೆಗೆ ಕೆಲಸ ಮಾಡಬೇಕು. ರಾಷ್ಟ್ರ ಮೊದಲು, ಪಕ್ಷ ನಂತರ, ವೈಯಕ್ತಿಕ ವಿಚಾರಗಳು ಅಂತಿಮ ಎನ್ನುವುದರಲ್ಲಿ ಬಿಜೆಪಿ ವಿಶ್ವಾಸ ಇರಿಸಿದೆ. ನಮ್ಮ ಗುರಿಯು ಬಹಳ ಸ್ಪಷ್ಟವಾಗಿದೆ. ನಮಗೆ ಜಯದ ಭರವಸೆ ಇದೆ’ ಎಂದು ಹೇಳಿದರು.

‘ಉತ್ತರದ ಕಾಶ್ಮೀರದಿಂದ, ದಕ್ಷಿಣದ ಕರ್ನಾಟಕದವರೆಗೆ ಎಲ್ಲ ಪಕ್ಷಗಳು ಕುಟುಂಬ ರಾಜಕಾರಣ ಮಾಡುತ್ತಿವೆ. ಯಾವುದೇ ಪಕ್ಷ ಸಿದ್ಧಾಂತ ಉಳಿಸಿಕೊಂಡಿಲ್ಲ. ಬಿಜೆಪಿ ಅವುಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಎಲ್ಲರ ವಿಶ್ವಾಸ ಗಳಿಸಿ ಮುನ್ನಡೆಯುತ್ತಿದೆ’ ಎಂದರು.

4ನೇ ಪುಟ ನೋಡಿ

### ಮುಂದಿನ ಕಾರ್ಯಕಾರಿಣಿ ಬೆಂಗಳೂರಿನಲ್ಲಿ

‘ಬಿಜೆಪಿಯ ಮುಂದಿನ ರಾಜ್ಯ ಕಾರ್ಯಕಾರಿಣಿ ಸಭೆಯು ಜುಲೈ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮಾರೋಪ ಭಾಷಣದಲ್ಲಿ ಪ್ರಕಟಿಸಿದರು.

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

### ಚಿನಕುರಳಿ

ಪ್ರಕಾಶ್ ಶೆಟ್ಟಿ

## ವಿಶ್ವ ಬ್ಯಾಂಕ್ ಅಧ್ಯಯನ ವರದಿ

# ಕಡು ಬಡತನ ತಗ್ಗಿಸಿದ ಭಾರತ

• ಅನ್ನಪೂರ್ಣಾ ಸಿಂಗ್

ನವದೆಹಲಿ: 2011ರಿಂದ 2019ರ ನಡುವಿನ ಅವಧಿಯಲ್ಲಿ ಭಾರತದಲ್ಲಿ ಕಡು ಬಡತನವು ಶೇಕಡ 12ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂದು ವಿಶ್ವ ಬ್ಯಾಂಕ್‌ನ ಅಧ್ಯಯನವೊಂದು ಹೇಳಿದೆ.

ಈ ಅಧ್ಯಯನದ ಪ್ರಕಾರ 2019ರಲ್ಲಿ ಕಡು ಬಡತನವು ಶೇಕಡ 0.8ರ ಮಟ್ಟಕ್ಕೆ ಇಳಿಕೆಯಾಗಿತ್ತು. 2020ರಲ್ಲಿ ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಸರ್ಕಾರದ ಕಡೆಯಿಂದ ಆಹಾರ ಧಾನ್ಯ ಪೂರೈಸುವ ಯೋಜನೆ ಚಾಲ್ತಿಯಲ್ಲಿ ಇದ್ದ ಕಾರಣ ಕಡು ಬಡತನದ ಪ್ರಮಾಣವು ಹೆಚ್ಚಾಗಲಿಲ್ಲ.

ಕಡು ಬಡತನವು ಗ್ರಾಮೀಣ ಭಾರತದಲ್ಲಿ ಗರಿಷ್ಠ ಪ್ರಮಾಣದ ಇಳಿಕೆ ಕಂಡಿದೆ. 2011ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಡು ಬಡತನವು ಶೇ 26.5ರಷ್ಟು ಇದ್ದುದು 2019ರಲ್ಲಿ ಶೇ 11.6ಕ್ಕೆ ಇಳಿಕೆಯಾಗಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.



‘2011ರಿಂದ 2019ರ ನಡುವಿನ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನವು ಶೇ 14.7ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಬಡತನವು ಶೇ 7.9ರಷ್ಟು ಇಳಿಕೆ ಆಗಿದೆ’ ಎಂದು ಅದು ಹೇಳಿದೆ. ಅಧ್ಯಯನ ವರದಿಯನ್ನು ಅರ್ಥಶಾಸ್ತ್ರಜ್ಞರಾದ ಸುತೀರ್ಥ ಸಿನ್ಹಾ ರಾಯ್ ಮತ್ತು ರಾಯ್ ವಾನ್ ಡರ್ ವೈಯ್ಡ್ ಸಿದ್ಧಪಡಿಸಿದ್ದಾರೆ.

ಸಣ್ಣ ಹಿಡುವಳಿ ಇರುವ ರೈತರ ಆದಾಯದಲ್ಲಿ ಹೆಚ್ಚಿನ ಪ್ರಮಾಣದ ಏರಿಕೆ ಕಂಡುಬಂದಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ‘ಸಣ್ಣ ಹಿಡುವಳಿ ಇರುವ ರೈತರ ವಾಸ್ತವ ಆದಾಯವು 2013 ಹಾಗೂ 2019ರ ನಡುವೆ ವಾರ್ಷಿಕ ಶೇ 10ರಷ್ಟು ಹೆಚ್ಚಳ ಕಂಡಿದೆ. ಇದೇ ಅವಧಿಯಲ್ಲಿ ದೊಡ್ಡ ಹಿಡುವಳಿ ಹೊಂದಿರುವ ರೈತರ ಆದಾಯವು ಶೇ 2ರಷ್ಟು ವಾರ್ಷಿಕ ಹೆಚ್ಚಳ ಕಂಡಿದೆ’ ಎಂದು ಅಧ್ಯಯನವು ಹೇಳಿದೆ.

2011ರಿಂದ 2019ರ ನಡುವೆ ಬಡತನವು ತುಸು ಹೆಚ್ಚಾದ ಎರಡು ಸಂದರ್ಭಗಳು ಇವೆ. ನೋಟು ರದ್ದತಿ ತೀರ್ಮಾನ ಕೈಗೊಂಡ ಅವಧಿಯಲ್ಲಿ ಮತ್ತು ಅದಾದ ನಂತರ ಆರ್ಥಿಕ ಪ್ರಗತಿಯು ಮಂದಗತಿಗೆ ತಿರುಗಿದ ಸಂದರ್ಭದಲ್ಲಿ ಈ ರೀತಿ ಆಗಿತ್ತು ಎಂದು ವರದಿ ತಿಳಿಸಿದೆ.

ಜೀವನ ಸಾಗಿಸಲು ದಿನಕ್ಕೆ ₹ 145.03ಕ್ಕಿಂತ (1.9 ಅಮೆರಿಕನ್ ಡಾಲರ್) ಕಡಿಮೆ ಹಣ ಹೊಂದಿರುವವರನ್ನು ವಿಶ್ವ ಬ್ಯಾಂಕ್ ಕಡುಬಡವರು ಎಂದು ಪರಿಗಣಿಸಿದೆ.

ಕಡು ಬಡತನವನ್ನು ಭಾರತವು ಬಹುತೇಕ ಹೋಗಲಾಡಿಸಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹೇಳಿದ ನಂತರದಲ್ಲಿ ವಿಶ್ವ ಬ್ಯಾಂಕ್ ಈ ಮಾತು ಹೇಳಿದೆ.

## ಎಲ್ಲ ನಕ್ಷೆ ಇನ್ನು ಆನ್‌ಲೈನ್‌ನಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘11 ಇ, ಪೋಡಿ, ಭೂ ಪರಿವರ್ತನೆ, ಹದ್ದುಬಸ್ತು ಮತ್ತು ಇತರ ನಕ್ಷೆಗಳನ್ನು ಪಡೆಯಲು ಇನ್ನು ಮುಂದೆ ಅರ್ಜಿದಾರರು ಸರ್ವೆ ಕಚೇರಿಗಳಿಗೆ ಅಲೆದಾಡುವ ಅಗತ್ಯ ಇಲ್ಲ. ಆನ್‌ಲೈನ್ ಮೂಲಕವೇ ಪಡೆದುಕೊಳ್ಳಬಹುದು’ ಎಂದು ಸರ್ವೆ ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆಗಳ (ಎಸ್‌ಎಸ್ ಎಲ್‌ಆರ್) ಆಯುಕ್ತ ಮೌನೀಶ್ ಮೌದ್ಗಿಲ್ ತಿಳಿಸಿದ್ದಾರೆ.

‘ನಕ್ಷೆ ಸೇರಿದಂತೆ ಭೂಮಿ ಸಂಬಂಧಿತ ದಾಖಲೆಗಳಿಗೆ ಅರ್ಜಿ ಸಲ್ಲಿಸುವಾಗಲೇ ಶುಲ್ಕ ಪಾವತಿಸುವುದರಿಂದ ಆನ್‌ಲೈನ್ ಮೂಲಕ ನಕ್ಷೆಗಳನ್ನು ಮುದ್ರಿಸಿಕೊಳ್ಳಲು ಹೆಚ್ಚುವರಿಯಾಗಿ ಯಾವುದೇ ಶುಲ್ಕ ಪಾವತಿಸುವ ಅಗತ್ಯ ಇಲ್ಲ’ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ‘ಅರ್ಜಿಯನ್ನು ಆಧರಿಸಿ ಸಂಬಂಧಿಸಿದ ನಕ್ಷೆಯನ್ನು ಅನುಮೋದಿಸಿದ ತಕ್ಷಣ ವೆಬ್‌ಸೈಟ್ ಲಿಂಕ್ (http://103.138.196.154/service19/Report/ApplicationDetails) ಮೂಲಕ ಅದನ್ನು ಮುದ್ರಿಸಿಕೊಳ್ಳಲು ಲಭ್ಯವಿರುತ್ತದೆ. ಅದೇ ಲಿಂಕ್ ಬಳಸಿ ಅರ್ಜಿಯ ಸ್ಥಿತಿಗತಿಯನ್ನೂ ಅರ್ಜಿದಾರರು ತಿಳಿದುಕೊಳ್ಳಬಹುದು’ ಎಂದಿದ್ದಾರೆ.




## ಹಿಂಡಲಗಾ ಗ್ರಾಮದಲ್ಲಿ ‘ಪ್ರಜಾವಾಣಿ’ ರಿಯಾಲಿಟಿ ಚೆಕ್

# ಕೆಲಸ ನಡೆದಿದೆ; ಮಾಡಿಸಿದ್ದ್ಯಾರೆಂದು ಎಲ್ಲರಿಗೂ ತಿಳಿದಿಲ್ಲ!

• ಎಂ.ಮಹೇಶ

ಬೆಳಗಾವಿ: ತಾಲ್ಲೂಕಿನ ಹಿಂಡಲಗಾ ಗ್ರಾಮದಲ್ಲಿ ರಸ್ತೆ ನಿರ್ಮಾಣ ಸೇರಿದಂತೆ ಅಭಿವೃದ್ಧಿ ಕೆಲಸಗಳು ನಡೆದಿರುವುದು ನಿಜ. ‘ಅವುಗಳನ್ನು ಮಾಡಿಸಿದ್ದು ಗುತ್ತಿಗೆದಾರ ದಿವಂಗತ ಸಂತೋಷ್ ಪಾಟೀಲ’ ಎಂದು ಹಲವರು ಹೇಳಿದರೆ, ‘ಕಾಮಗಾರಿಗಳು ಆಗಿವೆ. ಆದರೆ ಗುತ್ತಿಗೆ ಪಡೆದಿದ್ದವರು ಯಾರು ಎನ್ನುವುದು ನಮಗೆ ಗೊತ್ತಿಲ್ಲ’ ಎಂದು ಇನ್ನು ಕೆಲವರು ಪ್ರತಿಕ್ರಿಯಿಸಿದರು.

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ಬೆನ್ನಲ್ಲಿ ‘ಪ್ರಜಾವಾಣಿ’ಯು ಗ್ರಾಮದಲ್ಲಿ ಭಾನುವಾರ ಸಂಚರಿಸಿ ‘ರಿಯಾಲಿಟಿ ಚೆಕ್’ ನಡೆಸಿತು. ಆಗ ಗ್ರಾಮಸ್ಥರಿಂದ ಭಿನ್ನ ಅಭಿಪ್ರಾಯಗಳು ಕೇಳಿ ಬಂದವು. ಗುತ್ತಿಗೆದಾರ ಆತ್ಮಹತ್ಯೆ ಪ್ರಕರಣವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಕೆ.ಎಸ್.ಈಶ್ವರಪ್ಪ ಅವರ ರಾಜೀನಾಮೆಗೂ ಕಾರಣವಾಯಿತು.

‘ಒಟ್ಟು ₹4 ಕೋಟಿ ವೆಚ್ಚದಲ್ಲಿ 108 ಕಾಮಗಾರಿ ನಡೆಸಿದ್ದೇನೆ. ಸರಾಸರಿ ₹ 1.50 ಲಕ್ಷದಿಂದ ₹4 ಲಕ್ಷ ಮೊತ್ತದವು’ ಎಂದು ಸಂತೋಷ್ ಹೇಳಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಊರಿನಲ್ಲಿ ಸಂಚರಿಸಿದಾಗ, ಅಭಿವೃದ್ಧಿ ಕಾಮಗಾರಿ ನಡೆದಿರುವುದು ಕಂಡುಬಂತು.

**ಒಂದೂ ಫಲಕವಿಲ್ಲ:** ಆ ಗ್ರಾಮದಲ್ಲಿ, ನೂರು ವರ್ಷದ ಬಳಿಕ 2020ರಲ್ಲಿ ಮಹಾಲಕ್ಷ್ಮಿದೇವಿ ಜಾತ್ರೆ ಬಂದಿತ್ತು. ಕೋವಿಡ್‌ನಿಂದಾಗಿ ಮುಂದೂಡಿದ್ದು, 2021ರ ಮಾರ್ಚ್‌ನಲ್ಲಿ ಜರುಗಿತ್ತು. ಅದಕ್ಕೂ ಹಿಂದೆ ಕಾಂಕ್ರೀಟ್ ರಸ್ತೆ, ಚರಂಡಿ, ಪೇವರ್ಸ್ ಜೋಡಣೆ ಕೆಲಸಗಳಾಗಿವೆ ಎಂದು ಗ್ರಾಮಸ್ಥರು ತಿಳಿಸಿದರು.

4ನೇ ಪುಟ ನೋಡಿ



ಬೆಳಗಾವಿ ತಾಲ್ಲೂಕು ಹಿಂಡಲಗಾ ಗ್ರಾಮ ಪಂಚಾಯಿತಿ ಕಚೇರಿ ಸಮೀಪದಲ್ಲಿ ಕಾಂಕ್ರೀಟ್ ರಸ್ತೆಯನ್ನು ಕಳೆದ ವರ್ಷ ನಿರ್ಮಿಸಲಾಗಿದೆ –ಪ್ರಜಾವಾಣಿ ಚಿತ್ರ

### ರಮೇಶ ಜಾರಕಿಹೊಳಿ ಬೆಂಬಲಿಗ

ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಬೆಂಬಲಿಗ ಆಗಿದ್ದ ಸಂತೋಷ್, ಹಿಂದೆ ಕಾಂಗ್ರೆಸ್‌ನಲ್ಲೂ ಗುರುತಿಸಿಕೊಂಡಿದ್ದರು. ಏಳೆಂಟು ವರ್ಷಗಳಿಂದ ಗುತ್ತಿಗೆದಾರರಾಗಿದ್ದರು. ‘ಕಳೆದ ಜಿ.ಪಂ. ಚುನಾವಣೆಯಲ್ಲಿ ಬಾಗೇವಾಡಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್‌ಗಾಗಿ ಆ ಪಕ್ಷದ ನಾಯಕ ರಾಹುಲ್ ಗಾಂಧಿ ಸಹಿ ಫೋರ್ಜರಿ ಮಾಡಿ ಕೆಪಿಸಿಸಿಗೆ ಶಿಫಾರಸು ಪತ್ರ ನೀಡಿದ್ದರು’ ಎಂಬ ಆರೋಪ ಸಂತೋಷ್ ವಿರುದ್ಧ ಕೇಳಿಬಂದಿತ್ತು.

### ನಾನೂ ಪತ್ರ ಕೊಟ್ಟಿದ್ದೆ

2021ರಲ್ಲಿ ಜಾತ್ರೆ ಇತ್ತು. ಅದಕ್ಕೆ ತಿಂಗಳು ಮುಂಚೆ ಸಂತೋಷ್ ಕಾಮಗಾರಿಗಳನ್ನು ಮಾಡಿಸಿದ್ದಾರೆ. ಕಾಮಗಾರಿ ನಡೆಸುವಂತೆ ಕೆ.ಎಸ್.ಈಶ್ವರಪ್ಪ ಅವರು ಸಂತೋಷ್‌ಗೆ ಮೌಖಿಕವಾಗಿ ನಿರ್ದೇಶನ ನೀಡಿದ್ದರು. ಆಮೇಲೆ ಸರಿಮಾಡೋಣ ಎಂದೂ ಹೇಳಿದ್ದರು. ನಾನೂ ಪತ್ರ ಕೊಟ್ಟಿದ್ದೆ

**ನಾಗೇಶ ಮನ್ನೋಳಕರ,** ಅಧ್ಯಕ್ಷ, ಹಿಂಡಲಗಾ ಗ್ರಾಮ ಪಂಚಾಯಿತಿ

### ಕೆಲಸ ನಡೆದಿವೆ, ಗುಣಮಟ್ಟವಿಲ್ಲ

ಸಂತೋಷ್ ಕಾಮಗಾರಿ ಮಾಡಿಸಿದ್ದಾರೆ. ನಮ್ಮ ಮನೆ ಎದುರು ರಸ್ತೆ ನಿರ್ಮಿಸಿದ್ದಾರೆ. ಅದು ಗುಣಮಟ್ಟದಿಂದ ಕೂಡಿಲ್ಲ. ಉಪ ಗುತ್ತಿಗೆ ನೀಡಿದ್ದರು ಎಂಬ ಮಾಹಿತಿಯೂ ಇದೆ. ಗ್ರಾಮ ಪಂಚಾಯಿತಿ ಸಭೆಯಲ್ಲಿ ಚರ್ಚೆಯಾಗಿಲ್ಲ. ಠರಾವು ಕೂಡ ಆಗಿರಲಿಲ್ಲ

**ಡಿ.ಬಿ. ಪಾಟೀಲ,** ಸದಸ್ಯ, ಹಿಂಡಲಗಾ ಗ್ರಾಮ ಪಂಚಾಯಿತಿ

### ಹೇಳಿದವರಾರು ಎನ್ನುವುದು ಮುಖ್ಯ

ಹಿಂಡಲಗಾ ಗ್ರಾಮದಲ್ಲಿ ಸಂತೋಷ್ ಕೆಲಸ ಮಾಡಿಸಿದ್ದು ನಿಜ. ಗಮನಕ್ಕೆ ತಾರದೆ ಕೆಲಸ ನಡೆಸುತ್ತಿದ್ದ ಬಗ್ಗೆ ಜಿ.ಪಂ. ಅಧಿಕಾರಿಗಳಿಗೆ ತಿಳಿಸಿದ್ದೆ. ಕೆಲಸ ಮಾಡುವಂತೆ ಹೇಳಿದ್ದವರು ಯಾರು ಎಂಬುದು ಮುಖ್ಯವಾಗುತ್ತದೆ. ಆ ಬಗ್ಗೆ ತನಿಖೆಯಾಗಬೇಕು

**ಲಕ್ಷ್ಮಿ ಹೆಬ್ಬಾಳಕರ,** ಶಾಸಕಿ, ಗ್ರಾಮೀಣ ವಿಧಾನಸಭಾ ಕ್ಷೇತ್ರ

ನಗರದ ತಿಗಳರಪೇಟೆಯ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಭಾನುವಾರ ಬೆಳಗಿನ ಜಾವ 3:00 ಗಂಟೆಗೆ ನಡೆದ ಕರಗ ಮಹೋತ್ಸವದಲ್ಲಿ ಜ್ಞಾನೇಂದ್ರ ಅವರು ಕರಗ ಹೊತ್ತು ದೇವಸ್ಥಾನದಿಂದ ಹೊರಬಂದಾಗ ಭಕ್ತರು ಮಲ್ಲಿಗೆ ಹೂವುಗಳ ಮೂಲಕ ಸ್ವಾಗತಿಸಿದರು (ಎಡಚಿತ್ರ) ಮಹೋತ್ಸವದಲ್ಲಿ ಭಕ್ತರು ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರ ಹಿಡಿದಿದ್ದರು
–ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

### ಹಳೆ ವೈಭವಕ್ಕೆ ಮರಳಿದ ಹಬ್ಬ • ತವಕ್ಕಲ್ ಮಸ್ತಾನ್ ದರ್ಗಾಕ್ಕೂ ಭೇಟಿ • ಕೋವಿಡ್‌ನಿಂದ ಎರಡು ವರ್ಷ ಸಂಭ್ರಮ ಕಳೆದುಕೊಂಡಿದ್ದ ಉತ್ಸವ

# ಭಾವೈಕ್ಯದ ಸಂದೇಶ ಸಾರಿದ ಐತಿಹಾಸಿಕ ಕರಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐತಿಹಾಸಿಕ ಧರ್ಮರಾಯ ಸ್ವಾಮಿ ಕರಗ ಉತ್ಸವ ಭಾನುವಾರ ನಸುಕಿನ ಜಾವ ವಿಜೃಂಭಣೆಯಿಂದ ನಡೆಯಿತು. ತವಕ್ಕಲ್ ಮಸ್ತಾನ್ ದರ್ಗಾಕ್ಕೆ ಭೇಟಿ ನೀಡುವ ಸಂಪ್ರದಾಯವನ್ನು ಪಾಲಿಸುವ ಮೂಲಕ ಈ ಹಬ್ಬವು 'ನಾಡಿನ ಭಾವೈಕ್ಯಕ್ಕೆ ಧಕ್ಕೆ ತರುವ ತಂತ್ರಗಳು ಫಲಿಸುವುದಿಲ್ಲ' ಎಂಬ ಸ್ಪಷ್ಟ ಸಂದೇಶವನ್ನು ಸಾರಿತು.

ಕೊರೊನಾ ಕಾರಣದಿಂದ ಕಳೆದ ಎರಡು ವರ್ಷ ಕರಗವನ್ನು ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಮತ್ತೆ ಕಳೆಗಟ್ಟಿದ ಉತ್ಸವ ಹಳೆ ವೈಭವಕ್ಕೆ ಮರಳಿತು.

ಪರಂಪರಾನುಗತವಾಗಿ ಭೇಟಿ ನೀಡುತ್ತಿದ್ದ ಪ್ರದೇಶಗಳಲ್ಲೆಲ್ಲ ಕರಗ ಸಾಗಿತು. ಈ ಬಾರಿಯೂ ಚಿಕ್ಕಪೇಟೆಯ ಅಕ್ಕಿಪೇಟೆ ಮುಖ್ಯರಸ್ತೆಯ ಹಜ್ರತ್ ತವಕ್ಕಲ್ ಶಾ ಮಸ್ತಾನ್ ಸೋಹರ್ವಾರ್ಡಿ ರಹಮತುಲ್ಲಾ ದರ್ಗಾಕ್ಕೆ ಬೆಳಗಿನ ಜಾವ ಆರು ಗಂಟೆ ಸುಮಾರಿಗೆ ಕರಗ ಪ್ರವೇಶಿಸುವ ಮೂಲಕ ಈ ಪರಂಪರೆಗೆ ತಗಾದೆ ತೆಗೆದ ಟೀಕಾಕಾರರಿಗೆ ಉತ್ತರ ನೀಡಿತು. ದರ್ಗಾದಲ್ಲಿ ಮುಸ್ಲಿಂ ಸಮುದಾಯದವರು ಸಾಂಪ್ರದಾಯಿಕ ಸ್ವಾಗತ ನೀಡಿದರು. ಭಕ್ತಾದಿಗಳಿಗೆ ಸಿಹಿ ತಿಂಡಿ, ನೀರು, ಹಣ್ಣುಗಳನ್ನು ನೀಡಿ ಸ್ವಾಗತಿಸಿದರು.

ಕರಗ ನೋಡಲು ದರ್ಗಾ ಬಳಿ ಸಾಕಷ್ಟು ಸಂಖ್ಯೆಯಲ್ಲಿ ಮುಸ್ಲಿಮರು ಜಮಾಯಿಸಿದ್ದರು. ದರ್ಗಾದಲ್ಲಿ ಸೇರಿದ್ದವರು 'ಗೋವಿಂದಾ ಗೋವಿಂದಾ...' ಎಂದು ಕೂಗಿ ಕರಗದ ಸಂಭ್ರಮ ಹೆಚ್ಚಿಸಿದರು.

'ಹಿಂದೂ ಮುಸ್ಲಿಮರ ಭಾವೈಕ್ಯತೆಯ ಪ್ರತೀಕ ಇದು. ಬೆಂಗಳೂರು ಕರಗ ಕರ್ನಾಟಕದ ದೊಡ್ಡ ಹಬ್ಬ. ಶಾಂತಿಯುತವಾಗಿ ಸಹೋದರ ಭಾವನೆಯಿಂದ ಎಲ್ಲ ಕಾರ್ಯಗಳು ನಡೆದಿವೆ. ಈ ಬಾರಿ ರಂಜಾನ್ ಮತ್ತು ಕರಗ ಒಟ್ಟಿಗೆ ಬಂದಿವೆ. ಹಿಂದೂ–ಮುಸ್ಲಿಮರು ಒಗ್ಗಟ್ಟಿನಿಂದ ಇರಬೇಕು. ಈ ಹಬ್ಬವು ಕೋಮು ಸಾಮರಸ್ಯದ ಸಂಕೇತ. ಸಂಪ್ರದಾಯದ ಪ್ರಕಾರ ಎಲ್ಲವೂ ಒಳ್ಳೆಯ ರೀತಿಯಲ್ಲಿ ನಡೆದಿದೆ. ದರ್ಗಾ ಸುತ್ತಲೂ ಮೂರು ಸುತ್ತು ಕರಗ ಪ್ರದಕ್ಷಿಣೆ ಹಾಕಿತು. ಕೆಲವರು ಕರಗ ಬರುವುದಿಲ್ಲ ಎಂದು ಹೇಳುತ್ತಿದ್ದರು. ಅದೆಲ್ಲವೂ ರಾಜಕೀಯ ಅಷ್ಟೇ' ಎಂದು ಸುದ್ದಿಗಾರರೊಂದಿಗೆ ಮಾತನಾಡಿದ ದರ್ಗಾ ಕಾರ್ಯದರ್ಶಿ ಮಹಮ್ಮದ್ ಇನಾಯತ್ ಉಲ್ಲಾ ಹೇಳಿದರು.

ಶನಿವಾರ ರಾತ್ರಿ ಮಳೆ ಸುರಿದರೂ ಭಕ್ತಾದಿಗಳ ಉತ್ಸಾಹ ಕುಂದಿಸಲಿಲ್ಲ. ಬೆಳಗಿನ ಜಾವ ಸುಮಾರು ಮೂರು ಗಂಟೆ ವೇಳೆಗೆ ದ್ರೌಪದಿ ದೇವಿಯ ಅಪ್ಪಣೆಯ ನಂತರ ಆರಂಭವಾದ ಕರಗವನ್ನು ಭಕ್ತರು ಕಣ್ತುಂಬಿಕೊಂಡರು. ಶ್ರದ್ಧೆ, ಭಕ್ತಿಯಿಂದ ನಡೆದ ಕರಗ ಶಕ್ತ್ಯೋತ್ಸವ ಭಕ್ತಾದಿಗಳ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು. ದುಂಡು ಮಲ್ಲಿಗೆಯ ಹೂವುಗಳಿಂದ ಕರಗವನ್ನು ಅಲಂಕೃತಗೊಳಿಸಲಾಗಿತ್ತು. ವೀರಕುಮಾರರು ಅಲಗು ಸೇವೆ ಮಾಡಿ ಗಮನಸೆಳೆದರು. ವೀರಕುಮಾರ ಜ್ಞಾನೇಂದ್ರ ಅವರೇ ಕರಗ ಹೊತ್ತಿದ್ದರು. ಬೆಳಗಿನ ಜಾವ ಆರಂಭವಾದ ಉತ್ಸವವನ್ನು ನೋಡಲು ನಗರದ ಇಕ್ಕೆಲಗಳಲ್ಲಿ ಜನರು ಸೇರಿದ್ದರು.

ಕರಗ ಮಹೋತ್ಸವದಲ್ಲಿ ವೀರಕುಮಾರರು ಪಾಲ್ಗೊಂಡಿದ್ದರು

ಚೈತ್ರ ಪೌರ್ಣಿಮಿಯಂದು ನಡೆದ ಈ ಕರಗ ಉತ್ಸವದಲ್ಲಿ ಪುನೀತ್ ರಾಜಕುಮಾರ್ ಚಿತ್ರಗಳು ಸಹ ರಾರಾಜಿಸಿದವು. ಅಭಿಮಾನಿಗಳು ಜೈಕಾರ ಹಾಕಿದರು.

ಕಬ್ಬನ್‌ಪೇಟೆ, ಆಂಜನೇಯ ಸ್ವಾಮಿ ದೇವಸ್ಥಾನ, ಗಣೇಶ ದೇವಸ್ಥಾನ, ಕಾಟನ್ ಪೇಟೆ, ಬಳೇ ಪೇಟೆ ಸರ್ಕಲ್, ಅಣ್ಣಮ್ಮ ದೇವಸ್ಥಾನ, ಕುಂಬಾರ ಪೇಟೆ, ಚೌಡೇಶ್ವರಿ ದೇವಸ್ಥಾನ, ತಿಗಳರ ಪೇಟೆ ಮೂಲಕ ದೇವಸ್ಥಾನಕ್ಕೆ ದ್ರೌಪದಿ ಕರಗ ಹಿಂತಿರುಗಿತು. ಕರಗ ಸಾಗುವ ಮಾರ್ಗದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಕರಗದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ


ಪ್ರಜಾವಾಣಿ
## ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**REAL ESTATE SELLING**

**Flat**

**General**

**SALE 2** BHK Flat for sale at Palace Garden Apartment Compound, Palace Cross Road. East facing as per vastu. One covered car park. 1.10 cr. Negotiable. Contact: 9845493251, 9449009325

**Sites**

**Banashankari**

**30X50 EAST** facing Site for sale in BDA approved gated layout in Hemmigepura, near BSK 6th phase. Engineer's Enclave. Direct allottee. Price 3800/-. Call-9845366328

**Hosur Road**

**5-ACRE-LAND-SALE** Bank Seased With Rera Approval For 600 FLAT Construction Just Rs.24 Crore Market Rate Rs 38 Crore+ Only Genuine Investors /Builders Contact: 99009 76000

**RENTAL PROPERTIES**

**Accommodation Available**

**Industrial And Factory**

**14500 SQFT.** Industrial Godown for rent in Doddaballapur. Call: 9986716677.

**JOB OPPORTUNITIES**

**Multiple Vacancy**

**REQUIRED TEAMLEADER,** Telecaller, & Field Executive for For Banking Loan collection (salary 15,000-to-20,000). Direct recruitment to Company Contact: 9620206756, 9620200756.

**Part-Time Jobs**

**REPUTED MNC** Company Will Provide Work From Home, Earn 30 to 35K Malleswaram: 7019215243/ 9886641282

**Wanted**

**WANTED VISA** EXECUTIVE for a Travel Agency in Kammanahalli, Banaswadi area. Contact Bose, 9844108690, Yeskay World Tours Blr Pvt. Ltd.

**REQUIRED DATA** ENTRY OPERATORS Graduates with good English apply online @ www.bidocean.com/employment.php

**BUSINESS**

**Business to Business**

**Finance**

**WANTED INVESTOR** 12Cr, 16 Flats Buy Back After 48 Months 10Cr with Flat: 8892501007/9606701007

**EDUCATIONAL**

**Admission**

**DIRECT FINAL:** LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

**PERSONAL**

**Announcements**

**WE SHAM.** K.R and Sushma M Betgeri residing at No.E501, Vaishnavi Nakshatra Apartments, Tumkur road, Yeshwanthpur, Bangalore-22, we state that our Daughter's name is SUNIDHI.S.RAO and correct date of birth is 19-08-2004 in all her records, vide affidavit dated 16-04-2022, before notary VANAJAKSHI. R Bangalore.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement


# 'ಕಾದಂಬರಿ ಓದಿದ ಅನುಭವ ನೀಡುವ ಕೃತಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕನ್ನಡದ ಸೃಜನಶೀಲ ಹಾಗೂ ಪರಿಶುದ್ಧ ಮನಸ್ಸೊಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಚುಕ್ಕಾಣಿ ಹಿಡಿದರೆ ಹೇಗೆಲ್ಲಾ ಕೆಲಸ ಮಾಡಬಹುದು ಎನ್ನುವುದಕ್ಕೆ ಪ್ರೊ. ಎಸ್.ಜಿ.ಸಿದ್ದರಾಮಯ್ಯ ಸಾಕ್ಷಿ. ಅವರ ಅವಧಿಯಲ್ಲಿ ಆಗಿರುವ ಕೆಲಸಗಳ ಕುರಿತ ಮಾಹಿತಿ ಒಳಗೊಂಡಿರುವ ಈ ಪುಸ್ತಕ ಶ್ರೇಷ್ಠ ಕಾದಂಬರಿಯೊಂದನ್ನು ಓದಿದ ಅನುಭವ ನೀಡುತ್ತದೆ' ಎಂದು ಪ್ರೊ.ಕುಮಾರಸ್ವಾಮಿ ಬೆಜ್ಜಿಹಳ್ಳಿ ಅಭಿಪ್ರಾಯಪಟ್ಟರು.

ಪ್ರೊ. ಎಸ್. ಜಿ. ಸಿದ್ದರಾಮಯ್ಯನವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮಾಡಿರುವ ಕೆಲಸಗಳ ಕುರಿತು ಪತ್ರಕರ್ತ ಲಕ್ಷ್ಮಣ ಕೊಡಸೆ ಹಾಗೂ ವೀರಶೆಟ್ಟಿ ಬಿ.ಗಾರಂಪಳ್ಳಿ ಸಂಪಾದಿಸಿರುವ 'ಕನ್ನಡ ಅವಲೋಕನ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

'ಪುಸ್ತಕ ಒಳಗೊಂಡಿರುವ ವಿಷಯ ಹಾಗೂ ಸಂಪಾದನೆ ಮಾಡಿರುವ ರೀತಿಯ ಆಧಾರದಲ್ಲಿ ಇದನ್ನು ಸೃಜನಶೀಲ ಕೃತಿ ಎಂದು ಕರೆಯಬಹುದು. ನಾಡು, ನುಡಿ ಮತ್ತು ನಾಡವರು ಸಾಗಬೇಕಾದ ದಾರಿಗಳ ಸ್ಪಷ್ಟತೆಯನ್ನೂ ಇದು ಒಳಗೊಂಡಿದೆ. ಮುಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗುವವರಿಗೆ ಇದು ಕೈಪಿಡಿಯಾಗಿದೆ. ಕನ್ನಡದ ಪ್ರಜ್ಞೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿ ರೂಪಿಸುವ ಧಾಟಿಯಲ್ಲಿ ಕೃತಿಯ ನಿರೂಪಣೆ ಇದೆ. ಅದು ಪುಸ್ತಕದ ಹೆಚ್ಚುಗಾರಿಕೆ' ಎಂದರು.

'ಸೃಜನಶೀಲ (ಎಸ್.ಜಿ.ಸಿದ್ದರಾಮಯ್ಯ) ಹಾಗೂ ಸಮಾಜವಾದಿ (ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ) ಮನಸ್ಸುಗಳ ಮುಂದಾಳತ್ವದಲ್ಲಿ ನಡೆದಿರುವ ಕೆಲಸಗಳ ದಾಖಲೀಕರಣ ಈ ಪುಸ್ತಕದಲ್ಲಿ ಆಗಿದೆ. ಶಿಕ್ಷಣ, ಆಡಳಿತ ಹಾಗೂ ತಂತ್ರಜ್ಞಾನದಲ್ಲಿ ಕನ್ನಡದ ಅನುಷ್ಠಾನ, ಕನ್ನಡಿಗರಿಗೆ ಉದ್ಯೋಗ ಕೊಡುವಂತಹ ಭಾಷೆಯಾಗಿ ಕನ್ನಡವನ್ನು ಹೇಗೆ ರೂಪಿಸಬೇಕು ಎಂಬುದರ ಕುರಿತ ಮಾರ್ಗದರ್ಶಿ ಸೂತ್ರಗಳು ಇದರಲ್ಲಿವೆ' ಎಂದು ಮಾಹಿತಿ ನೀಡಿದರು.

ಲೇಖಕ ರುದ್ರಪ್ಪ ಹನಗವಾಡಿ, 'ಎಸ್.ಜಿ.ಸಿದ್ದರಾಮಯ್ಯನವರು ತಮ್ಮ ಕವಿ ಮನಸ್ಸಿನ ಮೂಲಕ ಮೆಟ್ರೊ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳ ಮನ ಒಲಿಸಿ ಅಲ್ಲಿ ಕನ್ನಡ ಭಾಷೆ ಬಳಸುವಂತೆ ಮಾಡಿದ್ದರು. ಕನ್ನಡ ಅನುಷ್ಠಾನಕ್ಕೆ ತಾತ್ಸಾರ ತೋರಿದ 350 ಅಧಿಕಾರಿಗಳಿಗೆ ನೋಟಿಸ್ ನೀಡಿದ್ದು ಅವರ ಕಾರ್ಯದಕ್ಷತೆಗೆ ಸಾಕ್ಷಿ' ಎಂದರು.

ನಾಟಕಕಾರ ಪ್ರೊ.ಕೆ.ವೈ. ನಾರಾಯಣಸ್ವಾಮಿ, 'ಬೆಂಗಳೂರಿನಲ್ಲಿ 250ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳಿವೆ. ಆದರೆ, ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ 200ಕ್ಕಿಂತಲೂ ಕಡಿಮೆ. ಕನ್ನಡದ ಮೂಲಕ ಲೋಕ ಅರಿಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನಿರಾಕರಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, 'ರಾಜ್ಯಗಳ ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿದರೆ ಮಾತ್ರ ದೇಶ ಉಳಿಯುತ್ತದೆ. ಇಲ್ಲದಿದ್ದರೆ ಆಂತರಿಕ ಯುದ್ಧ ಶುರುವಾಗುವ ಅಪಾಯವಿದೆ' ಎಂದು ಎಚ್ಚರಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪುಸ್ತಕ ಬಿಡುಗಡೆ ಮಾಡಿದರು.

ವೂಡೇ ಪಿ.ಕೃಷ್ಣ (ಎಡದಿಂದ ನಾಲ್ಕನೆಯವರು) ಹಾಗೂ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಪುಸ್ತಕದ ಕುರಿತು ಸಮಾಲೋಚನೆ ನಡೆಸಿದರು. (ಎಡದಿಂದ) ರುದ್ರಪ್ಪ ಹನಗವಾಡಿ, ಅಸ್ಮಿತೆ ಪ್ರಕಾಶನದ ಆರ್.ಪೂರ್ಣಿಮಾ, ಲೇಖಕಿ ವಸುಂಧರಾ ಭೂಪತಿ, ವೀರಶೆಟ್ಟಿ ಬಿ.ಗಾರಂಪಳ್ಳಿ ಹಾಗೂ ಬಿಬಿಎಂಪಿಯ ಜಂಟಿ ಆಯುಕ್ತ ಕೆ.ಮುರಳೀಧರ ಇದ್ದಾರೆ– ಪ್ರಜಾವಾಣಿ ಚಿತ್ರ

### ಪುಸ್ತಕ ಪರಿಚಯ

**ಪುಸ್ತಕದ ಹೆಸರು:** ಕನ್ನಡ ಅವಲೋಕನ
**ಸಂಪಾದನೆ:** ಲಕ್ಷ್ಮಣ ಕೊಡಸೆ ಮತ್ತು ವೀರಶೆಟ್ಟಿ ಬಿ.ಗಾರಂಪಳ್ಳಿ
**ಪುಟಗಳ ಸಂಖ್ಯೆ:** 438
**ದರ:** ₹400
**ಪ್ರಕಾಶಕರು:** ಅಸ್ಮಿತೆ ಪ್ರಕಾಶನ

# 'ಜಾಗತಿಕ ಪಾರಂಪರಿಕ ಔಷಧ ಕೇಂದ್ರ'ಕ್ಕೆ ನಾಳೆ ಶಂಕುಸ್ಥಾಪನೆ

**ನವದೆಹಲಿ (ಪಿಟಿಐ):** 'ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಪಾರಂಪರಿಕ ಔಷಧ ಕೇಂದ್ರ'ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 19ರಂದು ಗುಜರಾತ್‌ನ ಬನಾಸಕಾಂತಾದಲ್ಲಿ ಶಂಕುಸ್ಥಾಪನೆ ನೆರವೇರಿಸುವರು.

ಈ ಕುರಿತು ಭಾನುವಾರ ಟ್ವೀಟ್ ಮಾಡಿರುವ ಅವರು, 'ಪಾರಂಪರಿಕ ಔಷಧ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸುತ್ತಿರುವುದು ಪ್ರತಿಯೊಬ್ಬ ಭಾರತೀಯನಿಗೆ ಹೆಮ್ಮೆಯ ವಿಷಯ. ಪಾರಂಪರಿಕ ಔಷಧಗಳನ್ನು ಜಾಗತಿಕ ಮಟ್ಟಕ್ಕೆ ಒಯ್ಯುವ ಪ್ರಯತ್ನಗಳಿಗೆ ಈ ಕೇಂದ್ರ ಶಕ್ತಿ ತುಂಬಲಿದೆ' ಎಂದಿದ್ದಾರೆ.

2020ರ ನವೆಂಬರ್‌ನಲ್ಲಿ ನಡೆದಿದ್ದ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ವರ್ಚುವಲ್‌ವಾಗಿ ಭಾಗವಹಿಸಿದ್ದ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್ ಗೆಬ್ರೆಯಸಸ್ ಅವರು, ಭಾರತದಲ್ಲಿ 'ಡಬ್ಲ್ಯುಎಚ್‌ಒ ಜಾಗತಿಕ ಪಾರಂಪರಿಕ ಔಷಧ ಕೇಂದ್ರ' ಸ್ಥಾಪಿಸಲಾಗುವುದು ಎಂದು ಘೋಷಿಸಿದ್ದರು.

## ನಗರದಲ್ಲಿ ಇಂದು

**ವಕೀಲರ ಸಂಘದ ವಾರ್ಷಿಕ ಕ್ರೀಡಾಕೂಟ:** ಉದ್ಘಾಟನೆ–ರಂಗಸ್ವಾಮಿ ನಟರಾಜ್, ಅತಿಥಿಗಳು–ಬಿ.ಸಿ.ರಮೇಶ್, ಅಧ್ಯಕ್ಷತೆ–ವಿವೇಕ್ ಸುಬ್ಬಾರೆಡ್ಡಿ, ಸ್ಥಳ–ವೈಎಂಸಿಎ ಕ್ರೀಡಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 10

**ಜೀವರಾಜ್ ಆಳ್ವ ಜನ್ಮದಿನ:** ಅತಿಥಿಗಳು–ಬಿ.ಟಿ.ಲಲಿತಾ ನಾಯಕ್, ಕೆ.ಎಂ.ಪಾಲಾಕ್ಷ, ಉದಯಶಂಕರ್, ಆಯೋಜನೆ–ಜನತಾ ಪಾರ್ಟಿ, ಸ್ಥಳ–ಭಾಷ್ಯ ವೃತ್ತ, ಜೀವರಾಜ್ ಆಳ್ವ ರಸ್ತೆ, ಬೆಳಿಗ್ಗೆ 11

**ಮಾಸ್ತಿ ಭವನ ಶಿಲಾನ್ಯಾಸ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಸಚಿವ ವಿ.ಸುನೀಲ್ ಕುಮಾರ್, ಎಸ್.ಟಿ.ಸೋಮಶೇಖರ್, ಸಾಹಿತಿ ಚಂದ್ರಶೇಖರ ಕಂಬಾರ, ಮಾವಿನಕೆರೆ ರಂಗನಾಥನ್, ಆಯೋಜನೆ–ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಸ್ಥಳ–ಮಾಸ್ತಿ ಭವನ, ಜ್ಞಾನಭಾರತಿ ಬಡಾವಣೆ, ನಾಗದೇವನಹಳ್ಳಿ, ಮಧ್ಯಾಹ್ನ 12

**'ದೇಸಿ ಆಹಾರ–ದೇಹದ ಆರೋಗ್ಯಕ್ಕೆ ಆಧಾರ' ಉಪನ್ಯಾಸ:** ಆಹಾರ ತಜ್ಞ ಡಾ.ಖಾದರ್, ಆಯೋಜನೆ ಮತ್ತು ಸ್ಥಳ–ಗ್ರಾಮೀಣ ಅಂಗಡಿ, ಅಕ್ಷಯನಗರ–ಹುಳಿಮಾವು, ಬನ್ನೇರುಘಟ್ಟ ರಸ್ತೆ, ಸಂಜೆ 4.30

**84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ:** ಕರ್ನಾಟಕ ಸಂಗೀತ ಕಾರ್ಯಕ್ರಮ–ವಿದ್ಯಾಭೂಷಣ, ಚಾರುಲತಾ ಆರ್., ಬಿ.ಸಿ.ಮಂಜುನಾಥ್, ಸುಕನ್ಯಾ ರಾಂಗೋಪಾಲ್, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ವಿದ್ಯಾಭೂಷಣ

**'ಹಳಗನ್ನಡ ಕಾವ್ಯ ಮತ್ತು ಶಾಸನ ಅಧ್ಯಯನ' ತರಗತಿಗಳ ಉದ್ಘಾಟನೆ:** ಪಿ.ವಿ.ನಾರಾಯಣ್, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಬಿ.ರಾಮಸ್ವಾಮಿ ಸಭಾಂಗಣ, ಸಂಜೆ 5

**'ವಿ ಸ್ಪೀಕ್ ಟೂ' ವಿಚಾರ ಸಂಕಿರಣ:** ಮಾತನಾಡುವವರು–ಚಿತ್ರಾ, ಇಂದಿರಾ, ಇಂದುಮತಿ, ಮಹೇಶ್, ರಾಜ್‌ಕುಮಾರ್, ವಲ್ಲಿ, ಬಾಬು ಮ್ಯಾಥ್ಯು, ಆಯೋಜನೆ–ವಿವಿಧ ಸಂಘ ಸಂಸ್ಥೆಗಳು, ಸ್ಥಳ–ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಸೆಟಲ್‌ಮೆಂಟ್ಸ್ (ಐಐಎಚ್‌ಎಸ್), ಸದಾಶಿವನಗರ, ಸಂಜೆ 6

### ತಾಂತ್ರಿಕ ಸಮಸ್ಯೆಯ ಕಾರಣ ಯೋಜನೆಯ ಟೆಂಡರ್ ಮತ್ತೆ ಮುಂದೂಡಿಕೆ

# ಬಿಡಲೊಲ್ಲದು ಪಿಆರ್‌ಆರ್ ಯೋಜನೆಗೆ ಹಿಡಿದ ಗ್ರಹಣ

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ಬಹುನಿರೀಕ್ಷಿತ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಕಾಮಗಾರಿಗೆ ಹಿಡಿದ ಗ್ರಹಣ ಮುಗಿಯುವ ಲಕ್ಷಣ ಕಾಣಿಸುತ್ತಿಲ್ಲ. ಈ ಕಾಮಗಾರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಟೆಂಡರ್ ಆಹ್ವಾನಿಸಿದಾಗ ಈ ಯೋಜನೆಯ ಅಡ್ಡಿ ಆತಂಕಗಳೆಲ್ಲ ದೂರವಾಗಿ ಯೋಜನೆ ಕೊನೆಗೂ ಕೈಗೂಡುವ ಭರವಸೆ ಮೂಡಿತ್ತು. ಆದರೆ, ತಾಂತ್ರಿಕ ಕಾರಣ ನೀಡಿ ಟೆಂಡರ್ ಪ್ರಕ್ರಿಯೆಯನ್ನು ಬಿಡಿಎ ಮತ್ತೆ ಮುಂದೂಡಿದೆ.

ಈ ಯೋಜನೆಗೆ 2022ರ ಮಾರ್ಚ್ 31ರಂದು ಬಿಡಿಎ ಟೆಂಡರ್ ಆಹ್ವಾನಿಸಿತ್ತು. ಅದರ ಪ್ರಕಾರ ಬಿಡ್ ಪೂರ್ವ ಸಭೆ ಇದೇ ಸೋಮವಾರ (ಏ.18ರಂದು) ನಿಗದಿಯಾಗಿತ್ತು. ಬಿಡ್ ಸಲ್ಲಿಸುವುದಕ್ಕೆ ಮೇ 18 ಕೊನೆಯ ದಿನವಾಗಿತ್ತು. ಮೇ 20ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲು ಪ್ರಾಧಿಕಾರವು ನಿರ್ಧರಿಸಿತ್ತು. ಟೆಂಡರ್‌ಗೆ ಅರ್ಜಿ ಸಲ್ಲಿಸುವವರು ₹ 150 ಕೋಟಿ ಮೊತ್ತದ ಭದ್ರತಾ ಠೇವಣಿ ಇಡಬೇಕಿತ್ತು. ಈಗ ಟೆಂಡರ್ ಪ್ರಕ್ರಿಯೆಯನ್ನೇ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕಗಳನ್ನು ಇನ್ನೂ ಪ್ರಕಟಿಸಿಲ್ಲ.

ಟೆಂಡರ್ ಮುಂದೂಡಿಕೆ ಕುರಿತು ಪ್ರಕಟಣೆ ನೀಡಿರುವ ಬಿಡಿಎ, 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://eproc.karnataka.gov.in) ನಿಗದಿತ ಸಮಯದಲ್ಲಿ ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ ಪರಿಷ್ಕೃತ ದಿನಾಂಕಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುತ್ತದೆ' ಎಂದಷ್ಟೇ ಮಾಹಿತಿ ನೀಡಿದೆ.

ಪ್ರಜಾವಾಣಿ ವಿಶೇಷ

ಸುಮಾರು 74 ಕಿ.ಮೀ ಉದ್ದದ ಹಾಗೂ ಎಂಟು ಪಥಗಳ ಪಿಆರ್‌ಆರ್ ಸರ್ವಿಸ್ ರಸ್ತೆಗಳನ್ನೂ ಒಳಗೊಳ್ಳಲಿದೆ. 100 ಮೀ ಅಗಲದ ರಸ್ತೆ ಹಾಗೂ ಕ್ಲೊವರ್ ಎಲೆಗಳ ಮಾದರಿಯ ಜಂಕ್ಷನ್‌ಗಳು, ಸೇತುವೆಗಳು, ಮೇಲ್ಸೇತುವೆಗಳು, ರೈಲ್ವೆ ಕೆಳ ಸೇತುವೆಗಳು, ರೈಲ್ವೆ ಮೇಲ್ಸೇತುವೆಗಳು ಈ ಯೋಜನೆ ಅಡಿಯಲ್ಲಿ ನಿರ್ಮಾಣವಾಗಲಿವೆ.

ನಗರದ ಹೊರವಲಯದಲ್ಲಿ ಪಿಆರ್‌ಆರ್ ನಿರ್ಮಿಸುವ ಪ್ರಸ್ತಾವನೆಯನ್ನು ಬಿಡಿಎ 2006ರ ನ.27ರಂದು ಸಲ್ಲಿಸಿತ್ತು. ಈ ಯೋಜನೆಗೆ ಸಂಬಂಧಿಸಿ ಅನೇಕ ವ್ಯಾಜ್ಯಗಳಿದ್ದವು. 2018ರ ನ.24ರಲ್ಲಿ ರಾಜ್ಯ ಸರ್ಕಾರವು ₹ 5,616.41 ಕೋಟಿ ವೆಚ್ಚದ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡಿತು. ಅದರಲ್ಲಿ ಶೇ 16ರಷ್ಟು ವೆಚ್ಚವನ್ನು (₹ 901.72 ಕೋಟಿ) ರಾಜ್ಯ ಸರ್ಕಾರವು ಭರಿಸಲಿದೆ. ಇನ್ನುಳಿದ ಶೇ 84ರಷ್ಟು ವೆಚ್ಚವನ್ನು ಭರಿಸಲು (₹ 4,714.69 ಕೋಟಿ) ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯಿಂದ (ಜೈಕಾ) ಮೂರು ಹಂತಗಳಲ್ಲಿ ಸಾಲ ಪಡೆಯಲಾಗುತ್ತದೆ ಎಂದು ಹೇಳಲಾಗಿತ್ತು. ಈಗ ಯೋಜನೆಯ ಸ್ವರೂಪವನ್ನು ಮತ್ತೆ ಬದಲಾಯಿಸಲಾಗಿದೆ. ಜೈಕಾದಿಂದ ಸಾಲ ಪಡೆಯುವ ಪ್ರಸ್ತಾವದಿಂದ ಬಿಡಿಎ ಹಿಂದೆ ಸರಿದಿದೆ.

ಮಾರ್ಚ್ 31ರಂದು ಆಹ್ವಾನಿಸಲಾದ ಟೆಂಡರ್ ದಾಖಲೆಗಳ ಪ್ರಕಾರ, ಬಿಡಿಎಯು ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಗುತ್ತಿಗೆದಾರ ಸಂಸ್ಥೆಯೇ ರಸ್ತೆಯ ವಿನ್ಯಾಸ ರೂಪಿಸಿ, ಬಂಡವಾಳ ಹೂಡಿಕೆ ಮಾಡಿ, ರಸ್ತೆಯನ್ನು ನಿರ್ಮಿಸಿ, 50 ವರ್ಷಗಳ ಕಾಲ ನಿರ್ವಹಿಸಿ ನಂತರ ಬಿಡಿಎಗೆ ಹಸ್ತಾಂತರ ಮಾಡಬೇಕಿದೆ. ಗುತ್ತಿಗೆದಾರ ಸಂಸ್ಥೆಯು ಬಿಡಿಎ ಜೊತೆ 50 ವರ್ಷಗಳ ಕಾಲ ವರಮಾನ ಹಂಚಿಕೊಳ್ಳುವ ಮಾದರಿಯಲ್ಲಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಗೆ 2,560 ಎಕರೆಗಳಷ್ಟು ಜಮೀನನ್ನು ಸ್ವಾದೀನಪಡಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ತಗಲುವ ವೆಚ್ಚವನ್ನೂ ಗುತ್ತಿಗೆದಾರ ಸಂಸ್ಥೆಯೇ ಭರಿಸಬೇಕಾಗುತ್ತದೆ.

**ಸುಪ್ರೀಂ ಕೋರ್ಟ್ ಅಸಮಾಧಾನ:** ಪಿಆರ್‌ಆರ್ ಯೋಜನೆ ಅನುಷ್ಠಾನದ ವಿಚಾರದಲ್ಲಿ ಅನಗತ್ಯ ವಿಳಂಬವಾಗುತ್ತಿರುವ ಕುರಿತು ಸುಪ್ರೀಂ ಕೋರ್ಟ್ ಕೂಡಾ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಯೋಜನೆಯ ಅನುಷ್ಠಾನದ ವಸ್ತುಸ್ಥಿತಿಯ ವರದಿಗೆ ಪ್ರತಿಕ್ರಿಯಿಸಿದ್ದ ಸುಪ್ರೀಂ ಕೋರ್ಟ್ ಪೀಠ, 'ಪಿಆರ್‌ಆರ್ ಯೋಜನೆ ಕುರಿತು 2006ರಲ್ಲೇ ಬಿಡಿಎ ಪ್ರಸ್ತಾವನೆ ಸಲ್ಲಿಸಿದ್ದರೂ, ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವುದನ್ನು ಹೊರತಾಗಿ ಬೇರೆ ಯಾವುದೇ ಪ್ರಗತಿ ಆಗಿಲ್ಲ ಎಂಬುದು ಸ್ಪಷ್ಟ. ಮೂರು ಎಕರೆ 21 ಗುಂಟೆ ಜಮೀನನ್ನು ಮಾತ್ರ ಸ್ವಾಧೀನಪಡಿಸಲಾಗಿದೆ' ಎಂದು 2021ರ ಅಕ್ಟೋಬರ್ 26 ರಂದು ಅಸಮಾಧಾನ ವ್ಯಕ್ತಪಡಿಸಿತ್ತು.

### ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಅನುಮೋದನೆ ಬಾಕಿ?

ಪಿಆರ್‌ಆರ್ ಯೋಜನೆಯನ್ನು ಅನುಮೋದನೆಗಾಗಿ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗೆ ಬಿಡಿಎ ವರ್ಷದ ಹಿಂದೆ ಸಲ್ಲಿಸಿತ್ತು. ಆದರೆ, ಅನುಮೋದನೆ ಸಿಕ್ಕಿರಲಿಲ್ಲ. ಈ ಇಲಾಖೆಯ ಅನುಮೋದನೆ ಇಲ್ಲದೆಯೇ ಟೆಂಡರ್ ಕರೆದಿದ್ದಕ್ಕೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಮಾರ್ಚ್ 31ರಂದು ಕರೆದ ಟೆಂಡರ್ ಹಿಂಪಡೆಯಲಾಗಿದೆ. ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಅನುಮೋದನೆ ಸಿಕ್ಕಿದ ಬಳಿಕ ಮತ್ತೆ ಟೆಂಡರ್ ಕರೆಯಲಾಗುತ್ತದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

### ಪಿಆರ್‌ಆರ್ ಉದ್ದ ಹೆಚ್ಚಳ

ಈ ಹಿಂದಿನ ಯೋಜನೆ ಪ್ರಕಾರ ಪಿಆರ್‌ಆರ್‌ನ ಒಟ್ಟು ಉದ್ದ 65 ಕಿ.ಮೀ ಇತ್ತು. ಆದರೆ, ನೈಸ್ ರಸ್ತೆ ಹಾಗೂ ಪಿಆರ್‌ಆರ್ ಸೇರುವಲ್ಲಿ ಕ್ಲೊವರ್ ಎಲೆಯ ಮಾದರಿಯ ಜಂಕ್ಷನ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹಾಗಾಗಿ ರಸ್ತೆಯ ಉದ್ದ 74 ಕಿ.ಮೀ.ಗೆ ಹೆಚ್ಚಳವಾಗಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

ಯೋಜನೆಯ ಅಂದಾಜು ವೆಚ್ಚವೂ ₹ 21 ಸಾವಿರ ಕೋಟಿಯಿಂದ ₹ 23.5 ಸಾವಿರ ಕೋಟಿಗೆ ಹೆಚ್ಚಳವಾಗಿದೆ. ರಸ್ತೆ ನಿರ್ಮಾಣಕ್ಕೆ ತಗಲುವ ವೆಚ್ಚ ಈ ಹಿಂದೆ ಅಂದಾಜಿಸಿದಂತೆ ₹ 5,616.41 ಕೋಟಿಯೇ ಇದೆ. ಆದರೆ, ರಸ್ತೆಯ ಉದ್ದ ಹೆಚ್ಚಳವಾಗಿದ್ದರಿಂದ ಸುಮಾರು 750 ಎಕರೆಗಳಷ್ಟು ಹೆಚ್ಚುವರಿ ಭೂಸ್ವಾಧೀನದ ಅಗತ್ಯವಿದೆ. ಹಾಗಾಗಿ ಭೂಸ್ವಾಧೀನಕ್ಕೆ ₹ 18ಸಾವಿರ ಕೋಟಿ ವೆಚ್ಚವಾಗಬಹುದು. ಯೋಜನೆ ವೆಚ್ಚ ಪರಿಷ್ಕರಣೆ ಆಗಲಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಯೂ ಪೂರ್ಣಗೊಂಡಿಲ್ಲ. ಇದಕ್ಕೂ ಮತ್ತಷ್ಟು ಸಮಯ ತಗಲಬಹುದು' ಎಂದು ಅವರು ತಿಳಿಸಿದರು.

## ವಿದ್ಯುತ್, ಪಿಎನ್‌ಜಿ ಚಿತಾಗಾರ ಬಳಕೆ ಪರಿಶೀಲನೆಗೆ ಸೂಚನೆ

**ನವದೆಹಲಿ (ಪಿಟಿಐ):** ಶವಗಳನ್ನು ಸುಡಲು ಪರಿಸರ ಸ್ನೇಹಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ.

ಶವಗಳನ್ನು ಸುಡಲು ಕಟ್ಟಿಗೆ ಬಳಸುತ್ತಿರುವುದರಿಂದ ವಾಯು ಮಾಲಿನ್ಯ ಹೆಚ್ಚುತ್ತಿದೆ. ಹೀಗಾಗಿ, ಈ ಕಾರ್ಯಕ್ಕೆ ವಿದ್ಯುತ್ ಅಥವಾ ಪಿಎನ್‌ಜಿ ಚಿತಾಗಾರಗಳನ್ನು ಬಳಕೆ ಕಾರ್ಯಸಾಧುವೇ ಎಂಬುದನ್ನು ಪರಿಶೀಲಿಸುವಂತೆ ಎನ್‌ಜಿಟಿ ಚೇರಮನ್ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯಲ್ ನೇತೃತ್ವದ ನ್ಯಾಯಪೀಠ ಸೂಚಿಸಿತು.

ನ್ಯಾಯಮೂರ್ತಿಗಳಾದ ಸುಧೀರ್ ಅಗರವಾಲ್ ಹಾಗೂ ಅರುಣಕುಮಾರ್ ತ್ಯಾಗಿ ಈ ಪೀಠದಲ್ಲಿದ್ದಾರೆ.

'ಬೆಂಕಿಯನ್ನು ಬಳಸಿ ಶವಸಂಸ್ಕಾರ ನಡೆಸುವುದಕ್ಕೆ ಧಾರ್ಮಿಕವಾಗಿ ಹೆಚ್ಚು ಮಹತ್ವ ಇದೆ. ಆದರೆ, ಬಯಲಲ್ಲಿ ನಡೆಸುವ ಒಂದು ಶವದ ದಹನಕ್ಕೆ 350–400 ಕೆ.ಜಿಯಷ್ಟು ಕಟ್ಟಿಗೆ ಬೇಕಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಶವಸಂಸ್ಕಾರಕ್ಕೆ ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ಎಂಬ ನಮ್ಮ ಸಲಹೆಯ ಹಿಂದೆ ಯಾವುದೇ ಧಾರ್ಮಿಕ ನಂಬಿಕೆಗೆ ಧಕ್ಕೆ ತರುವ ಉದ್ದೇಶ ಇಲ್ಲ' ಎಂದು ಸ್ಪಷ್ಟಪಡಿಸಿದ ಪೀಠ, 'ಈಗ ರೂಢಿಯಲ್ಲಿರುವ ವಿಧಾನಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕು, ಪರಿಸರಸ್ನೇಹಿ ವಿಧಾನಗಳ ಬಳಕೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿತು.

## ಅಮರನಾಥ ಯಾತ್ರೆ: 33,795 ಯಾತ್ರಿಕರು ನೋಂದಣಿ

**ಜಮ್ಮು(ಪಿಟಿಐ):** ದಕ್ಷಿಣ ಕಾಶ್ಮೀರದಲ್ಲಿರುವ ಅಮರನಾಥ ದೇವಾಲಯದ ವಾರ್ಷಿಕ ಯಾತ್ರೆಗೆ ದೇಶದಾದ್ಯಂತ 33 ಸಾವಿರಕ್ಕೂ ಅಧಿಕ ಯಾತ್ರಿಕರು ನೋಂದಾಯಿಸಿಕೊಂಡಿದ್ದಾರೆ.

43 ದಿನಗಳ ಯಾತ್ರೆ ಜೂನ್ 30ರಿಂದ ಆರಂಭಗೊಳ್ಳಲಿದ್ದು, ಶನಿವಾರದ ವರೆಗೆ 33,795 ಜನರು ನೋಂದಾಯಿಸಿಕೊಂಡಿದ್ದು, ಇದರಲ್ಲಿ 22,229 ಮಂದಿ ಆನ್‌ಲೈನ್ ಹಾಗೂ 11,566 ಜನರು ಆಫ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಅಮರನಾಥ ದೇವಾಲಯ ಮಂಡಳಿಯ(ಎಸ್‌ಎಎಸ್‌ಬಿ) ಸಿಇಒ ನಿತೀಶ್ ಕುಮಾರ್ ತಿಳಿಸಿದ್ದಾರೆ.

## ದೆಹಲಿಯಲ್ಲಿ 'ಸ್ವಾತಂತ್ರ್ಯ ಸಮರ ಕರುನಾಡು ಅಮರ' ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಂಗ ವಿಜಯಾ ತಂಡದವರು 'ಸ್ವಾತಂತ್ರ್ಯ ಸಮರ ಕರುನಾಡು ಅಮರ' ಎಂಬ ನಾಟಕ ರಚಿಸಿದ್ದು ಇದನ್ನು ನವದೆಹಲಿಯಲ್ಲಿ ಪ್ರದರ್ಶಿಸಲಿದ್ದಾರೆ.

'ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ರಾಜ್ಯದ ವೀರ ಸೇನಾನಿಗಳ ತ್ಯಾಗ, ಬಲಿದಾನವನ್ನು ಸಾರುವುದು ನಾಟಕದ ಉದ್ದೇಶ. ದೆಹಲಿಯ ಕರ್ನಾಟಕ ಸಂಘದ 75ನೇ ವರ್ಷಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮದಲ್ಲಿ ನಾಟಕ ಪ್ರದರ್ಶಿಸಲಾಗುತ್ತಿದೆ' ಎಂದು ರಂಗ ವಿಜಯಾ ತಂಡದ ಗೌರವ ಅಧ್ಯಕ್ಷೆ ಪಲ್ಲವಿ ಮಣಿ ತಿಳಿಸಿದ್ದಾರೆ.

'ಡಾ. ಟಿ. ಲಕ್ಷ್ಮಿನಾರಾಯಣ ಅವರು ರಚಿಸಿರುವ ಈ ನಾಟಕವನ್ನು ಮಾಲೂರು ವಿಜಿ ನಿರ್ದೇಶಿಸಿದ್ದಾರೆ' ಎಂದು ಪಲ್ಲವಿ ಅವರು ಹೇಳಿದ್ದಾರೆ.

## ಹೈ ಟೆನ್ಷನ್ ವಿದ್ಯುತ್ ಮಾರ್ಗ: ಕರ್ನಾಟಕ ಮುಖ್ಯ ಕಾರ್ಯದರ್ಶಿಗೆ ಎನ್‌ಜಿಟಿ ನಿರ್ದೇಶನ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಬ್ಯಾಟರಾಯನಪುರ ಉಪ ವಿಭಾಗದ ಥಣಿಸಂದ್ರ ವಾರ್ಡ್‌ನ ಅಶ್ವತ್ಥನಗರದಲ್ಲಿ ಹಾದುಹೋಗಿರುವ ಹೈ ಟೆನ್ಷನ್ ವಿದ್ಯುತ್ ಮಾರ್ಗದ ಸಮೀಪವೇ ಮನೆಗಳನ್ನು ಕಟ್ಟಿಸಿಕೊಂಡು ಇರುವ ಸಾರ್ವಜನಿಕರ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕರ್ನಾಟಕ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದೆ.

ವಾರ್ಡ್‌ನಲ್ಲಿನ ಒಳಚರಂಡಿ, ಎಸ್‌ಟಿಪಿ (ಕೊಳಚೆ ನೀರು ಸಂಸ್ಕರಣಾ ಘಟಕ), ಮಳೆ ನೀರು ಹರಿಯುವ ಚರಂಡಿಗಳ ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯಲ್ ನೇತೃತ್ವದ ಪ್ರಧಾನ ಪೀಠ ಬಿಬಿಎಂಪಿಗೆ ಸೂಚಿಸಿದೆ.

ಅಶ್ವತ್ಥನಗರದಲ್ಲಿ ಸುರಕ್ಷತಾ ಅಂತರವಿಲ್ಲದೆ ಹೈ ಟೆನ್ಷನ್ ಮಾರ್ಗದ ಸಮೀಪವೇ ಅಕ್ರಮವಾಗಿ ಮನೆ ಮತ್ತು ಅಂಗಡಿಗಳನ್ನು ನಿರ್ಮಿಸಲಾಗಿದೆ ಎಂದು ಆರೋಪಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಪೀಠವು ಈ ಆದೇಶ ನೀಡಿದೆ. ಬೆಂಗಳೂರಿನ ಕೆರೆಗಳಿಗೆ ಸಂಪರ್ಕ ಕಲ್ಪಿಸಿರುವ ಮಳೆ ನೀರಿನ ಚರಂಡಿಗಳನ್ನೂ ಒತ್ತುವರಿ ಮಾಡಲಾಗಿದ್ದು, ಸಂಸ್ಕರಿಸದ ತ್ಯಾಜ್ಯವನ್ನು ಚರಂಡಿಗೆ ಬಿಡಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ವಾರ್ಡ್‌ನಲ್ಲಿ ಶೇ 90 ರಷ್ಟು ಒಳಚರಂಡಿ ಪೂರ್ಣಗೊಂಡಿದೆ ಮತ್ತು ಎಸ್‌ಟಿಪಿ ನಿರ್ಮಾಣ ಪ್ರಗತಿಯಲ್ಲಿದೆ ಎಂಬ ಬಿಬಿಎಂಪಿಯ ಹೇಳಿಕೆಯನ್ನು ಆಲಿಸಿದ ಎನ್‌ಜಿಟಿ, 'ಇಡೀ ಒಳಚರಂಡಿ ಕಾಮಗಾರಿಗಳು ಮತ್ತು ಎಸ್‌ಟಿಪಿ ಸಮನಾಗಿ ಏಕಕಾಲದಲ್ಲಿಯೇ ಆಗಬೇಕಿದೆ. ಮಳೆ ನೀರು ಅಥವಾ ಚರಂಡಿಗಳ ಮೂಲಕ ಹರಿಯುವ ಕಲುಷಿತಗೊಳ್ಳದ ನೀರಿನಿಂದ ಮಾತ್ರ ಜಲಮೂಲಗಳು, ಕೆರೆಗಳು ಸರೋವರಗಳು ಕಲುಷಿತಗೊಳ್ಳುವುದಿಲ್ಲ ಎಂದು ಹೇಳಿದೆ.

ಬಿಬಿಎಂಪಿ ಮತ್ತು ಬಿಡಬ್ಲ್ಯುಎಸ್‌ಎಸ್‌ಬಿಯಿಂದ ಸಂಸ್ಕರಿಸದ ಕೊಳಚೆ ನೀರನ್ನು ಒಳಚರಂಡಿ ಸಂಸ್ಕರಣಾ ಘಟಕಕ್ಕೆ ವಿಲೇವಾರಿ ಮಾಡಲು ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಮೂಲಕ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಶ್ವತ್ಥನಗರ ಮತ್ತು ಸುತ್ತಮುತ್ತಲಿನ ಪ್ರದೇಶ ಹಾಗೂ ಇತರ ಪ್ರದೇಶಗಳಲ್ಲಿ ಮಳೆ ನೀರನ್ನು ವಿಲೇವಾರಿ ಮಾಡಲು ಆರ್‌ಸಿಸಿ ಚರಂಡಿಗಳನ್ನು ನಿರ್ಮಿಸಲಾಗಿದೆ. ವಾರ್ಡ್ ನಂ. 06 (ಥಣಿಸಂದ್ರ) ಮತ್ತು ಪರಿಸರ ಸಂರಕ್ಷಣೆಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

'ಅಶ್ವತ್ಥನಗರದಲ್ಲಿರುವ ಈ ಮನೆಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವಿದ್ಯುತ್ ಸಂಪರ್ಕ ಒದಗಿಸಿದೆ. ಹೈ ಟೆನ್ಷನ್ ಮಾರ್ಗಗಳಿಗೆ ಸಂಬಂಧಿಸಿದ ಯಾವುದೇ ಉಲ್ಲಂಘನೆಗಳಿದ್ದರೆ ಕೆಪಿಟಿಸಿಎಲ್ ನಿಯಮಾನುಸಾರ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಶ್ವತ್ಥನಗರ ಮತ್ತು ಇತರ ಪ್ರದೇಶಗಳಲ್ಲಿ ಇಂತಹ ಹಲವು ಪ್ರಕರಣಗಳು ನಡೆದಿವೆ. ಹೈ ಟೆನ್ಷನ್ ಮಾರ್ಗಗಳ ಕೆಳಗಿರುವ, ಹತ್ತಿರದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಬೆಸ್ಕಾಂಗೆ ಪತ್ರ ಬರೆಯಲಾಗಿದೆ ಎಂದೂ ಬಿಬಿಎಂಪಿ ಹೇಳಿದೆ.

ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಕಾಮಗಾರಿ • ಗ್ರಾಹಕರಿಲ್ಲದೆ ವ್ಯಾಪಾರಿಗಳ ಅಳಲು

# ‘ವೈಟ್‌ಟಾಪಿಂಗ್’: ಮಂಕು ಬಡಿದ ವ್ಯಾಪಾರ

• ಮನೋಹರ್ ಎಂ.

**ಬೆಂಗಳೂರು:** ಮಲ್ಲೇಶ್ವರದ ಸಂಪಿಗೆ ಚಿತ್ರಮಂದಿರದಿಂದ 18ನೇ ಅಡ್ಡರಸ್ತೆಯವರೆಗೆ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯು ರಸ್ತೆಯುದ್ದಕ್ಕೂ ನಡೆಯುತ್ತಿದ್ದ ವ್ಯಾಪಾರದ ಮೇಲೆ ತೀವ್ರ ಪರಿಣಾಮ ಬೀರಿದೆ. ಗ್ರಾಹಕರ ಕೊರತೆಯಿಂದ ಇಲ್ಲಿನ ವಾಣಿಜ್ಯ ಮಳಿಗೆಗಳು ಹಾಗೂ ಬೀದಿ ವ್ಯಾಪಾರ ಮಂಕಾಗಿದೆ.

ಸಂಪಿಗೆ ರಸ್ತೆ ವಾಣಿಜ್ಯ ಚಟುವಟಿಕೆ ಮತ್ತು ವ್ಯಾಪಾರಕ್ಕೆ ಹೆಸರುವಾಸಿ. ಪ್ರಮುಖ ಆಭರಣ ಮಳಿಗೆಗಳಿರುವ, ವಸ್ತ್ರ ಖರೀದಿ, ತಿಂಡಿ–ತಿನಿಸುಗಳಿಗೂ ಇದು ನೆಚ್ಚಿನ ತಾಣ. ಈ ಕಾರಣದಿಂದ ರಸ್ತೆಯಲ್ಲಿ ಸದಾ ಜನಜಂಗುಳಿ ಇರುತ್ತದೆ. ಕಿರಿದಾದ ರಸ್ತೆ ಆಗಿರುವುದರಿಂದ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶವಿತ್ತು.

ಕಾಮಗಾರಿಗಾಗಿ ಈ ರಸ್ತೆ ನಿರ್ಬಂಧಿಸಿರುವುದರಿಂದ ಮಳಿಗೆಗಳು ಖಾಲಿಯಾಗಿವೆ. ಗ್ರಾಹಕರ ವಾಹನ ನಿಲುಗಡೆ ಹಾಗೂ ಸ್ಥಳೀಯ ನಿವಾಸಿಗಳ ವಾಹನ ಸಂಚಾರಕ್ಕೂ ಅಡ್ಡಿಯಾಗಿದೆ. ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗವನ್ನು ಕಲ್ಪಿಸಲಾಗಿದೆ. ಆದರೆ, ಗ್ರಾಹಕರ ಕೊರತೆಯಿಂದ ಇಲ್ಲಿನ ವ್ಯಾಪಾರ ನೆಲಕಚ್ಚಿದೆ.

‘ರಸ್ತೆ ಬದಿ ಹೂವು ಮಾರಿಕೊಂಡು ಜೀವನ ನಡೆಸುತ್ತಿದ್ದೇನೆ. ಕಾಮಗಾರಿಯಿಂದ ಒಳ್ಳೆಯ ರಸ್ತೆಯೇನೋ ಬರುತ್ತಿದೆ. ಇದಕ್ಕೆ ನನ್ನ ವಿರೋಧವಿಲ್ಲ. ಒಂದು ತಿಂಗಳಿನಿಂದ ವ್ಯಾಪಾರವೇ ಇಲ್ಲ. ರಸ್ತೆ ನಿರ್ಬಂಧಿಸಿರುವುದರಿಂದ ಬೆರಳೆಣಿಕೆಯಷ್ಟು ಗ್ರಾಹಕರು ಬರುತ್ತಿದ್ದಾರೆ’ ಎಂದು ಮಲ್ಲೇಶ್ವರ ಮಾರುಕಟ್ಟೆಯ ಹೂವಿನ ವ್ಯಾಪಾರಿ ವೆಂಕಟೇಶ್ ಸಂಕಟ ಹೊರಹಾಕಿದರು.

‘ಪಾದಚಾರಿ ಮಾರ್ಗ ಕೆಡವಿರುವುದರಿಂದ ವಾಹನ ಓಡಾಟವಿಲ್ಲದ ರಸ್ತೆಯಲ್ಲೇ ಅಂಗಡಿ ಹಾಕಿಕೊಂಡಿದ್ದೇನೆ. ಪ್ರತಿ ವರ್ಷ ಯುಗಾದಿಗೆ ಲಾಭ ಸಿಗುತ್ತಿತ್ತು. ಈ ಯುಗಾದಿಗೆ ವ್ಯಾಪಾರವಿಲ್ಲದೆ, ನಷ್ಟ ಅನುಭವಿಸಿದೆ. ಮೂರು ಹೊತ್ತಿನ ಊಟಕ್ಕೂ ಅಲೆಯುವಂತಾಗಿದೆ’ ಎಂದರು.

‘ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಕಾರಣಕ್ಕೇ ಈ ರಸ್ತೆಯಲ್ಲಿ ಆಭರಣ ಮಳಿಗೆ ತೆರೆದಿದ್ದೇವೆ. ಬಹುತೇಕ ಗ್ರಾಹಕರು ಕಾರುಗಳಲ್ಲೇ ಮಳಿಗೆಗೆ ಬರುತ್ತಾರೆ. ಆದರೆ, ಈಗ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಮಳಿಗೆಗೆ ಬರುವ ಗ್ರಾಹಕರ ಸಂಖ್ಯೆಯೂಕ್ರಮೇಣ ಕಡಿಮೆಯಾಗಿದೆ’ ಎಂದು ಇಲ್ಲಿನ ಆಭರಣ ಮಳಿಗೆಯೊಂದರಲ್ಲಿ ಕೆಲಸ ಮಾಡುವ ಸಿಬ್ಬಂದಿ ಹೇಳಿದರು.

‘ಯುವತಿಯರು ಬಟ್ಟೆ ಖರೀದಿಗೆಂದು ಮಲ್ಲೇಶ್ವರದಲ್ಲಿ ಭೇಟಿ ನೀಡುವ ಪ್ರಮುಖ ರಸ್ತೆಯಿದು. ಈ ರಸ್ತೆಯ ಎರಡೂ ಬದಿ ಬಟ್ಟೆಯ ಅಂಗಡಿಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ ವ್ಯಾಪಾರವೇ ಇಲ್ಲ. ದಿನಕ್ಕೆ ಕನಿಷ್ಠ 30 ಮಂದಿಯಾದರೂ ಬಟ್ಟೆ ಖರೀದಿಸುತ್ತಿದ್ದರು.ಈಗ ನಾಲ್ಕು ಅಥವಾ ಐದು ಮಂದಿಯಷ್ಟೇ ಬರುತ್ತಾರೆ’ ಎಂದು ವ್ಯಾಪಾರಿ ಆಕಾಶ್ ಹೇಳಿದರು.

**ಹೊಸ ರಸ್ತೆ ಬೇಕಿರಲಿಲ್ಲ:** ‘ಹಿಂದಿನ ರಸ್ತೆ ಚೆನ್ನಾಗಿಯೇ ಇತ್ತು. ವಾಹನಗಳು ಸುಗಮವಾಗಿ ಸಂಚರಿಸುತ್ತಿದ್ದವು. ಹಣ ಲೂಟಿ ಮಾಡಲು ಇಂತಹ ಕಾಮಗಾರಿ ನಡೆಸುತ್ತಿದ್ದಾರೆ. ಇದರಿಂದ ಜನರಿಗೆ ಸಮಸ್ಯೆ ತಪ್ಪಿದ್ದಲ್ಲ. ಇಲ್ಲಿ ವೈಟ್‌ಟಾಪಿಂಗ್‌ನ ಅಗತ್ಯವೇ ಇರಲಿಲ್ಲ’ ಎಂದು ಸ್ಥಳೀಯ ನಿವಾಸಿ ರಂಗನಾಥ್ ಆಕ್ಷೇಪ ವ್ಯಕ್ತಪಡಿಸಿದರು.

ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಪಾಲಿಕೆ ಅಧಿಕಾರಿಗಳು ಸಂಪರ್ಕಕ್ಕೆ ಸಿಗಲಿಲ್ಲ.

**ಅಗತ್ಯ ವಸ್ತುಗಳ ಖರೀದಿಗಾಗಿ ಬಂದಿದ್ದೆ. ಬೈಕ್ ಅನ್ನು ಅಲ್ಲೆಲ್ಲೋ ನಿಲ್ಲಿಸಬೇಕಾಯಿತು. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿದರೆ ಅನುಕೂಲ**

**ನಿರಂಜನ್,** ಸಾರ್ವಜನಿಕ

**ವಾಹನದಲ್ಲಿ ಅಂಗಡಿಗೆ ಹಣ್ಣುಗಳನ್ನು ತರಲು ಸಮಸ್ಯೆಯಾಗಿದೆ. ದೂಳಿನ ಸಮಸ್ಯೆ ಇರುವುದರಿಂದ ಬೇಸಿಗೆಯಲ್ಲೂ ಗ್ರಾಹಕರು ಬರುತ್ತಿಲ್ಲ.**

**ಆನಂದ್ ರಾಜ್,**
‘ಈಟ್ ರಾಜಾ’ ಜ್ಯೂಸ್ ಅಂಗಡಿ ಮಾಲೀಕ

ಗ್ರಾಹಕರಿಲ್ಲದೆ ಭಣಗುಡುತ್ತಿರುವ ಮಲ್ಲೇಶ್ವರದ ಹೂವು ಮಾರುಕಟ್ಟೆ ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

**ಅಂಕಿಅಂಶ**

**1.8** ಕಿ.ಮೀ
ಕಾಮಗಾರಿ ನಡೆಯುತ್ತಿರುವ ರಸ್ತೆಯ ಉದ್ದ

**14** ಕೋಟಿ
ಕಾಮಗಾರಿಯ ಅಂದಾಜು ವೆಚ್ಚ

ವೈಟ್‌ಟಾಪಿಂಗ್ ಪ್ರಗತಿಯಲ್ಲಿರುವ ರಸ್ತೆಯಲ್ಲೇ ವಾಹನಗಳ ನಿಲುಗಡೆ –ಪ್ರಜಾವಾಣಿ ಚಿತ್ರ

## ಕ್ಯಾಂಟೀನ್ ಮುಚ್ಚುವ ಸ್ಥಿತಿ

‘ಕೋವಿಡ್‌ನಿಂದ ಎರಡು ವರ್ಷ ಕ್ಯಾಂಟೀನ್ ಮುಚ್ಚಿದ್ದೆ. ಮತ್ತೆ ಚೇತರಿಸಿಕೊಳ್ಳುವಷ್ಟರಲ್ಲಿ ಈ ವೈಟ್‌ಟಾಪಿಂಗ್ ಹೊಡೆತ ನೀಡಿದೆ. ಗ್ರಾಹಕರಿಲ್ಲದೆ ಬದುಕು ಮತ್ತೆ ದುಸ್ತರವಾಗಿದೆ. ಮೊದಲು ದಿನಕ್ಕೆ ₹9 ಸಾವಿರದವರೆಗೆ ವ್ಯಾಪಾರ ಆಗುತ್ತಿತ್ತು. ಈಗ ಕೇವಲ ₹2 ಸಾವಿರದವರೆಗೆ ಆಗುತ್ತಿದೆ. ಇದರಲ್ಲಿ ಬಾಡಿಗೆ ಪಾವತಿ, ಸಿಬ್ಬಂದಿಗೆ ಸಂಬಳ, ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಕ್ಯಾಂಟೀನ್ ಮುಚ್ಚಬೇಕಾದ ಸ್ಥಿತಿಗೆ ತಲುಪಿದ್ದೇನೆ’ ಎಂದು ಈ ರಸ್ತೆಯಲ್ಲಿ ಕ್ಯಾಂಟೀನ್ ನಡೆಸುವ ಶೇಷಾದ್ರಿ ಅಳಲು ತೋಡಿಕೊಂಡರು.

## ಸುದ್ದಿ 2 ನಿಮಿಷ

### ‘ಶಿಕ್ಷಣ ಕ್ಷೇತ್ರದ ಪರಿಣತರಂತೆ ಕೋರ್ಟ್ ವರ್ತಿಸಲಾಗದು’

**ನವದೆಹಲಿ (ಪಿಟಿಐ):** ‘ಶಿಕ್ಷಣ ಕ್ಷೇತ್ರದ ಪರಿಣತರಂತೆ ಕೋರ್ಟ್ ವರ್ತಿಸಲಾಗದು. ಶಿಕ್ಷಕ ಹುದ್ದೆಯ ಅಭ್ಯರ್ಥಿಗೆ ಅರ್ಹ ವಿದ್ಯಾರ್ಹತೆ ಇದೆಯೇ, ಇಲ್ಲವೇ ಎಂದು ನಿರ್ಧರಿಸುವುದನ್ನು ಆಯಾ ಸಂಸ್ಥೆಗಳ ವಿವೇಚನೆಗೆ ಬಿಡಬೇಕು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನಿರ್ದಿಷ್ಟ ಹುದ್ದೆಗಳಿಗೆ ಸಂಬಂಧಿಸಿದಂತೆ ಜಾಹೀರಾತುವಿನಲ್ಲಿ ಉಲ್ಲೇಖಿಸಿದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆ ಇರಬಾರದು ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಬಿ.ವಿ.ನಾಗರತ್ನ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.

‘ಸಂಬಂಧಿತ ವಿಷಯ ಕುರಿತಂತೆ ತಜ್ಞರ ಸಮಿತಿ ಇರುವಾಗ, ವಿದ್ಯಾರ್ಹತೆ ಕುರಿತ ತೀರ್ಮಾನವನ್ನು ಆಯಾ ಸಂಸ್ಥೆಗಳ ವಿವೇಚನೆಗೇ ಬಿಡಬೇಕು. ಆದರೆ, ಸಂಬಂಧಿತ ಜಾಹೀರಾತಿನಲ್ಲಿ ಉಲ್ಲೇಖಿಸಿದಂತೆ ಅಭ್ಯರ್ಥಿಯು ವಿದ್ಯಾರ್ಹತೆ ಹೊಂದಿರುವುದು ಅಗತ್ಯ’ ಎಂದಿತು.

ಜಾರ್ಖಂಡ್‌ನಲ್ಲಿ ಪ್ರೌಢಶಾಲೆಗಳಿಗೆ ಸ್ನಾತಕೋತ್ತರ ಪದವಿ ತರಬೇತುನಿರತ ಉಪಾಧ್ಯಾಯರ ನೇಮಕ ಪ್ರಕ್ರಿಯೆಯನ್ನು ಕುರಿತಂತೆ ಅಲ್ಲಿನ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ವೇಳೆ ಕೋರ್ಟ್ ಈ ಅಭಿಪ್ರಾಯ ತಿಳಿಸಿತು.

ಚರಿತ್ರೆಗೆ ಸಂಬಂಧಿಸಿದಂತೆ ಒಂದು ವಿಭಾಗದಲ್ಲಿ ಪದವಿ ಪಡೆದಿರುವುದನ್ನು, ಈ ಕೋರ್ಸ್‌ಗೆ ಸಂಬಂಧಿಸಿದಂತೆ ಪೂರ್ಣವಾಗಿ ಪದವಿ ಪಡೆಯಲಾಗಿದೆ ಎಂದು ಪರಿಗಣಿಸಲಾಗದು ಎಂದು ಕೋರ್ಟ್ ಸ್ಪಷ್ಟಪಡಿಸಿತು.

### ಸಂಗೀತ ವಿ.ವಿ–ಆಮರಣಾಂತ ಉಪವಾಸ ಇಂದಿನಿಂದ

ಮೈಸೂರು: ಬಾಕಿ ವೇತನ ಪಾವತಿಸಿ, ಕೆಲಸದಲ್ಲಿ ಮುಂದುವರಿಸುವಂತೆ ಆಗ್ರಹಿಸಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ತಾತ್ಕಾಲಿಕ ಬೋಧಕೇತರ ನೌಕರರು ಏ.18ರಿಂದ (ಸೋಮವಾರ) ಆಮರಣಾಂತ ಉಪವಾಸ ಆರಂಭಿಸಲಿದ್ದಾರೆ.

ನ್ಯಾಯಕ್ಕಾಗಿ ಆಗ್ರಹಿಸಿ 55 ದಿನಗಳಿಂದ 19 ನೌಕರರು ವಿಶ್ವವಿದ್ಯಾಲಯ ಮುಂದೆ ಪ್ರತಿಭಟನೆಯಲ್ಲಿ ತೊಡಗಿದ್ದಾರೆ.

‘12 ತಿಂಗಳಿಂದ ವೇತನ ಪಾತಿಸಿಲ್ಲ. ನಮ್ಮ ಹೋರಾಟಕ್ಕೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿವೆ. ರಾತ್ರಿಯೂ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ. ನಮಗೆ ಏನಾದರೂ ಅನಾಹುತವಾದರೆ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವ ಹಾಗೂ ಸರ್ಕಾರವೇ ನೇರ ಹೊಣೆ’ ಎಂದು ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಸಂಘದ ಕಾರ್ಯದರ್ಶಿ ಕೆ.ಎಚ್. ಹನುಮಂತರಾಜು ಎಚ್ಚರಿಕೆ ನೀಡಿದರು.

ನಗರದಲ್ಲಿ ಭಾನುವಾರ ಮಧ್ಯಾಹ್ನ ಮಳೆ ಸುರಿಯುತ್ತಿದ್ದ ವೇಳೆ ವಿಧಾನಸೌಧ ಬಳಿ ಯುವತಿಯರು ಕೊಡೆ ಹಿಡಿದು ಹೆಜ್ಜೆ ಹಾಕಿದರು(ಎಡಚಿತ್ರ). ಶನಿವಾರ ರಾತ್ರಿ ಸುರಿದ ಮಳೆಯಿಂದಾಗಿ ಮೂರು ಅಡಿಯಷ್ಟು ನೀರು ಹರಿದಿದ್ದ ಸುಲ್ತಾನ್ ಪೇಟೆಯಲ್ಲಿ ಕೆಸರು ಹೆಚ್ಚಾಗಿದ್ದು, ಅದೇ ರಸ್ತೆಯಲ್ಲಿ ಸಾರ್ವಜನಿಕರು ಭಾನುವಾರ ಓಡಾಡಿದರು – ಪ್ರಜಾವಾಣಿ ಚಿತ್ರ

# ಮುಂದುವರಿದ ಮಳೆ: ರಸ್ತೆಗಳಲ್ಲಿ ಹರಿದ ನೀರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಮಧ್ಯಾಹ್ನ ಮಳೆ ಆಗಿದ್ದು, ಹಲವೆಡೆ ರಸ್ತೆಗಳಲ್ಲಿ ರಭಸವಾಗಿ ನೀರು ಹರಿಯಿತು.

ಬಿಡುವು ಕೊಡುತ್ತಲೇ ನಗರದಲ್ಲಿ ಕೆಲದಿನಗಳಿಂದ ಮಳೆ ಸುರಿಯುತ್ತಿದ್ದು, ಗುಡುಗು–ಸಿಡಿಲ ಅಬ್ಬರ ಸಹ ಹೆಚ್ಚಿದೆ.

ಶನಿವಾರ ರಾತ್ರಿ ಸುರಿದ ಮಳೆಯಿಂದಾಗಿ ಮಲ್ಲೇಶ್ವರದ ಸಂಪಿಗೆ ರಸ್ತೆ, ಓಕಳೀಪುರ ಕೆಳ ಸೇತುವೆಯಲ್ಲಿ ನೀರು ಹೊಳೆಯಂತೆ ಹರಿಯಿತು.

ಶಾರದಾ ಕಾಲೊನಿ, ನಾಗಪುರ, ಕಮಲಾನಗರ, ಕಾಟನ್ ಪೇಟೆ, ತಿಮ್ಮಯ್ಯ ರಸ್ತೆ, ಸುಗುಣ ಆಸ್ಪತ್ರೆ, ಶ್ರೀರಾಮ ಮಂದಿರ, ವಿಜಯನಗರ, ಅತ್ತಿಗುಪ್ಪೆ, ಕೆ.ಆರ್. ರಸ್ತೆ, ತ್ಯಾಗರಾಜ ನಗರದ 2ನೇ ಅಡ್ಡರಸ್ತೆ, ರಾಜರಾಜೇಶ್ವರಿನಗರ ಹಾಗೂ ಮಹದೇವಪುರ ಬಳಿ 19 ಮರಗಳು ನೆಲಕ್ಕುರುಳಿದ್ದವು.

ಮಾಗಡಿ ರಸ್ತೆಯ ಕೆ.ಪಿ. ಅಗ್ರಹಾರದಲ್ಲಿ 1 ಮನೆ ಹಾಗೂ ವಿಜಯ ನಗರ ವಾರ್ಡ್‌ನ ಮನುವನದ ಬಳಿ ಕೆಲ ಮನೆಗಳಿಗೆ ನೀರು ನುಗ್ಗಿತ್ತು.

ಚಾಲುಕ್ಯ ವೃತ್ತ, ವಿಧಾನಸೌಧ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದ ರಸ್ತೆಗಳಲ್ಲಿ ನೀರು ನಿಂತು, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

**ಮೋಡ ಕವಿದ ವಾತಾವರಣ:** ನಗರದಲ್ಲಿ ಭಾನುವಾರ ಮೋಡ ಕವಿದ ವಾತಾವರಣ ಕಂಡುಬಂತು. ಆಗಾಗ ಬಿಸಿಲು ಕಾಣಿಸಿಕೊಂಡರೂ ಬಹಳ ಹೊತ್ತು ಇರಲಿಲ್ಲ. ಮಧ್ಯಾಹ್ನ ಹಲವೆಡೆ ತುಂತುರು ಮಳೆ ಸಹ ಆಯಿತು.

ಓಕಳಿಪುರ ಕೆಳ ಸೇತುವೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ಸಾರ್ವಜನಿಕರು ವಾಹನಗಳಲ್ಲಿ ಭಾನುವಾರ ಸಂಚರಿಸಿದರು – ಪ್ರಜಾವಾಣಿ ಚಿತ್ರ

| ಶನಿವಾರ ರಾತ್ರಿ ಸುರಿದ ಮಳೆ ಪ್ರಮಾಣ (ಮಿ.ಮೀ) | |
|---|---|
| ಬಸವೇಶ್ವರ ನಗರ | 92 |
| ಕೊಟ್ಟಿಗೆಪಾಳ್ಯ | 87.5 |
| ರಾಜಾಜಿನಗರ | 67 |
| ಮಾರುತಿ ಮಂದಿರ ವಾರ್ಡ್ | 60 |
| ಶಿವನಗರ | 70 |
| ಕಾಟನ್ ಪೇಟೆ | 61 |
| ಹೆಗ್ಗನಹಳ್ಳಿ | 41 |
| ಕೊಡಿಗೆಹಳ್ಳಿ | 41 |
| ನಾಗಪುರ | 69.5 |
| ರಾಜಮಹಲ್ ಗುಟ್ಟಹಳ್ಳಿ | 69 |
| ಚಾಮರಾಜಪೇಟೆ | 51 |
| ಅಗ್ರಹಾರ ದಾಸರಹಳ್ಳಿ | 52 |
| ಎಚ್.ಗೊಲ್ಲಹಳ್ಳಿ | 59.5 |
| ಕೆ.ಜಿ. ಹಳ್ಳಿ | 48 |
| ಹೆಮ್ಮಿಗೆಪುರ | 39 |
| ರಾಜರಾಜೇಶ್ವರಿ ನಗರ | 34.5 |
| ನಾಯಂಡಹಳ್ಳಿ | 39.5 |
| ಕಗ್ಗಲಿಪುರ | 51 |
| ವಿದ್ಯಾಪೀಠ | 17 |

## ‘ಸಮಾಜದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬರ ಪಾಲಿರಲಿ’

**ಬೆಂಗಳೂರು:** ‘ಸಮಾಜದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಪಾಲಿರಬೇಕು. ಪ್ರತಿಯೊಬ್ಬರೂ ದಾನ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಸಂಪಾದನೆಯಲ್ಲಿ ಸ್ವಲ್ಪವಾದರೂ ಸಮಾಜಕ್ಕಾಗಿ ಸಮರ್ಪಣೆ ಮಾಡಬೇಕು’ ಎಂದು ತೊಗಟವೀರ ಸಮಾಜದ ಪುಷ್ಪಾಂಡಜ ಮುನಿ ಆಶ್ರಮದ ದಿವ್ಯಜ್ಞಾನನಂದಗಿರಿ ಸ್ವಾಮೀಜಿ ತಿಳಿಸಿದರು.

ರಾಜ್ಯ ತೊಗಟವೀರ ಕ್ಷತ್ರಿಯ ಸಂಘದ ವತಿಯಿಂದ ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಮಾಜ ಮುಂದುವರಿಯಲು ಸಮಾಜದ ವ್ಯಕ್ತಿಗಳು ಜ್ಞಾನಿಗಳಾಗಬೇಕು. ಮಕ್ಕಳು ಕೂಡ ಸಮಾಜಮುಖಿ ಕಾರ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸಬೇಕು. ಧೈರ್ಯ, ಕರುಣೆ, ಪರೋಪಕಾರದ ಗುಣಗಳನ್ನು ಬೆಳೆಸಬೇಕು’ ಎಂದು ಕಿವಿಮಾತು ಹೇಳಿದರು.

ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆ ಆಗಿರುವ ಕರ್ನಾಟಕ ರಾಜ್ಯ ತೊಗಟವೀರ ಕ್ಷತ್ರಿಯ ಸಂಘದ ಅಧ್ಯಕ್ಷ ಬಿ.ಎಸ್.ಸೋಮಶೇಖರ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸೋಮಶೇಖರ್, ‘ರಾಜ್ಯದಲ್ಲಿ 50 ಲಕ್ಷ ಜಸಂಖ್ಯೆ ಹೊಂದಿರುವ ನೇಕಾರರಲ್ಲಿ 21ಉಪಜಾತಿಗಳಿದೆ. ನೇಕಾರರಲ್ಲಿ ಶೇ 28ರಷ್ಟು ಮಂದಿ ಈಗಲೂ ನೇಕಾರಿಕೆಯಲ್ಲಿ ತೊಡಗಿದ್ದು, ಇನ್ನುಳಿದವರು ಇತರೆ ಕೆಲಸಗಳ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ’ ಎಂದರು.

‘ತೊಗಟವೀರ ಸಮುದಾಯ ಭವನವನ್ನು ₹ 1.40 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ. ಶೇಷಾದ್ರಿಪುರದಲ್ಲಿ ಐದು ಅಂತಸ್ತುಗಳ ಕಟ್ಟಡ ನಿರ್ಮಾಣ ಮಾಡಲು ನಿರ್ಧರಿಸಲಾಗಿದ್ದು, ಅದರ ನೀಲನಕ್ಷೆ ತಯಾರಾಗಿದೆ’ ಎಂದು ತಿಳಿಸಿದರು.

ತೊಗಟವೀರ ಸಮುದಾಯದ ಪ್ರಮುಖರಾದ ಬಿ.ಕೆ.ವೆಂಕಟೇಶ್, ಗೋವಿಂದಪ್ಪ, ಸಿ.ಅಶ್ವಥ್ ನಾರಾಯಣ, ಎನ್. ಕೃಷ್ಣಪ್ಪ, ಡಿ.ಸಿ.ಸಿದ್ದಪ್ಪ, ಅಚ್ಚಪ್ಪ ನಾಗರಾಜ್, ಜಿ.ವಿಜಯಕುಮಾರ್, ಬಿ.ಎಸ್.ನಾರಾಯಣಸ್ವಾಮಿ, ಆಶಾ, ಹೇಮಾವತಿ, ಪದ್ಮಾ, ಅಭಿನೇತ್ರಿ, ಉಮಾದೇವಿ ಜಗದೀಶ್ ಮತ್ತಿತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಬಿ.ಎಸ್.ಸೋಮಶೇಖರ್ ಅವರನ್ನು ದಿವ್ಯಜ್ಞಾನನಂದಗಿರಿ ಸ್ವಾಮಿಜಿ ಸನ್ಮಾನಿಸಿದರು. ಸಮಾಜದ ಪ್ರಮುಖರಾದ ಗೋವಿಂದಪ್ಪ, ಅಚ್ಚಪ್ಪ ನಾಗರಾಜು, ವಿಜಯಕುಮಾರ್, ಕೃಷ್ಣಪ್ಪ, ಆಶಾ, ಹೇಮಾವತಿ ಹಾಗೂ ಇತರರು ಇದ್ದಾರೆ

**ಚಿತ್ರಾವಳಿ**

ಶಿವಪ್ರಿಯ ನೃತ್ಯ ಸಂಸ್ಥೆಯು ಮಲ್ಲೇಶ್ವರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೃತ್ಯ ಕಲಾವಿದೆ ಉಷಾ ದಾತಾರ್ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ಮತ್ತು ‘ಕಲಾ ಮಂದಾರ’ ಬಿರುದು ನೀಡಿ ಸನ್ಮಾನಿಸಲಾಯಿತು. ನೃತ್ಯ ಕಲಾವಿದ ಸಂಜಯ್ ಶಾಂತಾರಾಂ, ವೀಣಾ ಮೂರ್ತಿ ವಿಜಯ್, ಪೂರ್ಣಿಮಾ ಗುರುರಾಜ, ಮಂಜುಳಾ ಪರಮೇಶ್ ಮತ್ತು ಶುಭ ಧನಂಜಯ ಹಾಗೂ ಇತರರು ಇದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಯುನೈಟೆಡ್ ಫುಡ್ ಡೆಲಿವರಿ ಪಾರ್ಟನರ್ಸ್ ಯೂನಿಯನ್ ನೇತೃತ್ವದಲ್ಲಿ ನಗರದಲ್ಲಿ ಹಮ್ಮಿಕೊಂಡಿರುವ ‘ಲಾಗ್ ಆಫ್ ಡ್ರೈವ್’ನಲ್ಲಿ (ಕೆಲಸ ಬಂದ್ ಚಳವಳಿ) ಆಹಾರ ಪೂರೈಕೆ ಸಿಬ್ಬಂದಿ ಶನಿವಾರವೂ ಭಾಗವಹಿಸಿದರು.

ಎಂಬಿಬಿಎಸ್ ಸೀಟು ಕೊಡಿಸುವ ಆಮಿಷವೊಡ್ಡಿ ವಂಚನೆ

## ‘ಡ್ರೀಮ್ ಕ್ಯಾಚರ್’ ಕಚೇರಿಗೆ ಬೀಗ ಹಾಕಿ ಪರಾರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿ ವಿದ್ಯಾರ್ಥಿಗಳ ಪೋಷಕರಿಂದ ಹಣ ಪಡೆದಿದ್ದರು’ ಎನ್ನಲಾದ ‘ಡ್ರೀಮ್ ಕ್ಯಾಚರ್’ ಕಂಪನಿ ಸಂಸ್ಥಾಪಕರು, ತಮ್ಮ ಕಚೇರಿಗೆ ಏಕಾಏಕಿ ಬೀಗ ಹಾಕಿ ಪರಾರಿಯಾಗಿದ್ದಾರೆ. ಕಂಪನಿಗೆ ಹಣ ನೀಡಿ ವಂಚನೆಗೀಡಾಗಿರುವ ಪೋಷಕರು ಬೆಳ್ಳಂದೂರು ಠಾಣೆ ಮೆಟ್ಟಿಲೇರಿದ್ದಾರೆ.

‘ಮಗಳಿಗೆ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿದ್ದ ಡ್ರೀಮ್ ಕ್ಯಾಚರ್ ಕಂಪನಿಯವರು ₹ 16.39 ಲಕ್ಷ ಪಡೆದು ವಂಚಿಸಿದ್ದಾರೆ’ ಎಂದು ಆರೋಪಿಸಿ ಮನೋಜ್ ಎಂಬುವರು ದೂರು ನೀಡಿದ್ದಾರೆ. ಕಂಪನಿಯ ವಿವೇಕ್ ಕುಮಾರ್, ಅಮಿತ್ ಕುಮಾರ್ ಹಾಗೂ ರಾಜೀವ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸರ್ಜಾಪುರ ರಸ್ತೆಯ ಅಂಬಲಿಪುರದಲ್ಲಿ ಡ್ರೀಮ್ ಕ್ಯಾಚರ್ ಕಂಪನಿ ಕಚೇರಿ ತೆರೆಯಲಾಗಿತ್ತು. ಮಾರ್ಚ್ 24ರಂದು ಮನೋಜ್ ಅವರಿಗೆ ಕರೆ ಮಾಡಿದ್ದ ಆರೋಪಿಗಳು, ‘ತುಮಕೂರಿನ ಶ್ರೀದೇವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಖಾಲಿ ಇದೆ. ನಿಮ್ಮ ಮಗಳಿಗೆ ಸೀಟು ಕೊಡಿಸುತ್ತೇವೆ. ಕೆಲ ಶುಲ್ಕ ಪಾವತಿಸಬೇಕು’ ಎಂದಿದ್ದರು. ಅದನ್ನು ನಂಬಿದ್ದ ಮನೋಜ್, ಹಂತ ಹಂತವಾಗಿ ₹ 16.39 ಲಕ್ಷ ಪಾವತಿ ಮಾಡಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಏಪ್ರಿಲ್ 10ರಂದು ಮನೋಜ್ ಅವರಿಗೆ ಪುನಃ ಕರೆ ಮಾಡಿದ್ದ ಆರೋಪಿಗಳು, ತುಮಕೂರಿನ ಕಾಲೇಜಿಗೆ ಬಂದು ಪ್ರವೇಶ ಪಡೆಯುವಂತೆ ಹೇಳಿದ್ದರು. ಅದನ್ನೂ ನಂಬಿದ್ದ ಮನೋಜ್, ಮಗಳ ಜೊತೆ ಕಾಲೇಜಿಗೆ ಹೋದಾಗ ಆರೋಪಿಗಳು ಸಿಕ್ಕಿರಲಿಲ್ಲ. ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿತ್ತು. ಅನುಮಾನಗೊಂಡ ಅವರು ಕಂಪನಿ ಕಚೇರಿಗೆ ಬಂದಿದ್ದರು. ಅಷ್ಟರಲ್ಲೇ ಆರೋಪಿಗಳು, ಕಚೇರಿಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದರು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

### ವಿಧಾನಸೌಧ ಎದುರೇ ಮೊಬೈಲ್ ಕಿತ್ತೊಯ್ದರು

**ಬೆಂಗಳೂರು:** ವಿಧಾನಸೌಧ ಎದುರಿನ ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೊರಟಿದ್ದ ಯುವಕರೊಬ್ಬರ ಮೊಬೈಲನ್ನು ದುಷ್ಕರ್ಮಿಗಳು ಕಿತ್ತೊಯ್ದಿದ್ದು, ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಾರ್ಚ್ 31ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ 27 ವರ್ಷದ ಯುವಕ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ವಿಧಾನಸೌಧ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ಕಂಪನಿಯಲ್ಲಿ ಯುವಕ ಕೆಲಸ ಮಾಡುತ್ತಿದ್ದಾರೆ. ರಾತ್ರಿ ಪಾಳಿ ಕೆಲಸಕ್ಕಾಗಿ ವಿಧಾನಸೌಧ ಪ್ರವೇಶ ದ್ವಾರ 4ರ ಪಾದಚಾರಿ ಮಾರ್ಗದ ಮೂಲಕ ನಡೆದುಕೊಂಡು ಹೊರಟಿದ್ದರು. ಪಾದಚಾರಿ ಮಾರ್ಗದಲ್ಲೇ ಬೈಕ್ ಚಲಾಯಿಸಿಕೊಂಡು ಬಂದಿದ್ದ ದುಷ್ಕರ್ಮಿಗಳು, ಯುವಕನ ಕೈಯಲ್ಲಿದ್ದ ₹ 30 ಸಾವಿರ ಮೌಲ್ಯದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

**ಅಪರಾಧ ಸುದ್ದಿ**

## ಈಶ್ವರಪ್ಪ ಮನೆಗೆ ಸ್ವಾಮೀಜಿಗಳ ಭೇಟಿ

**ಶಿವಮೊಗ್ಗ:** ಶಾಸಕ ಈಶ್ವರಪ್ಪ ಅವರ ಮನೆಗೆ ಮಠಾಧೀಶರ ಭೇಟಿ ಮುಂದುವರಿದಿದ್ದು, ಭಾನುವಾರ ಕೇದಾರನಾಥಶ್ರೀ ಸೇರಿ 8 ಮಂದಿ ಸ್ವಾಮೀಜಿಗಳು ಭೇಟಿ ನೀಡಿ ಧೈರ್ಯ ತುಂಬಿದರು.

ಗುತ್ತಲ ಕಲ್ಮಠದ ಪ್ರಭು ಸ್ವಾಮೀಜಿ, ತೊಗರ್ಸಿ ಮಳೆ ಹಿರೇಮಠದ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಜಡೆ ಸಂಸ್ಥಾನ ಮಠದ ಯೋಗಾಚಾರ್ಯ ಮಹಾಂತ ಸ್ವಾಮೀಜಿ, ಬಿಳಕಿ ರಂಭಾಪುರಪುರಿ ಶಾಖಾಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ಮೂಲಗದ್ದೆ ಶಿವಯೋಗಾಶ್ರಮದ ಚನ್ನಬಸವ ಸ್ವಾಮೀಜಿ, ಬಿದರೆ ಕಂಚುಕಲ್ಲು ದೊಡ್ಡಮಠದ ಪ್ರಭು ಕುಮಾರ ಸ್ವಾಮೀಜಿ, ಹಾರನಹಳ್ಳಿ ಚೌಕಿಮಠದ ನೀಲಕಂಠ ಸ್ವಾಮೀಜಿ ಭೇಟಿ ನೀಡಿದರು.

## ಗಲಭೆ: 200 ಜನರ ವಿರುದ್ಧ ಪ್ರಕರಣ

**ನೂಮುಚ್ (ಪಿಟಿಐ):** ಮಧ್ಯಪ್ರದೇಶದ ಖರ್ಗೋನ್ ಮತ್ತು ಬಡ್ವಾನಿ ಜಿಲ್ಲೆಗಳಲ್ಲಿ ಏಪ್ರಿಲ್ 10ರಂದು ನಡೆದಿದ್ದ ಹಿಂಸಾ ಚಾರ ಪ್ರಕರಣದ ಬಳಿಕ ನಡೆದಿದ್ದ ಪ್ರತಿಭಟನೆಗೆ ಸಂಬಂಧಿಸಿದಂತೆ 200 ಜನರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಅವರಲ್ಲಿ ಮುಸ್ಲಿಂ ಇಂತೆಝಾಮಿಯಾ ಸಮಿತಿಗೆ ಸೇರಿದ 11 ಪದಾಧಿಕಾರಿಗಳು ಸೇರಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ರಾಮನವಮಿ ವೇಳೆ ಕೋಮು ಗಲಭೆ ನಡೆದಿತ್ತು. ಈ ಪ್ರಕರಣದ ಕುರಿತು ಪೊಲೀಸರು ಕ್ರಮ ಕೈಗೊಂಡಿದ್ದರು. ಪೊಲೀಸರ ಕ್ರಮವನ್ನು ವಿರೋಧಿಸಿ ದೊಡ್ಡ ಗುಂಪೊಂದು ಅನುಮತಿ ಪಡೆಯದೇ ಎಸ್‌ಪಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿತ್ತು. ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನಗರದ ಜಕ್ಕೂರಿನಲ್ಲಿ ಭಾನುವಾರ ಉರುಳಿಬಿದ್ದ ತರಬೇತಿಗೆ ಬಳಸುತ್ತಿದ್ದ ಏರ್‌ಕ್ರಾಫ್ಟ್

## ಜಕ್ಕೂರು: ವೈಮಾನಿಕ ತರಬೇತಿ ಕೇಂದ್ರದಲ್ಲಿ ಅವಘಡ

ಬೆಂಗಳೂರು: ನಗರದ ಜಕ್ಕೂರು ಬಳಿಯ ವೈಮಾನಿಕ ತರಬೇತಿ ಕೇಂದ್ರದಲ್ಲಿ ಏರ್‌ಕ್ರಾಫ್ಟ್ ಉರುಳಿಬಿದ್ದಿದ್ದು, ಮಹಿಳಾ ಪೈಲಟ್ ಗಾಯಗೊಂಡಿದ್ದಾರೆ. ತರಬೇತಿ ಪಡೆಯುತ್ತಿರುವ ಮಹಿಳಾ ಪೈಲಟ್ ಭಾನುವಾರ ರನ್‌ವೇಯಲ್ಲಿ ಏರ್‌ಕ್ರಾಫ್ಟ್ ಚಲಾಯಿಸಿದ್ದರು. ಆಕಾಶಕ್ಕೆ ಹಾರಲು ಕೆಲ ಕ್ಷಣಗಳು ಬಾಕಿ ಇರುವಾಗಲೇ ನಾಯಿಯೊಂದು ಅಡ್ಡ ಬಂದಿತ್ತು.

ನಾಯಿಗೆ ಡಿಕ್ಕಿ ಹೊಡೆದ ಏರ್‌ಕ್ರಾಫ್ಟ್ ರನ್‌ವೇಯಲ್ಲಿ ಉರುಳಿ ಪಕ್ಕಕ್ಕೆ ಬಿದ್ದಿತು. ರಕ್ಷಣೆಗೆ ಬಂದ ಸಹೋದ್ಯೋಗಿಗಳು, ಮಹಿಳಾ ಪೈಲಟ್ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಅವರು ಚೇತರಿಸಿಕೊಂಡಿದ್ದಾರೆ. ಘಟನೆ ಬಗ್ಗೆ ಏರೋಡ್ರಮ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

# ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

## ಉತ್ತರಹಳ್ಳಿ ರಸ್ತೆ: ಗುಂಡಿ ಮುಚ್ಚಲು ಮನವಿ

ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಡೊಮಿನೊಸ್ ಸಮೀಪ ರಸ್ತೆಯಲ್ಲೇ ದೊಡ್ಡ ಗುಂಡಿ ಬಿದ್ದಿದೆ. ಗುಂಡಿಯನ್ನು ಕ್ರಮೇಣ ಕಸದ ತೊಟ್ಟಿಯಾಗಿಯೂ ಮಾಡಲಾಗಿದೆ. ಗುಂಡಿಯಲ್ಲೇ ಎಲ್ಲ ರೀತಿಯ ಕಸ ಹಾಕಲಾಗುತ್ತಿದೆ. ರಸ್ತೆಯಲ್ಲಿ ಪ್ರತಿನಿತ್ಯ ಸಂಚರಿಸುವ ಸಾವಿರಾರು ವಾಹನಗಳಿಗೆ ಗುಂಡಿಯಿಂದ ಅಪಾಯ ಎದುರಾಗಿದೆ.

ರಾತ್ರಿ ವೇಳೆ ಸಂಚರಿಸುವ ವಾಹನಗಳಿಗೆ ಗುಂಡಿ ಕಾಣುವುದಿಲ್ಲ. ಇಷ್ಟು ದೊಡ್ಡ ಗುಂಡಿ ನಿರ್ಮಾಣವಾಗಿ ತಿಂಗಳು ಕಳೆದರೂ ಅದರ ದುರಸ್ತಿಗೆ ಯಾರೂ ಮುಂದಾಗದೆ ಇರುವುದು ವಿಪರ್ಯಾಸ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಗುಂಡಿಯನ್ನು ಶೀಘ್ರವಾಗಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

**ರಮೇಶ್**, ಚಿಕ್ಕಲ್ಲಸಂದ್ರ ನಿವಾಸಿ

ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಗುಂಡಿ



ವಾಲ್ಮೀಕಿ ನಗರದಲ್ಲಿ ನಿವಾಸಗಳ ಬಳಿ ರಾಶಿ ಕಸ

## ರಸ್ತೆಯಲ್ಲೇ ರಾಶಿ ಕಸ

ವಾಲ್ಮೀಕಿ ನಗರದ 2ನೇ ಮುಖ್ಯ ರಸ್ತೆಯಲ್ಲಿರುವ ಸಮಾಜ ಸೇವಾ ಸಂಘದ ಮುಂಭಾಗದ ಪ್ರದೇಶದಲ್ಲಿ ಕಸದ ರಾಶಿ ಸದಾ ಕಣ್ಣಿಗೆ ರಾಚುತ್ತದೆ. ದಿನದಿಂದ ದಿನಕ್ಕೆ ಇಲ್ಲಿ ಸಂಗ್ರಹವಾಗುವ ಕಸದ ಪ್ರಮಾಣ ಹೆಚ್ಚುತ್ತಲೇ ಇದೆ. ಆದರೆ, ಕಸ ತೆರವಿಗೆ ಯಾರೂ ಕ್ರಮ ಕೈಗೊಳ್ಳುತ್ತಿಲ್ಲ. ಈ ರಸ್ತೆಯಲ್ಲಿ ಲಕ್ಷ್ಮೀ ಮಾರಮ್ಮ ಮತ್ತು ರೇಣುಕಾ ಎಲ್ಲಮ್ಮ ದೇವಸ್ಥಾನಗಳೂ ಇವೆ.

ಸರ್ಕಾರಿ ಶಾಲೆ ಇರುವುದರಿಂದ ಮಕ್ಕಳೆಲ್ಲ ಇದೇ ಕಸದ ರಸ್ತೆಯಲ್ಲಿ ನಡೆದು ಹೋಗಬೇಕು. ಮಳೆ ಬಿದ್ದರೆ ಕಸದಿಂದಾಗಿ ದುರ್ವಾಸನೆ ಬರುತ್ತದೆ. ಸ್ಥಳೀಯ ನಿವಾಸಿಗಳಿಗೂ ಕಸದಿಂದ ಬಹಳ ಸಮಸ್ಯೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿನ ಕಸ ತೆರವು ಮಾಡಲು ಕ್ರಮ ಕೈಗೊಳ್ಳಬೇಕು.

**ಸುಧಾಕರ್**, ವಾಲ್ಮೀಕಿ ನಗರದ ನಿವಾಸಿ

## ವಾಲಿದ ವಿದ್ಯುತ್ ಕಂಬ ತೆರವಿಗೆ ಕ್ರಮ

ಜ್ಞಾನಭಾರತಿ ವಾರ್ಡ್‌ನ ಮುನೇಶ್ವರ ನಗರದ 14ನೇ ಅಡ್ಡರಸ್ತೆಯಲ್ಲಿ ವಾಲಿದ್ದ ವಿದ್ಯುತ್ ಕಂಬವನ್ನು ತೆರವು ಮಾಡಲಾಗಿದೆ. ಅದೇ ಜಾಗದಲ್ಲಿ ಹೊಸ ಕಂಬ ಅಳವಡಿಸಲಾಗಿದೆ.

‘ಜನವಸತಿ ಪ್ರದೇಶದಲ್ಲೇ ಕಂಬ ವಾಲಿರುವುದರಿಂದ ಮಕ್ಕಳು ಹಾಗೂ ವಯಸ್ಸಾದವರಿಗೆ ಬಹಳ ತೊಂದರೆಯಾಗಿದೆ. ವಾಲಿದ ಕಂಬ ಯಾವ ಕ್ಷಣದಲ್ಲಾದರೂ ನೆಲಕ್ಕುರುಳಿ, ವಿದ್ಯುತ್ ಪ್ರವಹಿಸುವ ಸಾಧ್ಯತೆ ಇದೆ. ಅಪಾಯದ ಸ್ಥಿತಿಯಲ್ಲಿರುವ ಈ ಕಂಬವನ್ನು ಕೂಡಲೇ ತೆರವು ಮಾಡಬೇಕು ಅಥವಾ ಹೊಸ ಕಂಬ ಅಳವಡಿಸಬೇಕು’ ಎಂದು ಸ್ಥಳೀಯರು ದೂರಿದ್ದರು.

ಈ ಸಂಬಂಧ ‘ಪ್ರಜಾವಾಣಿ’ಯ ಕುಂದು–ಕೊರತೆ ಅಂಕಣದಲ್ಲಿ ‘ವಾಲಿದ ಕಂಬ: ವಿದ್ಯುತ್ ಪ್ರವಹಿಸುವ ಆತಂಕ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಬೆಸ್ಕಾಂ ಸಿಬ್ಬಂದಿ ಹಳೆಯ ಕಂಬ ತೆರವು ಮಾಡಿ, ಹೊಸ ಕಂಬ ಅಳವಡಿಸಲು ಕ್ರಮ ಕೈಗೊಂಡಿದ್ದಾರೆ.

ವರದಿ ಪರಿಣಾಮ

ಮುನೇಶ್ವರ ನಗರದ 14ನೇ ಅಡ್ಡರಸ್ತೆಯಲ್ಲಿ ಹೊಸ ಕಂಬ ಅಳವಡಿಸಲಾಗಿದೆ.

## ಚಿಕ್ಕಬಾಣಾವರ: ಕಸ ತೆರವು ಮಾಡಿ

ದಾಸರಹಳ್ಳಿಯ ಚಿಕ್ಕಬಾಣಾವರದಲ್ಲಿ ಕಸದ ಸಮಸ್ಯೆ ಹೆಚ್ಚಾಗಿದೆ. ಈ ಪ್ರದೇಶದಲ್ಲಿ ಕಣ್ಣು ಹಾಯಿಸಿದ ಕಡೆಯೆಲ್ಲ ಕಸವೇ ಕಾಣುತ್ತದೆ. ರಸ್ತೆ ಬದಿಗಳಲ್ಲಿ ಕಸದ ರಾಶಿಗೆ ಮಿತಿಯಿಲ್ಲ. ಕಸ ಸಂಗ್ರಹಿಸುವ ಕೆಲಸ ಸಕಾಲದಲ್ಲಿ ನಡೆಯದೆ ಇರುವುದರಿಂದ ಕಸದ ತಾಣವಾಗುತ್ತಿದೆ. ಈ ಬಗ್ಗೆ ಗ್ರಾಮ ಪಂಚಾಯಿತಿ ಕಚೇರಿಗೆ ದೂರು ನೀಡಿದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಚಿಕ್ಕಬಾಣಾವರವನ್ನು ಕಸಮುಕ್ತಗೊಳಿಸಲು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

**ಸ್ವಾಮಿ**, ಸ್ಥಳೀಯ ನಿವಾಸಿ

ಚಿಕ್ಕಬಾಣಾವರದಲ್ಲಿ ರಸ್ತೆ ಪಕ್ಕದಲ್ಲೇ ರಾಶಿ ಬಿದ್ದಿರುವ ಕಸ

## ಬಸ್ ನಿಲುಗಡೆ ಫಲಕಗಳನ್ನು ಅಳವಡಿಸಿ

ಗಾಂಧಿಬಜಾರ್ ಮೂಲಕ ಇಟ್ಟಮಡು, ಹೊಸಕೆರೆಹಳ್ಳಿ, ಶ್ರೀನಗರಕ್ಕೆ ಹೋಗುವ ನಗರ ಸಾರಿಗೆ ವಾಹನಗಳಿಗೆ 80 ಅಡಿ ರಸ್ತೆಯ ಹಲವು ಕಡೆ ನಿಲುಗಡೆಗೆ ಅವಕಾಶವಿದೆ. ಆದರೆ, ಬಸ್ ಎಲ್ಲಿ ನಿಲ್ಲುತ್ತದೆ ಎಂದು ಪ್ರಯಾಣಿಕರಿಗೆ ಸ್ಪಷ್ಟ ಮಾಹಿತಿ ಇಲ್ಲ.

ಎಲ್ಲೆಂದರಲ್ಲಿ ಬಸ್‌ಗಳು ನಿಲ್ಲಿಸಿ ಪ್ರಯಾಣಿಕರನ್ನು ಕರೆದೊಯ್ಯುತ್ತವೆ. ಇದರಿಂದ ಪ್ರಯಾಣಿಕರಿಗೆ ಗೊಂದಲವೂ ಹೆಚ್ಚು. ಬಸ್ ನಿಲ್ಲುವ ಸ್ಥಳಗಳಲ್ಲಿ ಕನಿಷ್ಠ ಪಕ್ಷ ನಿಲುಗಡೆ ಫಲಕಗಳನ್ನು ಅಳವಡಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಸಂಬಂಧಪಟ್ಟ ಅಧಿಕಾರಿಗಳು ಫಲಕ ಅಳವಡಿಸಲು ಗಮನಹರಿಸಬೇಕು.

**ಸತ್ಯಬೋಧ**, ಹೊಸಕೆರೆಹಳ್ಳಿ ಬಡಾವಣೆ ನಿವಾಸಿ

### ಗೋವಿಂದರಾಜನಗರದಲ್ಲಿ ಸೂಪರ್‌ಸ್ಪೆಷಾಲಿಟಿ ಸೌಲಭ್ಯ

# ಆಸ್ಪತ್ರೆಗೆ ₹49 ಕೋಟಿ ಅನುದಾನ ಪ್ರಸ್ತಾವ ಸಿದ್ಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಗ್ರಹಾರ ದಾಸರಹಳ್ಳಿಯಲ್ಲಿ ನಿರ್ಮಿಸುತ್ತಿರುವ 200 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನು ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ₹ 49 ಕೋಟಿ ಮೊತ್ತದ ಪ್ರಸ್ತಾವ ಸಿದ್ಧಪಡಿಸಿದೆ.

ಬಿಬಿಎಂಪಿಯು ₹ 60 ಕೋಟಿ ವೆಚ್ಚದಲ್ಲಿ ಈ ಆಸ್ಪತ್ರೆಯ ಕಟ್ಟಡವನ್ನು ಮೂರು ಹಂತಗಳಲ್ಲಿ ನಿರ್ಮಿಸಿದ್ದು, ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಮೊದಲ ಹಂತದಲ್ಲಿ ತಳಮಹಡಿ, ನೆಲಮಹಡಿ, ಒಂದು, ಎರಡು ಮತ್ತು ಮೂರನೇ ಮಹಡಿ ಮಹಡಿಗಳನ್ನು ನಿರ್ಮಿಸಲಾಗಿದೆ. ಎರಡನೇ ಹಂತದಲ್ಲಿ ನಾಲ್ಕನೇ ಮಹಡಿ ನಿರ್ಮಿಸಲಾಗಿದೆ. ಮೂರನೇ ಹಂತದಲ್ಲಿ ಆವರಣ ಗೋಡೆ, ಸಂಪ್, ಟ್ಯಾಂಕ್ ಹಾಗೂ ಕಟ್ಟಡಕ್ಕೆ ಸಂಪರ್ಕ ರಸ್ತೆಗಳ ನಿರ್ಮಿಸಲಾಗುತ್ತಿದೆ.

ಒಳಾಂಗಣ ಅಭಿವೃದ್ಧಿ, ಅಗ್ನಿಶಾಮಕ ವ್ಯವಸ್ಥೆ, ಮಾಡ್ಯುಲಾರ್ ಶಸ್ತ್ರಚಿಕಿತ್ಸಾ ಕೊಠಡಿ (ಒ.ಟಿ), ವೈದ್ಯಕೀಯ ಅನಿಲ ಕೊಳವೆ, ತಾಪನಿಯಂತ್ರಣ ಮತ್ತು ವಾತಾಯನ ವ್ಯವಸ್ಥೆ (ಎಚ್‌ವಿಎಸಿ), ಸಿ.ಸಿ.ಕ್ಯಾಮೆರಾ ವ್ಯವಸ್ಥೆ ಅಳವಡಿಕೆ, 30 ಹಾಸಿಗೆಗಳ ಸಾಮರ್ಥ್ಯದ ತೀವ್ರ ನಿಗಾ ಘಟಕ (ಐಸಿಯು), ಸಂದೇಶ ಫಲಕಗಳ ಅಳವಡಿಕೆ ಕಾರ್ಯಗಳು ಬಾಕಿ ಇವೆ. ಪೀಠೋಪಕರಣ, ವೈದ್ಯಕೀಯ ಉಪಕರಣ, ಆಂಬುಲೆನ್ಸ್ ಹಾಗೂ ಚಿರಶಾಂತಿ ವಾಹನಗಳನ್ನು ಇನ್ನಷ್ಟೇ ಖರೀದಿಸಬೇಕಿದೆ.

ಆಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಅನುದಾನದ ಕೊರತೆ ಎದುರಾಗಿತ್ತು. ಬಾಕಿ ಇರುವ ಸಿವಿಲ್ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅನುದಾನ ಒದಗಿಸಬೇಕು ಎಂಬುದು ಬಿಬಿಎಂಪಿ ಬೇಡಿಕೆ. ಆಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಸೌಕರ್ಯ ಕಲ್ಪಿಸಲು ಅಗತ್ಯ ಅನುದಾನ ಒದಗಿಸುವಂತೆ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ವಸತಿ ಸಚಿವ ವಿ.ಸೋಮಣ್ಣ ಅವರು ಕೂಡ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಕೋರಿದ್ದರು.

ಇಲ್ಲಿ ಬಾಕಿ ಇರುವ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲು, ಮೂಲಸೌಕರ್ಯ ಕಲ್ಪಿಸಲು, ವೈದ್ಯಕೀಯ ಉಪಕರಣಗಳ ಖರೀದಿಸಲು ₹ 49 ಕೋಟಿ ಅನುದಾನದ ಅಗತ್ಯವಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಅವರು ಪ್ರಸ್ತಾವ ಸಿದ್ಧಪಡಿಸಿದ್ದಾರೆ. ಸಿವಿಲ್ ಹಾಗೂ ಮೂಲಸೌಕರ್ಯ ಕಾಮಗಾರಿಗಳಿಗೆ ₹ 22.70 ಕೋಟಿ ಹಾಗೂ ವೈದ್ಯಕೀಯ ಉಪಕರಣಗಳ ಖರೀದಿಗೆ ₹ 25.57 ಕೋಟಿ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ 2019–20ನೇ ಸಾಲಿನ ವಿದ್ಯುತ್ ದರಪಟ್ಟಿ ಪ್ರಕಾರ ಈ ಪ್ರಸ್ತಾವ ಸಿದ್ಧಪಡಿಸಲಾಗಿದೆ. ಇದಕ್ಕೆ ಯಾವುದೇ ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಕಾಯ್ದಿರಿಸಿಲ್ಲ. ಹಾಗಾಗಿ ₹ 49 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತರು ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಇತ್ತೀಚೆಗೆ ಪ್ರಸ್ತಾವ ಸಲ್ಲಿಸಿದ್ದಾರೆ.

### 104 ಹುದ್ದೆಗಳ ಸೃಷ್ಟಿ

ಈ ಆಸ್ಪತ್ರೆಗೆ ಒಟ್ಟು 191 ಹುದ್ದೆಗಳ ಮಂಜೂರು ಮಾಡುವಂತೆ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪ್ರಸ್ತಾವ ಸಲ್ಲಿಸಿದ್ದು, ಈಗಾಗಲೇ 104 ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಈ ಹುದ್ದೆಗಳನ್ನು ನಿಯೋಜನೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಸರ್ಕಾರ ಆದೇಶ ಮಾಡಿದೆ. ಮಾನವ ಸಂಪನ್ಮೂಲವನ್ನು ಬಿಬಿಎಂಪಿಯಿಂದಲೇ ಭರ್ತಿ ಮಾಡಿಕೊಳ್ಳಲಾಗುತ್ತಿದೆ.

**ವಿಶೇಷ ಪ್ರಾರ್ಥನೆ** ಈಸ್ಟರ್ ಭಾನುವಾರದ ಪ್ರಯುಕ್ತ ನಗರದ ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ಭಕ್ತರು ವಿಶೇಷ ಪ್ರಾರ್ಥನೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

## ವಿದ್ಯಾರ್ಥಿಗಳಿಂದ ಶಿಕ್ಷಣ ಅವಕಾಶಕ್ಕೆ ಆಗ್ರಹ

**ನವದೆಹಲಿ (ಪಿಟಿಐ):** ಯುದ್ಧಪೀಡಿತ ಉಕ್ರೇನ್‌ನಿಂದ ವಾಪಸಾದ ಭಾರತೀಯ ವಿದ್ಯಾರ್ಥಿಗಳಿಗೆ ದೇಶದ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ನೀಡಬೇಕು ಎಂದು ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಭಾನುವಾರ ಇಲ್ಲಿ ಒತ್ತಾಯಿಸಿದರು.

ಇಲ್ಲಿ ಸೇರಿದ ವಿದ್ಯಾರ್ಥಿಗಳು, ‘ಎಲ್ಲ ಭಾರತೀಯ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ’, ‘ಭಾರತೀಯ ವಿದ್ಯಾರ್ಥಿಗಳ ಭವಿಷ್ಯ ಉಳಿಸಿ’ ಎಂಬ ಫಲಕಗಳನ್ನು ಪ್ರದರ್ಶಿಸಿದರು.

## ಚಿತ್ರಾವಳಿ

ಯಲಹಂಕದ ಕೋಟೆ ಬೀದಿಯಲ್ಲಿರುವ ವೇಣುಗೋಪಾಲಸ್ವಾಮಿ ದೇವರ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಂಗಳೂರಿನ ಗಣೇಶ್ ನಾಡಿಗ್ ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಎಂ.ಟೆಕ್ ಪದವಿಗಾಗಿ ಮಂಡಿಸಿದ್ದ ನಗರ ಯೋಜನೆ ಕುರಿತ ಪ್ರಬಂಧವನ್ನು ಅತ್ಯುತ್ತಮ ಎಂದು ಪರಿಗಣಿಸಿ ಭೋಪಾಲ್‌ನಲ್ಲಿ ಭಾನುವಾರ ನಡೆದ ‘ರಾಷ್ಟ್ರೀಯ ನಗರ ಯೋಜನಾ’ ಸಮ್ಮೇಳನದಲ್ಲಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಂ.ಟೆಕ್ ಪದವಿಯಲ್ಲಿ ಗಣೇಶ್ ಅವರು ವಿಶ್ವವಿದ್ಯಾಲಯಕ್ಕೆ ಮೊದಲ ರ್‍ಯಾಂಕ್ ಗಳಿಸಿ 16 ಚಿನ್ನದ ಪದಕಗಳನ್ನು ಪಡೆದಿದ್ದರು

ಕೆ.ಆರ್‌ರಸ್ತೆಯ ಕೋಟೆ ಶ್ರೀಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಲಶಾರಾಧನೆ ಹಾಗೂ ಕಲಶಾಭಿಷೇಕ ಕಾರ್ಯಕ್ರಮಗಳು ಭಾನುವಾರ ನೆರವೇರಿದವು. ಶ್ರೀನಿವಾಸ್ ಗುಪ್ತ, ಕೋಟೆ ಡಿ.ಗೋಪಾಲ್, ಶ್ರೀಕಾಂತ್ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

# ಹೆಸರಘಟ್ಟ ಕೆರೆ ಒತ್ತುವರಿ ತೆರವಿಗೆ ಕ್ರಮ: ಡಿ.ಸಿ. ಭರವಸೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ಕಂದಾಯ ಇಲಾಖೆ ವತಿಯಿಂದ ಹೆಸರಘಟ್ಟದಲ್ಲಿ ಆಯೋಜಿಸಿದ್ದ ಜಿಲ್ಲಾಧಿಕಾರಿಗಳ ನಡೆ-ಹಳ್ಳಿಯ ಕಡೆಗೆ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಸಲ್ಲಿಸಲಾದ ವಿಧವಾ ವೇತನದ ಒಂದು ಮತ್ತು ವಿಕಲಚೇತನರ ಮಾಸಾಶನದ ಎರಡು ಅರ್ಜಿಗಳನ್ನು ಸ್ಥಳದಲ್ಲೇ ಪರಿಶೀಲಿಸಿ, ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನು ವಿತರಿಸಿದರು.

ನಂತರ ಅವರು, ಹೆಸರಘಟ್ಟದ ಸರ್ವೆ ನಂ.325ರಲ್ಲಿ ಆಟದ ಮೈದಾನ ನಿರ್ಮಾಣಕ್ಕಾಗಿ ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸ್ಥಳದಲ್ಲೇ ಮಂಜೂರಾತಿ ಆದೇಶ ನೀಡಿದರು.

ಬೆಂಗಳೂರು ನಗರದಲ್ಲಿ 839 ಕೆರೆಗಳಿದ್ದು, ಸಾರ್ವಜನಿಕರ ಆಸ್ತಿಗಳನ್ನು ಹಾಗೂ ಕೆರೆಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಕಳೆದ ಸಾಲಿನಲ್ಲಿ ಬೆಂಗಳೂರುನಗರ ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗಿದ್ದರೂ ಹೆಸರಘಟ್ಟ ಕೆರೆ ಭರ್ತಿಯಾಗಿಲ್ಲ; ರಾಜಕಾಲುವೆ ಮಾರ್ಗಗಳಲ್ಲಿ ಹೂಳು ತುಂಬಿಕೊಂಡಿರುವುದು ಮತ್ತು ಒತ್ತುವರಿಯಾಗಿರುವುದೂ ಸೇರಿದಂತೆ ಇದಕ್ಕೆ ಹಲವು ಕಾರಣಗಳಿದ್ದು, ಶೀಘ್ರದಲ್ಲೇ ಕೆರೆ ಪ್ರದೇಶದ ಹಾಗೂ ರಾಜಕಾಲುವೆಗಳ ಸರ್ವೆ ಕಾರ್ಯ ನಡೆಸಿ, ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಒಂದು ವರ್ಷದಿಂದ ವೇತನ ಬಂದಿಲ್ಲವೆಂದು ಅಂಗನವಾಡಿ ಸಹಾಯಕಿಯೊಬ್ಬರು ದೂರಿದರು. ವೇತನ ತಡೆಹಿಡಿದಿರುವ ಬಗ್ಗೆ ಪರಿಶೀಲಿಸಿ, ಕೂಡಲೇ ಮಂಜೂರು ಮಾಡಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸೊಣ್ಣೇನಹಳ್ಳಿಯಲ್ಲಿ ಸರ್ವೆ ನಂ.78ರಲ್ಲಿ 69 ಎಕರೆ ವಿಸ್ತೀರ್ಣ, 63 ಎಕರೆ ಖರಾಬು ಸರ್ಕಾರಿ ಗುಡ್ಡದ ಮಣ್ಣನ್ನು ಮಾರಾಟಮಾಡಿ, ಹೊರಗೆ ಕಳುಹಿಸಲಾಗುತ್ತಿದೆ. ಕೂಡಲೇ ಈ ಅಕ್ರಮವನ್ನು ತಡೆಗಟ್ಟಬೇಕು ಎಂದು ಕಾರ್ಲಪುರ ಗ್ರಾಮದ ನಿವಾಸಿ ಕೆ.ಎಚ್.ಕೃಷ್ಣಮೂರ್ತಿ ಮನವಿಪತ್ರ ಸಲ್ಲಿಸಿದರು

ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಉಪತಹಶೀಲ್ದಾರ್‌ಗಳಾದ ರಮೇಶ್ ಬಾಬು, ಶ್ರೀನಿವಾಸ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ, ಗ್ರಾಮಪಂಚಾಯಿತಿ ಅಧ್ಯಕ್ಷ ಶಿವಾನಂದ್ ಮತ್ತಿತರರು ಉಪಸ್ಥಿತರಿದ್ದರು.



ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು, ಫಲಾನುಭವಿಯೊಬ್ಬರಿಗೆ ವೃದ್ಧಾಪ್ಯವೇತನದ ಆದೇಶಪತ್ರ ವಿತರಿಸಿದರು. ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಉಪತಹಶೀಲ್ದಾರ್ ಶ್ರೀನಿವಾಸ್ ಇತರರು ಇದ್ದರು.

# ಪಾದಚಾರಿ ಮೇಲ್ಸೇತುವೆ ಲೋಕಾರ್ಪಣೆ

**ಯಲಹಂಕ:** ಹೆಬ್ಬಾಳ ರಿಂಗ್ ರಸ್ತೆಯ ಯೋಗೇಶ್ ನಗರ ಮತ್ತು ಕರಿಯಣ್ಣ ಬಡಾವಣೆಯ ಬಳಿ ಸಾರ್ವಜನಿಕ ಸಹಭಾಗಿತ್ವದಡಿಯಲ್ಲಿ ₹2 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಪಾದಚಾರಿ ಮೇಲ್ಸೇತುವೆಯನ್ನು (ಸ್ಕೈವಾಕ್) ಶಾಸಕ ಕೃಷ್ಣಬೈರೇಗೌಡ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ‘ಈ ರಸ್ತೆಯಲ್ಲಿ ವಾಹನಗಳು ಅತಿವೇಗವಾಗಿ ಸಂಚರಿಸುವುದರಿಂದ ಜನರು ರಸ್ತೆದಾಟಲು ಕಷ್ಟಪಡುತ್ತಿದ್ದರು. ಅಲ್ಲದೆ ಈ ಸಂದರ್ಭದಲ್ಲಿ ಅನೇಕ ಅಪಘಾತಗಳಾಗಿ ಸಾವು-ನೋವುಗಳು ಸಂಭವಿಸಿವೆ. ಈ ಭಾಗದ ಜನರ ಬಹುದಿನಗಳ ಬೇಡಿಕೆಯಂತೆ ಈ ಸ್ಥಳದಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕೆಂದು ಬಿಬಿಎಂಪಿಗೆ ಪ್ರಸ್ತಾವನೆ ಸಲ್ಲಿಸಿ, ಮಂಜೂರು ಮಾಡಲಾಯಿತು. ಈಗ ಲಿಫ್ಟ್ ಸಮೇತ ಪಾದಚಾರಿ ಮೇಲ್ಸೇತುವೆ ನಿರ್ಮಿಸಿ, ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಿರುವುದರಿಂದ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿದೆ’ ಎಂದರು. ಪಾಲಿಕೆ ಮಾಜಿ ಸದಸ್ಯ ಪಿ.ವಿ. ಮಂಜುನಾಥಬಾಬು, ಆ್ಯಡ್ ಏಜ್ ಕಂಪನಿಯ ವ್ಯವಸ್ಥಾಪಕ ಪಾರ್ತಿಬನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಕೆ.ಗೌರೀಶ್, ಸುಬ್ಬಣ್ಣ, ಸುಬ್ರಮಣಿ ಮತ್ತಿತರರು ಉಪಸ್ಥಿತರಿದ್ದರು.

ಹೆಬ್ಬಾಳದ ರಿಂಗ್ ರಸ್ತೆಯಲ್ಲಿ ಉದ್ಘಾಟನೆಗೊಂಡ ಪಾದಚಾರಿ ಸ್ಕೈವಾಕ್

# ‘ಆರ್‌ಎಸ್‌ಎಸ್ ಯಾರಿಗೂ ಸ್ಪರ್ಧಿ ಅಲ್ಲ’

**ಭೋಪಾಲ್ (ಪಿಟಿಐ):** ‘ರಾಷ್ಟ್ರೀಯ ಸ್ವಯಂಸೇವಕರ ಸಂಘ (ಆರೆಸ್ಸೆಸ್) ಯಾರಿಗೂ ಸ್ಪರ್ಧಿ ಅಲ್ಲ. ಆದರೆ, ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿರುವ ಹಲವಾರು ಸಂಸ್ಥೆಗಳ ಸಹಭಾಗಿ ಆಗಿದೆ’ ಎಂದು ಸರಸಂಘಚಾಲಕ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

ಆರೆಸ್ಸೆಸ್‌ನ ‘ಪ್ರಜ್ಞಾ ಪ್ರವಾಹ’ ಇಲ್ಲಿ ಆಯೋಜಿಸಿದ್ದ ಎರಡು ದಿನಗಳ ‘ಅಖಿಲ ಭಾರತೀಯ ಚಿಂತನ್ ಬೈಠಕ್’ನ ಸಮಾರೋಪದಲ್ಲಿ ಮಾತನಾಡಿದ ಅವರು, ‘ಸತ್ಯ, ದಯೆ, ಪ್ರಾಮಾಣಿಕತೆ ಮತ್ತು ಶ್ರದ್ಧೆ ಎಲ್ಲಾ ಭಾರತೀಯ ಧರ್ಮಗಳ ಮೂಲ ಗುಣಗಳು. ಧರ್ಮ ತನ್ನ ವರ್ತನೆಯಿಂದ ಕಾಪಾಡಲ್ಪಡುತ್ತದೆ. ನಮ್ಮ ಸದ್ಗುಣಗಳು ಮತ್ತು ಧರ್ಮವೇ ನಮ್ಮ ಸಂಪತ್ತು ಹಾಗೂ ಅಸ್ತ್ರವಾಗಿವೆ’ ಎಂದರು.

ಹಲವಾರು ವಿಶ್ವವಿದ್ಯಾಲಯಗಳ ಕುಲಪತಿಗಳು, ಖ್ಯಾತ ಇತಿಹಾಸಕಾರರು, ಅರ್ಥಶಾಸ್ತ್ರಜ್ಞರು ಮತ್ತು ಶಿಕ್ಷಣ ಕ್ಷೇತ್ರದ ಹಲವು ಗಣ್ಯರು, ಚಿಂತಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಮೋಹನ್ ಭಾಗವತ್

### ಹಂಪನಾ ಅವರ ‘ಚಾರುವಸಂತ’ ಮಹಾಕಾವ್ಯದ ಹಿಂದಿ ಅನುವಾದಿತ ಕೃತಿ ಬಿಡುಗಡೆ

# ‘ಜೀವನಾನುಭವದ ಅಮೃತ ಉಣಬಡಿಸುವ ಕಾವ್ಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪ್ರೊ. ಹಂಪ ನಾಗರಾಜಯ್ಯ ಅವರು ಸುಂದರ ಹಾಗೂ ಸರಳವಾಗಿ ಕಾವ್ಯ ರಚಿಸಿದ್ದಾರೆ. ಅಲ್ಲಲ್ಲಿ ಸಂಸ್ಕೃತ ಪದ ಬಳಕೆ ಮಾಡಿದ್ದರೂ ಅವು ಓದುಗರಿಗೆ ಸುಲಭವಾಗಿ ಅರ್ಥವಾಗುವಂತಿವೆ. ಇದನ್ನು ಅವರು ದೇಸಿ ಕಾವ್ಯ ಎಂದು ಕರೆದಿದ್ದಾರೆ. ಆದರೆ, ಕಾವ್ಯದ ಕಥಾವಸ್ತು ದೇಸಿಯವಾಗಿಲ್ಲ. ಅದನ್ನು ಚಿತ್ರಿಸಲು ದೇಸಿ ಪರಂಪರೆ ಅನುಸರಿಸಿದ್ದಾರೆ’ ಎಂದು ವಿದ್ವಾಂಸ ಪ್ರೊ.ಅಶ್ವತ್ಥನಾರಾಯಣ ಘಟ್ಟಮರಾಜು ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ಹಂಪನಾ ಅವರ ‘ಚಾರುವಸಂತ’ ಮಹಾಕಾವ್ಯದ ಹಿಂದಿ ಅನುವಾದಿತ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಭಾಷೆ ಅರ್ಥೈಸಿಕೊಳ್ಳುವುದು ಕಷ್ಟ ಎಂದು ಹಲವರು ಮಹಾಕಾವ್ಯ ಓದುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ ಆಧುನಿಕ ಯುಗದಲ್ಲಿ ಅವುಗಳ ರಚನೆ ಕಡಿಮೆಯಾಗಿದೆ. ಆದರೆ, ಹಂಪನಾ ಅವರ ಕಲ್ಪನೆಯೇ ಅಮೋಘವಾದುದು. ಈ ಕಾವ್ಯ ಆಧುನಿಕ ಯುಗದ ಯುವಕರಿಗೂ ಆಪ್ತವೆನಿಸುತ್ತದೆ’ ಎಂದರು.

‘ಚಾರುವಸಂತ’ ಮಹಾಕಾವ್ಯದ ಮೂಲಕ ಹಂಪನಾ ಅವರು ಓದುಗರಿಗೆ ಜೀವನಾನುಭವದ ಅಮೃತವನ್ನು ಉಣಬಡಿಸಿದ್ದಾರೆ. ಈ ಕಾವ್ಯದ ಕಥಾವಸ್ತು ಅಪ್ಪಟ ಚಿನ್ನ. ಅದಕ್ಕೆ ಹಲವು ಮುತ್ತುಗಳನ್ನು ಪೋಣಿಸಿದ್ದಾರೆ. ಕಾವ್ಯದ ವಸ್ತು ಪ್ರಾಚೀನವಾದರೂ ಅದು ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಅನುವಾದಕರು ಬಹಳ ಸುಂದರ ಹಾಗೂ ಸರಳ ಪದಗಳಲ್ಲಿ ಕಾವ್ಯದ ಸೊಬಗನ್ನು ಹಿಂದಿ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ’ ಎಂದು ತಿಳಿಸಿದರು.

ಕೃತಿಯ ಅನುವಾದಕಿ ಶಾಕಿರ ಖಾನಂ, ‘ಪ್ರೇಮ, ದಯೆ, ಕರುಣೆ, ಕೋಪ, ದ್ವೇಷ, ತುಂಟತನ, ರಾಜನ ಜವಾಬ್ದಾರಿ, ಸಾಮಾನ್ಯ ಜನರ ಬೇಜವಾಬ್ದಾರಿತನ ಹೀಗೆ ಎಲ್ಲ ಅಂಶಗಳ ಮೇಲೂ ಹಂಪನಾ ಅವರು ಈ ಕೃತಿಯಲ್ಲಿ ಬೆಳಕು ಚೆಲ್ಲಿದ್ದಾರೆ. ರಾಜನಾದವನು ಸಮಾಜವನ್ನು ಹೇಗೆ ನೋಡಬೇಕು ಎಂಬುದನ್ನೂ ತಿಳಿಸಿದ್ದಾರೆ. ಈ ಕಾವ್ಯ ‘ವಸುದೈವ ಕುಟುಂಬಕಂ’ ಎಂಬ ಸಂದೇಶವನ್ನು ಸಾರುತ್ತದೆ. ಈ ಕಾವ್ಯದಲ್ಲಿ ಹಂಪನಾ ಅವರು ತಂದೆತನವನ್ನು ಸಂಭ್ರಮಿಸಿದ್ದಾರೆ’ ಎಂದರು.

ಹಂಪನಾ ಅವರ ಪುತ್ರಿ ಎಚ್.ಎನ್.ಆರತಿ, ‘ಅಪ್ಪನ ಅನುವಾದಿತ ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದು ಹೆಮ್ಮೆಯ ಸಂಗತಿ. ಕೆಲ ವಿಚಾರಗಳು ನಮ್ಮಲ್ಲಿ ಚಿಗುರೊಡೆಯುವ ಮುನ್ನವೇ ಅಪ್ಪನ ಮನದಲ್ಲಿ ಅವು ಹೆಮ್ಮರವಾಗಿ ಬೆಳೆದಿರುತ್ತವೆ. ಅವರಲ್ಲಿನ ಚೈತನ್ಯಶೀಲ ಮನಸ್ಸು ಸದಾ ಬೆರಗು ಮೂಡಿಸುವಂತಹದ್ದು’ ಎಂದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪುಸ್ತಕ ಬಿಡುಗಡೆ ಮಾಡಿದರು. ವಿಜಯವಾಣಿ ಸಂಪಾದಕ ಚನ್ನೇಗೌಡ ಇದ್ದರು.

ಕಾರ್ಯಕ್ರಮದಲ್ಲಿ (ಎಡದಿಂದ) ಹಂಪನಾ ಅವರ ಪುತ್ರಿಯರಾದ ರಾಜಶ್ರೀ, ಎಚ್.ಎನ್.ಆರತಿ, ಪತ್ರಕರ್ತ ಜಿ.ಎನ್.ಮೋಹನ್, ಅನುವಾದಕಿ ಶಾಕಿರ ಖಾನಂ, ಕಮಲಾ ಹಂಪನಾ, ಹಂಪನಾ, ಪ್ರೊ.ಅಶ್ವತ್ಥನಾರಾಯಣ ಘಟ್ಟಮ ರಾಜು ಹಾಗೂ ಅನುವಾದಕ ಮಾಹೇರ್ ಮನ್ಸೂರ್ ಅವರು ಹಿಂದಿ ಅನುವಾದಿತ ಕೃತಿ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

### ಅನುವಾದಿತ ಕಾವ್ಯದ ಪರಿಚಯ

ಕಾವ್ಯದ ಹೆಸರು: ಚಾರುವಸಂತ
ಅನುವಾದಕರು: ಮಾಹೇರ್ ಮನ್ಸೂರ್ ಮತ್ತು ಶಾಕಿರ ಖಾನಂ
ಪುಟಗಳು: 232
ದರ: ₹495
ಪ್ರಕಾಶಕರು: ಅಮನ್ ಪ್ರಕಾಶನ

## ಉಗ್ರರಿಂದ ಸ್ಯಾಟ್‌ಲೈಟ್ ಫೋನ್ ಬಳಕೆ

**ಶ್ರೀನಗರ (ಪಿಟಿಐ):** ಕಾಶ್ಮೀರದಲ್ಲಿ ಉಗ್ರ ಚಟುವಟಿಕೆಗಳಿಗೆ ಸ್ಯಾಟ್‌ಲೈಟ್ ಫೋನ್‌ಗಳು, ವೈ–ಫೈ ಸಂಪರ್ಕ ಸಾಧ್ಯವಿರುವ ‘ಥರ್ಮಲ್ ಇಮೇಜರಿ’ ಸಾಧನಗಳ ಬಳಕೆಗೆ ಉಗ್ರರು ಮುಂದಾಗಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ರಾತ್ರಿ ವೇಳೆ ಭದ್ರತಾ ಪಡೆಗಳ ಕಣ್ಣಿಗೆ ಬೀಳದೇ, ಪಾರಾಗಲು ಉಗ್ರರು ಈ ಸಾಧನಗಳ ಬಳಕೆಗೆ ಮುಂದಾಗಿದ್ದಾರೆ. ಕಾಶ್ಮೀರದ ಕೆಲ ಪ್ರದೇಶಗಳಲ್ಲಿ ಇಂಥ ಸಾಧನಗಳು ಪತ್ತೆಯಾಗಿವೆ ಎಂದಿದ್ದಾರೆ.

1ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಶಾರದಮ್ಮನವರು
ಲೇಟ್ ಶ್ರೀ ಪಟೇಲ್ ನಾರಾಯಣರೆಡ್ಡಿ ಇವರ ಧರ್ಮಪತ್ನಿ
ರೂಪೇನ ಅಗ್ರಹಾರ, ಬೊಮ್ಮನಹಳ್ಳಿ, ಬೆಂಗಳೂರು–68.
ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷವಾಯಿತು
“ನಿಮ್ಮ ಸ್ವರ್ಗೀಯ ನೆನಪು ಸದಾ ವಸಂತ,
ನಿಮ್ಮ ಸ್ಮರಣೆಯೇ ನಮ್ಮ ಜೀವನದ ದೀಪೋತ್ಸವ”
ಸದಾ ಸ್ಮರಿಸುವಾ
ಎನ್.ಜಿ.ಆರ್ ಕುಟುಂಬವರ್ಗದವರು

ರಾಜ್ಯ ಜೆಡಿಎಸ್ ಅಧ್ಯಕ್ಷರಾಗಿ ಸಿ.ಎಂ.ಇಬ್ರಾಹಿಂ, ಸಂಸದೀಯ ಮಂಡಳಿ ಅಧ್ಯಕ್ಷರಾಗಿ ಎಚ್‌.ಕೆ.ಕುಮಾರಸ್ವಾಮಿ ಅಧಿಕಾರ ಸ್ವೀಕಾರ

# ‘ಮಿಷನ್ 123’ ಸಾಕಾರಗೊಳಿಸುವ ವಿಶ್ವಾಸ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಡಿಎಸ್ ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಸಿ.ಎಂ.ಇಬ್ರಾಹಿಂ, ಸಂಸದೀಯ ಮಂಡಳಿಯ ಅಧ್ಯಕ್ಷರಾಗಿ ಎಚ್‌.ಕೆ. ಕುಮಾರಸ್ವಾಮಿ ಭಾನುವಾರ ಅಧಿಕಾರ ವಹಿಸಿಕೊಂಡರು.

ಜೆ.ಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರಿಂದ ಪಕ್ಷದ ಧ್ವಜ ಸ್ವೀಕರಿಸುವ ಮೂಲಕ ಇಬ್ರಾಹಿಂ ಅವರು ಪಕ್ಷದ ಚುಕ್ಕಾಣಿ ಹಿಡಿದರು.

ವಿಧಾನಪರಿಷತ್ ಕಾಂಗ್ರೆಸ್ ಸದಸ್ಯರಾಗಿದ್ದ ಇಬ್ರಾಹಿಂ, ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನ ಸಿಗಲಿಲ್ಲವೆಂದು ಮುನಿಸಿಕೊಂಡು ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಜೆಡಿಎಸ್ ಸೇರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ದೇವೇಗೌಡರು, ‘ಒಬ್ಬ ಸಮರ್ಥ, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಹಿರಿಯ ವ್ಯಕ್ತಿಗೆ ಪಕ್ಷದ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಇಬ್ರಾಹಿಂ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಾರೆ. ಇದರ ನಡುವೆ ದೇವೇಗೌಡರ ಕುಟುಂಬದವರೇ ಎಲ್ಲ ಇದ್ದಾರೆ, ಇದು ಒಕ್ಕಲಿಗರ ಪಕ್ಷ ಎಂದೆಲ್ಲ ಅಪಪ್ರಚಾರ ಮಾಡಬಹುದು. ಆದರೆ, ನಾನು ಎಲ್ಲ ವರ್ಗದವರನ್ನು ಗುರುತಿಸಿ ಮಂತ್ರಿಮಂಡಲ ಮಾಡಿದ್ದೆ. ಮುಸ್ಲಿಮರಿಗೆ ಮೀಸಲಾತಿ ತಂದಿದ್ದು ನಾನೇ’ ಎಂದರು.

‘ಮುಂದಿನ ಚುನಾವಣೆಯಲ್ಲಿ ಪಕ್ಷದ ‘ಮಿಷನ್ 123’ ಸಾಕಾರಗೊಳ್ಳುವ ವಿಶ್ವಾಸವಿದೆ. ಜೆಡಿಎಸ್ ಅನ್ನು ಯಾರಿಂದಲೂ ತುಳಿಯಲು ಸಾಧ್ಯವಿಲ್ಲ. ನಾವು ಮಾಡಿದ ಒಳ್ಳೆಯ ಕೆಲಸಕ್ಕೆ ಹಿಂದೆ 16 ಲೋಕಸಭಾ ಸ್ಥಾನ ಗೆದ್ದೆವು. ಇನ್ನು ಜೆಡಿಎಸ್ ಅನ್ನು ಒಕ್ಕಲಿಗರ ಪಕ್ಷವೆಂದು ಯಾರೂ ಹೇಳಬಾರದು. ಅಂದು ಮಾತುಕೊಟ್ಟಂತೆ ಇಬ್ರಾಹಿಂ ತಕ್ಕ ಉತ್ತರ ನೀಡುತ್ತಾರೆ. ನಾನೂ ಪಕ್ಷಕ್ಕಾಗಿ ದುಡಿಯುತ್ತೇನೆ’ ಎಂದರು.

ಎಚ್‌.ಡಿ.ಕುಮಾರಸ್ವಾಮಿ ಅವರು, ‘ಎರಡು ವರ್ಷಗಳ ಸಂಕಷ್ಟದ ಕಾಲದಲ್ಲಿ ಎಚ್‌.ಕೆ.ಕುಮಾರಸ್ವಾಮಿ ಅಧ್ಯಕ್ಷ ಸ್ಥಾನ ವಹಿಸಿದ್ದರು. ಈಗ ಇಬ್ರಾಹಿಂ ಅವರು ಮರಳಿ ಮನೆಗೆ (ಜೆಡಿಎಸ್) ಬಂದಿದ್ದಾರೆ. ಇಬ್ರಾಹಿಂ ಅವರ ಪಕ್ಷ ಸೇರ್ಪಡೆ ಒಂದು ಸಮಾಜವನ್ನು ಓಲೈಕೆ ಮಾಡಲು ಅಲ್ಲ. ಯಾವುದೇ ಒಂದು ಸಮಾಜದ ಪರವಾಗಿ ನಾನು ಇಲ್ಲ’ ಎಂದರು.

‘ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಬಿಜೆಪಿಯವರು ಮುಂದಿನ ಚುನಾವಣೆಯಲ್ಲಿ ಗೆಲ್ಲಲು ರೂಪುರೇಷೆ ಸಿದ್ಧ ಮಾಡಿದ್ದಾರೆಯೇ ಹೊರತು, ಜನರ ಸಮಸ್ಯೆ ಬಗೆಹರಿಸಲು, ರಾಜ್ಯದಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಚರ್ಚಿಸಿಲ್ಲ. ಕಾಂಗ್ರೆಸ್‌ನ ಬೇರೆ ಜನಪರ ವಿಚಾರಗಳು, ಅಭಿವೃದ್ಧಿ ವಿಚಾರಗಳು ಇಲ್ಲದೆ ಶೇ 40 ಕಮಿಷನ್ ವಿಷಯವನ್ನು ಇಟ್ಟುಕೊಂಡಿದ್ದಾರೆ’ ಎಂದು ಕುಮಾರಸ್ವಾಮಿ ಟೀಕಿಸಿದರು.

ಶಾಸಕರಾದ ಬಂಡೆಪ್ಪ ಕಾಶೆಂಪೂರ, ಕೆ.ಎಂ.ಕೃಷ್ಣಾರೆಡ್ಡಿ, ದಾಸರಹಳ್ಳಿ ಮಂಜುನಾಥ್, ಮುಖಂಡರಾದ ಟಿ.ಎ.ಶರವಣ ಮತ್ತು ಜಫ್ರುಲ್ಲಾ ಖಾನ್ ಇದ್ದರು.

> ಜೆಡಿಎಸ್ ಒಂದು ಕುಟುಂಬ ಇದ್ದಂತೆ. ಮೇ 4ರ ಬಳಿಕ ನಮ್ಮ ಕೆಲಸ ಆರಂಭವಾದ ವಿಧಾನಸಭೆ ಚುನಾವಣೆ ಬಳಿಕ ನಿಲ್ಲಲಿದೆ. ಬಸವನ ಬಾಗೇವಾಡಿಯಲ್ಲಿ ಮೊದಲ ಸಭೆ ನಡೆಸುತ್ತೇವೆ
> **ಸಿ.ಎಂ.ಇಬ್ರಾಹಿಂ,** ಜೆಡಿಎಸ್ ರಾಜ್ಯ ಘಟಕದ ನೂತನ ಅಧ್ಯಕ್ಷ

> ಜೆಡಿಎಸ್‌ನಲ್ಲಿ ನೂತನ ಪರ್ವ ಆರಂಭವಾಗಿದೆ. ನಮ್ಮ ಪಕ್ಷದಲ್ಲೂ ‘ಅಹಿಂದ’ ಇದೆ. ಆದರೆ, ಅಗ್ಗದ ಪ್ರಚಾರಕ್ಕೆ ನಾವು ಬೇಗ ಬಲಿಯಾಗುತ್ತೇವೆ. ಅದೇ ನಮ್ಮ ಪಕ್ಷದ ದೌರ್ಬಲ್ಯ
> **ಎಚ್‌.ಕೆ.ಕುಮಾರಸ್ವಾಮಿ,** ಜೆಡಿಎಸ್ ಸಂಸದೀಯ ಮಂಡಳಿ ಅಧ್ಯಕ್ಷ

ಎಚ್‌.ಡಿ. ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಜೆಡಿಎಸ್ ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಸಿ.ಎಂ. ಇಬ್ರಾಹಿಂ, ಸಂಸದೀಯ ಮಂಡಳಿ ಅಧ್ಯಕ್ಷರಾಗಿ ಎಚ್‌.ಕೆ. ಕುಮಾರಸ್ವಾಮಿ ಅಧಿಕಾರ ವಹಿಸಿಕೊಂಡರು –ಪ್ರಜಾವಾಣಿ ಚಿತ್ರ

## ಸುದ್ದಿ 2 ನಿಮಿಷ

### ‘ಭ್ರಷ್ಟಾಚಾರವಾಗಿದ್ದರೆ ಯಾವುದೇ ತನಿಖೆಗೂ ಸಿದ್ಧ’

**ಹೊಸಪೇಟೆ (ವಿಜಯನಗರ):** ‘ನನ್ನ ಇಲಾಖೆಯಲ್ಲಿ ಭ್ರಷ್ಟಾಚಾರವಾಗಿದ್ದರೆ ಯಾವುದೇ ತನಿಖೆಗೂ ಸಿದ್ಧ’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಶಾಸಕ ಪ್ರಿಯಾಂಕ್ ಖರ್ಗೆ ಅವರು ಇತ್ತೀಚೆಗೆ ನನ್ನ ಇಲಾಖೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದ್ದರು. ಆದರೆ, ಅನಂತರ ಆರೋಪಗಳನ್ನು ಮಾಡಿ ಟೀಕಿಸಿದ್ದಾರೆ. ಆರೋಪ, ಟೀಕೆ ಮಾಡುವುದು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶವಿದೆ. ಆದರೆ, ಸತ್ಯಕ್ಕೆ ಅಪಚಾರವಾಗುವ ರೀತಿಯಲ್ಲಿ ಆರೋಪ ಮಾಡಬಾರದು’ ಎಂದು ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಕೋಣವೊಂದು ಟೆಂಡರ್ ಸಂಪೂರ್ಣ ಪಾರದರ್ಶಕವಾಗಿ ನಡೆದಿದೆ. ಗುಣಮಟ್ಟದಲ್ಲಿ ಲೋಪದೋಷ ಕಂಡರೆ ಅನುದಾನ ಬಿಡುಗಡೆಗೊಳಿಸಿಲ್ಲ. ರೈತರ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುತ್ತಿದೆ. ಅಧಿಕಾರಿಗಳು ಸೇರಿದಂತೆ ಯಾರಿಂದಾದರೂ ಭ್ರಷ್ಟಾಚಾರವಾಗಿದ್ದರೆ ಯಾವುದೇ ತನಿಖೆಗೂ ಸಿದ್ಧ. ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದರು.

### ಮೈತ್ರಿ: ಮುಖ್ಯಮಂತ್ರಿ ಜೊತೆ ಶೀಘ್ರ ಚರ್ಚೆ– ಅಠವಲೆ

**ಬೆಳಗಾವಿ:** ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲಾಗುವುದು. ಶೀಘ್ರವೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿಯಾಗಿ ಈ ಸಂಬಂಧ ಚರ್ಚಿಸಲಾಗುವುದು’ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ರಾಷ್ಟ್ರೀಯ ಅಧ್ಯಕ್ಷರೂ ಆದ, ಕೇಂದ್ರ ಸಚಿವ ರಾಮದಾಸ್ ಅಠವಲೆ ಹೇಳಿದರು.

ಇಲ್ಲಿನ ಗಾಂಧಿ ಭವನದಲ್ಲಿ ಆರ್‌ಪಿಐ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಕಾರ್ಯಕಾರಿಣಿ ಹಾಗೂ ಬೆಳಗಾವಿ ಜಿಲ್ಲಾ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ 6 ದಶಕ ಆಡಳಿತ ನಡೆಸಿದ ಕಾಂಗ್ರೆಸ್‌ನವರು ಜಾತೀಯತೆ ಹೋಗಲಾಡಿಸಲಿಲ್ಲ. ಗಾಂಧೀಜಿ ಕನಸು ನುಚ್ಚುನೂರಾಗಿಸಿದರು. ಮೋದಿ ಪ್ರಧಾನಿಯಾದ ನಂತರ ಭ್ರಷ್ಟಾಚಾರ ನಿರ್ಮೂಲನೆಗೊಳಿಸಿದ್ದಾರೆ. ಹಾಗಾಗಿ ನಾವೂ ಬಿಜೆಪಿ ಜೊತೆಗಿದ್ದೇವೆ . ರಾಜ್ಯದಲ್ಲಿಯೂ ಪಕ್ಷ ಸಂಘಟನೆಗೆ ಒತ್ತು ನೀಡಿದ್ದೇವೆ. ಕಾರ್ಯಕರ್ತರು ತಮಗೆ ವಹಿಸಿದ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಬೇಕು’ ಎಂದು ತಿಳಿಸಿದರು.

## ದ್ವೇಷ ಭಾಷಣ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

**ರಾಯಚೂರು:** ‘ದ್ವೇಷ ಭಾಷಣ ಮತ್ತು ಪ್ರಚೋದನಕಾರಿ ಹೇಳಿಕೆಗೆ ಸಂಬಂಧಿಸಿದಂತೆ ಶ್ರೀರಾಮಸೇನೆ ಸಂಘಟನೆಯ ಜಿಲ್ಲಾ ಘಟಕದ ಸಂಚಾಲಕ ರಾಜಚಂದ್ರ ರಾಮನಗೌಡ ಮತ್ತು ಅಧ್ಯಕ್ಷ ಮಂಜುನಾಥ ಭಾವಿ ಎಂಬುವರನ್ನು ಪಶ್ಚಿಮ ಪೊಲೀಸ್ ಠಾಣೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

‘ರಾಮನವಮಿ ದಿನದಂದು ನಗರದ ರಾಮಲಿಂಗೇಶ್ವರ ದೇವಸ್ಥಾನದ ಮೈದಾನದಲ್ಲಿ ಶ್ರೀರಾಮಸೇನೆ ಸಂಘಟನೆ ಆಯೋಜಿಸಿದ್ದ ಹಿಂದೂ ಸಮಾವೇಶದಲ್ಲಿ ಪ್ರಚೋದನಾಕಾರಿ ಹೇಳಿಕೆ, ಒಂದು ಧರ್ಮದ ವಿರುದ್ಧ ದ್ವೇಷ ಭಾಷಣ ಮತ್ತು ಭಯ ಉಂಟು ಮಾಡಿದ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಘಟನೆ ಬಳಿಕ ಇಬ್ಬರೂ ತಲೆ ಮರೆಸಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ನಮ್ಮ ಮೆಟ್ರೋ namma metro | 75 Azadi Ka Amrit Mahotsav

**ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ**

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು - 560038. ದೂರವಾಣಿ: 080-25191039
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂ: ಬಿಎಂಆರ್‌ಸಿಎಲ್/ಓ&ಎಂ/ಸಿಎಸ್‌ಡಬ್ಲ್ಯೂ/ಎಲ್2/02/2022–23 ದಿ: 18.04.2022

**ಟೆಂಡರ್ ಪ್ರಕಟಣೆ**

ಬಿಎಂಆರ್‌ಸಿಎಲ್ ಇವರು **“ಮಾರ್ಗ–2 ರೀಚ್–4ರ ರಾಷ್ಟ್ರೀಯ ವಿದ್ಯಾಲಯ ರೋಡ್ (ಆರ್‌ವಿಆರ್), ಬನಶಂಕರಿ ( ಬಿಎಸ್‌ಎನ್‌ಕೆ), ಜಯಪ್ರಕಾಶ್ ನಗರ (ಜೆಪಿಎನ್) ಮತ್ತು ಯೆಲಚೇನಹಳ್ಳಿ (ಪಿಯುಟಿಹೆಚ್) ಮೆಟ್ರೋ ನಿಲ್ದಾಣದ ಕಟ್ಟಡಗಳಿಗೆ ಪೈಂಟಿಂಗ್, ಡಿಸ್ಟೆಂಪರಿಂಗ್, ಕಲರ್ ವಾಷಿಂಗ್ ಮತ್ತು ಇತರೆ ಸಂಬಂಧಪಟ್ಟ ಕಾಮಗಾರಿಗಳಿಗೆ”** ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದಾಜು ವೆಚ್ಚ: **ರೂ.112.44 ಲಕ್ಷಗಳು.** ಟೆಂಡರ್ ಭದ್ರತಾ ಮೊತ್ತ: **ರೂ. 2,00,000/-** ಆನ್‌ಲೈನ್ ಮೂಲಕ ಟೆಂಡರ್ ದಸ್ತಾವೇಜುಗಳ ಮಾರಾಟ: **18.04.2022** ರಿಂದ **13.05.2022** (ಮಧ್ಯರಾತ್ರಿಯ ವರೆಗೆ). ಬಿಡ್ ಪೂರ್ವ ಸಭೆ: **10.05.2022, 11.30 ಗಂಟೆಗೆ.** ಟೆಂಡರ್ ಸಲ್ಲಿಸುವ ದಿನಾಂಕ: **18.05.2022 (11.00 ಗಂಟೆಯಿಂದ 15.00 ಗಂಟೆವರೆಗೆ).** ಟೆಂಡರ್ ತೆರೆಯುವ ದಿನಾಂಕ: **18.05.2022 (15.30 ಗಂಟೆಗೆ).** ಟೆಂಡರ್ ದಸ್ತಾವೇಜು ಬೆಲೆ: **ರೂ.11,800/-.** ಪೂರ್ಣಗೊಳಿಸುವ ಅವಧಿ: **12 ತಿಂಗಳು.** ಟೆಂಡರ್‌ನ್ನು ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ **http://tender.bmrc.co.in** ಗೆ ಭೇಟಿ ನೀಡುವುದು.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಓ&ಎಂ)

**ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ.22, 17ನೇ ‘ಎಫ್’ ಕ್ರಾಸ್, ಹಳೆಯ ಮದ್ರಾಸ್ ರಸ್ತೆ, ಇಂದಿರಾನಗರ, 2ನೇ ಹಂತ, ಬಿಎಂಟಿಸಿ ಬಸ್ ಡಿಪೋ ಹತ್ತಿರ, ಬೆಂಗಳೂರು–38, ದೂ: 080–25196124–29, ಫ್ಯಾಕ್ಸ್: 25196110 ವೆಬ್‌ಸೈಟ್: www.kuidfc.com ಇ–ಮೇಲ್: info@kuidfc.com
ಸಂ. KUIDFC/KIUWMIP/CORR(TRH1)/1/2021-TM ದಿ: 18.04.2022

**ಪ್ರಸ್ತಾವನೆ ಕೋರಿಕೆಗಾಗಿ ಇ–ಟೆಂಡರ್ ಪ್ರಕಟಣೆ**

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಸಂಸ್ಥೆಯು ಅನುಷ್ಠಾನಗೊಳಿಸುತ್ತಿರುವ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಅನುಷ್ಠಾನ ಕಾರ್ಯಕ್ರಮ (ಕ್ವಿಮಿಪ್) ಯೋಜನೆಯ ಮತ್ತು ಇತರೆ ಯೋಜನಾ ನಗರಗಳಲ್ಲಿ ನೀರು ಮತ್ತು ತ್ಯಾಜ್ಯ ನೀರಿನ ಸೇವಾಶುಲ್ಕಗಳ ಬಿಲ್ಲಿಂಗ್ ಮತ್ತು ಸಂಗ್ರಹಣೆ/ಪಾವತಿ **(Water & Wastewater Service Charges Billing and Collection/Payment)**, ಆದಾಯರಹಿತ ನೀರಿನ ನಿರ್ವಹಣೆ **(Non Revenue Water Management),** ನೀರಿನ ಸೇವೆಗಳ ಲೆಕ್ಕಪತ್ರ ನಿರ್ವಹಣೆ (Water Accounting), ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸ್ವತ್ತುಗಳ ಜಿ.ಐ.ಎಸ್ ಆಧಾರಿತ ನಿರ್ವಹಣೆ ವ್ಯವಸ್ಥೆಗಾಗಿ **(GIS enabled Enterprise Asset Management System)** ಮಾಹಿತಿ ತಂತ್ರಜ್ಞಾನ **(IT)** ಸೇವೆಗಳನ್ನು ಒದಗಿಸಲು ಹಾಗೂ ಯೋಜನಾ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲು ಮತ್ತು 07 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಾಫ್ಟ್‌ವೇರ್ ಸಮಾಲೋಚಕರ ನೇಮಕಾತಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದೆ. RFP ದಾಖಲೆಯು **https://eproc.karnataka.gov.in** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **18.04.2022** ರಿಂದ **21.05.2022**ರ **17.30 ಗಂಟೆಗಳವರೆಗೆ ಲಭ್ಯವಿರುತ್ತದೆ. ಆಸಕ್ತರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ** ಪ್ರಸ್ತಾವನೆಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ, ಕಾರ್ಯನಿರ್ವಾಹಕ ಅಭಿಯಂತರರು **(Executive Engineer),** ಕ್ವಿಮಿಪ್, ಕೆ.ಯು.ಐ.ಡಿ.ಎಫ್.ಸಿ. ಬೆಂಗಳೂರು ರವರನ್ನು ಇ–ಮೇಲ್: **rameshts@kuidfc.com, kiuwmipjalasiri@gmail.com** ಮೂಲಕ ಸಂಪರ್ಕಿಸಬಹುದು.

ಸಹಿ/- ಕಾರ್ಯಕಾರಿ ವ್ಯವಸ್ಥಾಪಕರು, ಕ್ವಿಮಿಪ್, ಕೆ.ಯು.ಐ.ಡಿ.ಎಫ್.ಸಿ,

ನೈಸರ್ಗಿಕ ಕೃಷಿ ಉತ್ಪನ್ನಗಳು ನೇರವಾಗಿ ಗ್ರಾಹಕರಿಗೆ ಲಭ್ಯ

## ವಿದ್ಯಾರ್ಥಿಗಳಿಗೆ ನೆರವಾದ ಬೆಳವಲ

ಪ್ರಜಾವಾಣಿ ವಾರ್ತೆ

**ಮೈಸೂರು:** ಇಲ್ಲಿನ ಬೆಳಗೊಳದಲ್ಲಿರುವ ಬೆಳವಲ ಫೌಂಡೇಷನ್ ನಗರದ 8 ಬಡ ವಿದ್ಯಾರ್ಥಿಗಳಿಗೆ ಓದಿನೊಂದಿಗೆ ನೈಸರ್ಗಿಕ ವಿಧಾನದ ಕೃಷಿ ಪದ್ಧತಿಯ ತರಬೇತಿ ನೀಡಿ, ಅವರು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡುವಂತಹ ವಿನೂತನ ಪ್ರಯತ್ನಕ್ಕೆ ಕೈ ಹಾಕಿದೆ.

ಫೌಂಡೇಷನ್‌ನ 8 ಎಕರೆ ಫಾರಂನಲ್ಲಿ 2015ರಿಂದ ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸಿ ವಿವಿಧ ಬೆಳೆ ಬೆಳೆಯುತ್ತಿದೆ. ಈಗ 8 ಬಡ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಅವರಿಂದಲೇ ಬೆಳೆ ಬೆಳೆಸಿ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವಂತಹ ವ್ಯವಸ್ಥೆ ರೂಪಿಸಿದೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಫೌಂಡೇಷನ್‌ನ ಡಾ.ರಾಮಕೃಷ್ಣ, ‘ವಿದ್ಯಾರ್ಥಿಗಳ ಶಕ್ತಿಗೆ ಅನುಸಾರವಾಗಿ ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಅವರು ಅಲ್ಲಿ ನೈಸರ್ಗಿಕ ವಿಧಾನದಲ್ಲಿ ತರಕಾರಿ ಹಾಗೂ ಹಣ್ಣು ಬೆಳೆದು ಗ್ರಾಹಕರಿಗೆ ಮಾರಾಟ ಮಾಡಿ, ಬಂದ ಹಣವನ್ನು ತಮ್ಮ ವಿದ್ಯಾಭ್ಯಾಸಕ್ಕೆ ಬಳಸುತ್ತಾರೆ. ಉಚಿತವಾಗಿ ಹಣ ನೀಡುವುದಕ್ಕಿಂತ ಇದು ಮಿಗಿಲು’ ಎಂದರು.

ನಗರದ ಗೋಕುಲಂ 2ನೇ ಹಂತದಲ್ಲಿ ಭಾನುವಾರ ‘ಬೆಳವಲ ಬಜಾರ್’ ಅನ್ನು ರಾಜ್ಯ ಯೋಜನಾ ಆಯೋಗದ ಸದಸ್ಯ ಎ.ಸಿ.ಲಕ್ಷ್ಮಣ ಹಾಗೂ ಜಾನಪದ ವಿದ್ವಾಂಸ ಕಾಳೇಗೌಡ ನಾಗವಾರ ಉದ್ಘಾಟಿಸಿದರು.

ವಿದ್ಯಾರ್ಥಿಗಳಾದ ಪ್ರಿಯಾಂಕಾ, ಮದನ, ವಿಜಯ್, ಶಶಾಂಕ್, ದರ್ಶನ್, ಭಾಸ್ಕರ್, ರಾಜು ನೈಸರ್ಗಿಕವಾಗಿ ಬೆಳೆದ ಬಾಳೆಹಣ್ಣು, ಕೊತ್ತಂಬರಿ ಸೊಪ್ಪು, ಕರಿಬೇವು, ಪಾಲಕ್, ಚಕ್ಕೋತ, ನುಗ್ಗೆ ಕಾಯಿ, ಹುಣಸೆಹಣ್ಣು, ರೋಜ್ ಆ್ಯಪಲ್, ಸಪೋಟ, ಪಪ್ಪಾಯ ಹಣ್ಣು ಮಾರಾಟಕ್ಕೆ ಇರಿಸಿದ್ದಾರೆ. ಮುಂದಿನ ದಿನಗಳಲ್ಲಿ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶವನ್ನೂ ಹೊಂದಿದ್ದಾರೆ.

ವಿದ್ಯಾರ್ಥಿನಿ ಪ್ರಿಯಾಂಕಾ ಅವರು, ‘ಫೌಂಡೇಷನ್ ನಮಗೆ ಈ ವಿಧದಲ್ಲಿ ನೆರವಾಗಿದೆ. ಯಾವುದೇ ಮಧ್ಯವರ್ತಿ ಇಲ್ಲದೇ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಸೌಲಭ್ಯ ಇದೆ’ ಎಂದರು.

ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ‘ಬೆಳವಲ ಬಜಾರ್’ನ್ನು ರಾಜ್ಯ ಯೋಜನಾ ಆಯೋಗದ ಸದಸ್ಯ ಲಕ್ಷ್ಮಣ ಭಾನುವಾರ ಉದ್ಘಾಟಿಸಿದರು. ಫೌಂಡೇಷನ್‌ನ ಡಾ.ರಾಮಕೃಷ್ಣ, ಸ್ವಾಮಿ ಆನಂದ್, ಡಿ.ಬನುಮಯ್ಯ ಕಾಲೇಜಿನ ಪ್ರಾಂಶುಪಾಲ ಪ್ರೊ.ಭದ್ರಪ್ಪ ಹೆನ್ಲಿ, ಜಾನಪದ ವಿದ್ವಾಂಸ ಕಾಳೇಗೌಡ ನಾಗವಾರ ಇದ್ದಾರೆ

**ಮುಖ್ಯಾಂಶಗಳು**
- 8 ಬಡ ವಿದ್ಯಾರ್ಥಿಗಳಿಗೆ ತರಬೇತಿ
- 8 ಎಕರೆ ಫಾರಂನಲ್ಲಿ ನೈಸರ್ಗಿಕ ಕೃಷಿ
- ‘ಬೆಳವಲ ಬಜಾರ್’ ಉದ್ಘಾಟನೆ

## ಅಣುಶಕ್ತಿ ಆಯೋಗ ಅಧ್ಯಕ್ಷರ ಅವಧಿ ವಿಸ್ತರಣೆ

**ನವದೆಹಲಿ (ಪಿಟಿಐ):** ಅಣುಶಕ್ತಿ ಆಯೋಗದ ಅಧ್ಯಕ್ಷ ಕೆ.ಎನ್.ವ್ಯಾಸ್ ಅವರ ಅಧಿಕಾರದ ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ನಿಗದಿಯಂತೆ ಮೇ 3, 2022ರಂದು ಅವರ ಅಧಿಕಾರವಧಿಯು ಅಂತ್ಯವಾಗಬೇಕಿತ್ತು.

ಅವರಿಗೆ ಸೇವಾವಧಿ ವಿಸ್ತರಣೆ ಸಿಗುತ್ತಿರುವುದು ಇದು ಎರಡನೇ ಬಾರಿ. ಅಣುಶಕ್ತಿ ಆಯೋಗದ ಮೊದಲ ಅಧ್ಯಕ್ಷರಾಗಿ ಸೆಪ್ಟೆಂಬರ್ 2018ರಲ್ಲಿ ನೇಮಕಗೊಂಡಿದ್ದರು. ಅವರು ಅಣುಶಕ್ತಿ ರಿಯಾಕ್ಟರ್‌ಗಳ ವಿನ್ಯಾಸ ಮತ್ತು ವಿಶ್ಲೇಷಣೆ ಕ್ಷೇತ್ರದಲ್ಲಿ ಪರಿಣತಿ ಹೊಂದಿದ್ದಾರೆ.

## ಕೆಲಸ ನಡೆದಿದೆ; ಮಾಡಿಸಿದ್ವಾರೆಂದು ಎಲ್ಲರಿಗೂ ತಿಳಿದಿಲ್ಲ!

**ಒಂದನೇ ಪುಟದಿಂದ...**

ಸಾಮಾನ್ಯವಾಗಿ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಅನುದಾನದ ಬಳಕೆ, ಗುತ್ತಿಗೆದಾರರ ಮಾಹಿತಿ ಸೇರಿದಂತೆ ಕಾಮಗಾರಿಯ ವಿವರಗಳು ಹಾಗೂ ಸ್ಥಳೀಯ ಶಾಸಕರು ಮೊದಲಾದ ಜನಪ್ರತಿನಿಧಿಗಳ ಭಾವಚಿತ್ರಗಳಿರುವ ಫಲಕಗಳನ್ನು ಹಾಕಲಾಗುತ್ತದೆ. ಆದರೆ, ಹಿಂಡಲಗಾದಲ್ಲಿ ಅಂತಹ ಫಲಕಗಳು ಕಂಡುಬರಲಿಲ್ಲ. ಕೆಲವೆಡೆ ರಸ್ತೆಗಳು ಆಗಲೇ ಹಾಳಾಗಿವೆ. ಚರಂಡಿ ಕಾಮಗಾರಿಗಳು ಮುಗಿದಿಲ್ಲ.

**ವೇಗವಾಗಿ ಕಾಮಗಾರಿ...:** ‘ಸಂತೋಷ್ ಅವರು ಕಾಮಗಾರಿಗಳನ್ನು ನಡೆಸುತ್ತಿದ್ದುದ್ದನ್ನು ಗಮನಿಸಿದ್ದೇವೆ. ಇವೆಲ್ಲವೂ ಅವರೇ ಮಾಡಿಸಿದ ರಸ್ತೆಗಳು. ಅವರು ಅನುಮತಿ ಪಡೆದಿದ್ದರೋ, ಇಲ್ಲವೋ ನಮಗೆ ಗೊತ್ತಿಲ್ಲ’ ಎಂದು ಲಿಂಗರಾಜ ಕಾಲೊನಿ, ಸಿದ್ಧಾರ್ಥನಗರ, ಲಕ್ಷ್ಮಿ ನಗರ, ಕಲ್ಮೇಶ್ವರ ನಗರ ಮತ್ತು ಗ್ರಾಮ ಪಂಚಾಯಿತಿ ಸುತ್ತಮುತ್ತಲಿನ ನಿವಾಸಿಗಳು ಪ್ರತಿಕ್ರಿಯಿಸಿದರು.

‘ಮಹಾಲಕ್ಷ್ಮಿ ದೇವಸ್ಥಾನ ಸುತ್ತಲೂ, ದೇವಿ ಮೂರ್ತಿ ಪ್ರತಿಷ್ಠಾಪನೆ ವೇದಿಕೆ ಎದುರು ಪೇವರ್ಸ್ ಅಳವಡಿಕೆಯಾಗಿದೆ. ಅದನ್ನು ವ್ಯಕ್ತಿಯೊಬ್ಬರು ಮಾಡಿಸುತ್ತಿದ್ದರು. ಅವರು ಸಂತೋಷ್ ಎನ್ನುವುದು ಅವರು ಆತ್ಮಹತ್ಯೆ ಮಾಡಿಕೊಂಡ ನಂತರ ಪತ್ರಿಕೆ, ಟಿವಿಗಳಲ್ಲಿ ಬಂದ ಫೋಟೊ ನೋಡಿದಾಗ ತಿಳಿಯಿತು’ ಎಂದು ಸಮೀಪದ ಕಿರಾಣಿ ಅಂಗಡಿಯೊಂದರ ಮಾಲೀಕರು ತಿಳಿಸಿದರು.

**12 ಮಂದಿಗೆ ಉಪಗುತ್ತಿಗೆ...:** ಗ್ರಾಮದಲ್ಲಿ ಕೆಲಸ ನಡೆದಿರುವುದನ್ನು ಬಿಜೆಪಿ ಮುಖಂಡರು ಹೇಳುತ್ತಾರೆ. ಆದರೆ, ಅದಕ್ಕೆ ಸಂತೋಷ್ ಕಾರಣವಲ್ಲ ಎನ್ನುವುದು ಅವರ ವಾದ. ‘ಈ ಕಾಮಗಾರಿಗಳಿಗೆ ಸಂತೋಷ್ ಪಾಟೀಲ ಹಣ ಹಾಕಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಪತ್ರ ಪಡೆದು, ಕಾರ್ಯಾದೇಶ ಇದೆ ಎಂದು ಸುಳ್ಳು ಹೇಳಿ 12 ಮಂದಿಗೆ ಉಪಗುತ್ತಿಗೆ ಕೊಟ್ಟು ಕೆಲಸ ಮಾಡಿಸಿದ್ದಾರೆ. ಅವರ ಮೇಲಿನ ನಂಬಿಕೆಯಿಂದ ಗುತ್ತಿಗೆದಾರರು ಮುಂದುವರಿದಿದ್ದಾರೆ’ ಎಂದು ಬಿಜೆಪಿ ಗ್ರಾಮೀಣ ಮಂಡಳದ ಅಧ್ಯಕ್ಷ ಧನಂಜಯ ಜಾಧವ್ ಅವರು ಪ್ರತಿಕ್ರಿಯಿಸಿದರು.

ಉಪಗುತ್ತಿಗೆ ಕೊಟ್ಟಿದ್ದು ಯಾರಿಗೆ ಎನ್ನುವ ಖಚಿತ ಮಾಹಿತಿ ಇಲ್ಲ. ಅವರಲ್ಲಿ ಯಾರೊಬ್ಬರೂ, ತಮಗೆ ಹಣ ಬಂದಿಲ್ಲವೆಂದು ಮಾಧ್ಯಮದ ಮುಂದೆ ಬಂದಿಲ್ಲ. ಈ ಕುರಿತ ಪ್ರತಿಕ್ರಿಯೆಗೆ ಪಿಡಿಒ, ಜಿಲ್ಲಾ ಪಂಚಾಯ್ತಿ ಸಿಇಒ ಎಚ್.ವಿ. ದರ್ಶನ್ ಲಭ್ಯರಾಗಲಿಲ್ಲ.

**ದರ್ಗಾದಲ್ಲಿ ಕರಗ...** ಐತಿಹಾಸಿಕ ಧರ್ಮರಾಯ ಸ್ವಾಮಿ ಕರಗ ಉತ್ಸವದ ಅಂಗವಾಗಿ ಬೆಂಗಳೂರಿನ ಚಿಕ್ಕಪೇಟೆಯ ಹಜ್ರತ್ ತವಕ್ಕಲ್ ಶಾ ಮಸ್ತಾನ್ ಸೋಹರ್ವಾರ್ಡಿ ರಹಮತ್‌ಉಲ್ಲಾ ದರ್ಗಾದಲ್ಲಿ ಭಾನುವಾರ ಬೆಳಗಿನ ಜಾವ ಕರಗಧಾರಿ ಜ್ಞಾನೇಂದ್ರ ಅವರು ಕರಗ ಹೊತ್ತು ಪ್ರದಕ್ಷಿಣೆ ಹಾಕಿದರು .
ಪ್ರಜಾವಾಣಿ ಚಿತ್ರ:ಎಂ.ಎಸ್.ಮಂಜುನಾಥ್

## ಕಾಂಗ್ರೆಸ್‌ಗೆ ರಿಪುನ್ ರಾಜೀನಾಮೆ, ಟಿಎಂಸಿಗೆ ಸೇರ್ಪಡೆ

**ಗುವಾಹಟಿ (ಪಿಟಿಐ):** ಕಾಂಗ್ರೆಸ್‌ನ ಅಸ್ಸಾಂ ಘಟಕದ ಮಾಜಿ ಅಧ್ಯಕ್ಷ ರಿಪುನ್ ಬೋರಾ ಭಾನುವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದು, ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಸಮ್ಮುಖದಲ್ಲಿ ಟಿಎಂಸಿಗೆ ಸೇರ್ಪಡೆಗೊಂಡರು.

‘ಇಂದು ಎಐಟಿಸಿಯ ಕುಟುಂಬಕ್ಕೆ ಸೇರ್ಪಡೆಯಾದ ಧೀಮಂತ, ನುರಿತ ರಾಜಕಾರಣಿ ಶ್ರೀ ರಿಪುನ್ ಬೋರಾ ಅವರಿಗೆ ಅತ್ಯಂತ ಆತ್ಮೀಯ ಸ್ವಾಗತ. ನಮ್ಮ ಜನರ ಯೋಗಕ್ಷೇಮಕ್ಕಾಗಿ ನೀವು ನಮ್ಮೊಟ್ಟಿಗೆ ಕೆಲಸ ಮಾಡಲು ಎದುರು ನೋಡುತ್ತಿರುವಿರಿ. ನಿಮ್ಮ ಬರುವಿಕೆಯಿಂದ ನಮಗೆ ತುಂಬಾ ಸಂತೋಷವಾಗಿದೆ’ ಎಂದು ಅಭಿಷೇಕ್ ಬ್ಯಾನರ್ಜಿ ಅವರು ಟ್ವೀಟ್ ಮಾಡಿದ್ದಾರೆ.

ರಿಪುನ್ ಬೋರಾ

ಬೋರಾ ಅವರು ಅಸ್ಸಾಂನಲ್ಲಿ ವಿರೋಧ ಪಕ್ಷಗಳ ಜಂಟಿ ಅಭ್ಯರ್ಥಿಯಾಗಿ, ಇತ್ತೀಚಿನ ರಾಜ್ಯಸಭಾ ಚುನಾವಣೆಯಲ್ಲಿ ಜಯಗಳಿಸುವಲ್ಲಿ ವಿಫಲರಾಗಿದ್ದರು.

**‘ಬಿಜೆಪಿ ಜತೆ ರಹಸ್ಯ ಒಪ್ಪಂದ’:** ‘ಬಿಜೆಪಿ ವಿರುದ್ಧ ಹೋರಾಡುವ ಬದಲು ಒಂದು ವರ್ಗದ ಹಿರಿಯ ನಾಯಕರು ಆ ಪಕ್ಷದ ಸರ್ಕಾರದ, ಮುಖ್ಯವಾಗಿ ಮುಖ್ಯಮಂತ್ರಿಗಳ ಜತೆ ರಹಸ್ಯ ಒಪ್ಪಂದ ಮಾಡಿಕೊಂಡಿದ್ದಾರೆ’ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕಳುಹಿಸಿದ ರಾಜೀನಾಮೆ ಪತ್ರದಲ್ಲಿ ಬೋರಾ ಅವರು ಆರೋಪಿಸಿದ್ದಾರೆ.

## ‘ದಕ್ಷಿಣದಲ್ಲಿ ಬದಲಾವಣೆಗೆ ಕರ್ನಾಟಕ ನಾಂದಿ ಹಾಡಲಿ’

ಒಂದನೇ ಪುಟದಿಂದ...

‘ಬಡವರು, ಶೋಷಿತರು, ಹಿಂದುಳಿದವರು, ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದವರು, ಮಹಿಳೆಯರು ಸೇರಿದಂತೆ ದುರ್ಬಲ ವರ್ಗದವರ ಬದುಕಿನಲ್ಲಿ ಬದಲಾವಣೆ ತರುವುದು ನಮ್ಮ ಉದ್ದೇಶ. ಆ ಮೂಲಕ ಅವರಿಗೆ ಘನತೆಯ ಬದುಕು ಕಟ್ಟಿಕೊಡಬೇಕು. ಕಳೆದ 70 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಜನರಿಗೆ ಘನತೆಯ ಬದುಕು ಕಟ್ಟಿಕೊಟ್ಟಿಲ್ಲ. ಶೌಚಾಲಯ ನಿರ್ಮಾಣ, ಉಜ್ವಲ, ಜಲ ಜೀವನ್ ಮಿಷನ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಹೆಗ್ಗಳಿಕೆ ನಮ್ಮದು’ ಎಂದು ಅವರು ಬಣ್ಣಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು, ‘ಬೂತ್‌ಮಟ್ಟದಿಂದ ಕಾಂಗ್ರೆಸ್ ಪಕ್ಷವನ್ನು ಮುಕ್ತ ಮಾಡುವುದು ಬಿಜೆಪಿಯ ಮುಂದಿನ ಗುರಿ’ ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಸಚಿವರಾದ ಶಶಿಕಲಾ ಜೊಲ್ಲೆ, ಆನಂದ್ ಸಿಂಗ್, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಪಾಲ್ಗೊಂಡಿದ್ದರು.

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

**ಟೆಂಡರ್‌ಗಾಗಿ ಆಹ್ವಾನ** (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ದ್ವಿಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

| ಕಾಮಗಾರಿ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ) |
|---|---|
| ನಂ. ಬೆಂಜಮಂ/ಮುಅ(ತ್ಯಾನೀನಿ)/ಅಮುಅ(ತ್ಯಾನೀನಿ)–1)/ತಾಂ.ಸ.–1/46/2022–23 ದಿನಾಂಕ: 13.04.2022 | |
| ಶಾಂತಿನಗರದ ಕೆಎಸ್‌ಆರ್‌ಟಿಸಿ ಪ್ರಿಂಟಿಂಗ್ ಪ್ರೆಸ್ ರಸ್ತೆಯಲ್ಲಿ 15 ಎಂಎಲ್‌ಡಿ ಸಾಮರ್ಥ್ಯದ ಐಎಸ್‌ಪಿಎಸ್ ನಿರ್ಮಾಣ ಕಾಮಗಾರಿ. | ರೂ. 396.40 ಲಕ್ಷಗಳು / ರೂ. 5.95 ಲಕ್ಷಗಳು |

ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **02.05.2022**ರ ಸಂಜೆ **5.30** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04.05.2022** ರಂದು ಸಂಜೆ **4.00** ಗಂಟೆಗೆ.
ಸಹಿ/– ಮುಖ್ಯ ಅಭಿಯಂತರರು (ತ್ಯಾನೀನಿ)

ಮುಖ್ಯ ಅಭಿಯಂತರರ ಕಛೇರಿ (ಕಾವೇರಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009

| | |
|---|---|
| ನಂ. ಬೆಂಜಮಂ/ಸಿಇಕೆಟಿಇ/ತಾಂಸ–10/11/2020/68/2022–23 ದಿನಾಂಕ: 16.04.2022 | |
| ಟಿ.ಕೆ.ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿನ ಸಿಡಬ್ಲ್ಯೂಎಸ್‌ಎಸ್ ಹಂತ–1, ಹಂತ–2 ಮತ್ತು ಹಂತ–3 ರ ಪಂಪಿಂಗ್ ಸ್ಟೇಷನ್‌ಗಳಿಗೆ ಎಲೆಕ್ಟ್ರಿಕಲ್ ಸ್ವಿಚ್‌ಗೇರ್‌ಗಳ ಪುನರ್‌ಸ್ಥಾಪಿಸುವ ಕಾಮಗಾರಿ. | Rs. 40,23,99,612/- / Rs. 40,25,000/- |

ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **20.05.2022**ರ ಮಧ್ಯಾಹ್ನ **3:00** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.05.2022** ರಂದು ಸಂಜೆ **4:00** ಗಂಟೆಗೆ.
ಸಹಿ/– ಮುಖ್ಯ ಅಭಿಯಂತರರು (ಕಾವೇರಿ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/MIA/181/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಒಳನೋಟ

**ಕೊನೆಯಾಗಲಿ ಮಕ್ಕಳ ನೋವು**

**ಬೆಂಗಳೂರು:** ‘ಅನಾಥರಿಗೆ ಸಿಗದ ಆಸರೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಏ.17) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

### ಉಚಿತ ಶಿಕ್ಷಣ, ಉದ್ಯೋಗ ನೀಡಿ

ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಗಳಿಂದಾಗಿ ತಂದೆ–ತಾಯಿಯನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಸರ್ಕಾರ ಉಚಿತ ಶಿಕ್ಷಣ ಕಲ್ಪಿಸಬೇಕು. ಅನಾಥ ಮಕ್ಕಳಿಗಾಗಿಯೇ ವಿಶೇಷ ಯೋಜನೆಗಳನ್ನು ಜಾರಿ ತರಬೇಕು. ಅದರ ಸದುಪಯೋಗ ಮಕ್ಕಳಿಗೆ ಸಿಗುವಂತೆ ಎಚ್ಚರ ವಹಿಸಬೇಕು. ಪೋಷಕರಿಲ್ಲದ ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು.

**ಮಲ್ಲಿಕಾರ್ಜುನ,** ಹಂಪಿ

### ಬಾಲಸೇವಾ ಯೋಜನೆ ಚುರುಕಾಗಲಿ



ಕೋವಿಡ್ ದಾಳಿಯಿಂದಾಗಿ ಅನಾಥ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಅನಾಥ ಮಕ್ಕಳಿಗಾಗಿ ಬಾಲಸೇವಾ ಯೋಜನೆಯನ್ನು ಸರ್ಕಾರ ರೂಪಿಸಿದ್ದರೂ ಅದು ನ್ಯಾಯಸಮ್ಮತವಾಗಿ ಜಾರಿಯಾಗದಿರುವುದು ದುರದೃಷ್ಟಕರ. ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಮಕ್ಕಳಿಗೆ ಸದುಪಯೋಗ ಆಗಬೇಕು. ಈ ಬಗ್ಗೆ ಸರ್ಕಾರ ವಿಶೇಷ ಗಮನ ಹರಿಸಬೇಕು.

**ನವ್ಯಾ,** ಯಲ್ಲಾಪುರ

### ಸಾರ್ವಜನಿಕರ ನೆರವೂ ಇರಲಿ

ಕೋವಿಡ್‌ನಿಂದಾಗಿ ಹಲವು ಮಕ್ಕಳ ಬದುಕು ಅತಂತ್ರವಾಗಿದೆ. ಇಂತಹ ಮಕ್ಕಳ ನೆರವಿಗೆ ಸರ್ಕಾರ, ಸಂಘ–ಸಂಸ್ಥೆಗಳು ಮುಂದೆ ಬಂದಿದ್ದರೂ ಮಾಹಿತಿ ಕೊರತೆ ಮತ್ತು ಇತರ ಕಾರಣಗಳಿಂದ ಯಶಸ್ವಿಯಾಗುತ್ತಿಲ್ಲ. ಗ್ರಾಮೀಣ ಭಾಗಗಳಲ್ಲಿರುವ ಅನಾಥ ಮಕ್ಕಳ ಪೋಷಣೆಗೆ ಸರ್ಕಾರ ಆದ್ಯತೆ ನೀಡಬೇಕು. ಸಾರ್ವಜನಿಕರೂ ಅಗತ್ಯ ಸಹಾಯ ಮಾಡಬೇಕು.

**ನಾಗಪ್ಪ ಸಿದ್ದು,** ಬಳ್ಳಾರಿ

### ಮಕ್ಕಳ ಬದುಕಿಗೆ ಬೆಳಕಾಗಿ



ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ಅದೆಷ್ಟೋ ಮಕ್ಕಳ ಬದುಕು ಶೋಚನೀಯವಾಗಿದೆ. ಈ ಮಕ್ಕಳಿಗೆ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸುವ ಮೂಲಕ ಅವರ ಬದುಕಿಗೆ ಆಶಾಕಿರಣವಾಗಬೇಕು. ಮಕ್ಕಳಿಗೆ ಸೌಲಭ್ಯಗಳು ತಲುಪುವಂತೆ ಮಾಡಬೇಕು. ಇದರಿಂದ ಅವರು ಬದುಕು ರೂಪಿಸಿಕೊಳ್ಳಲು ನೆರವಾಗಲಿದೆ.

**ಹನುಮಂತ,** ವಿಜಯನಗರ

### ಮಕ್ಕಳ ಭವಿಷ್ಯ ಉತ್ತಮಗೊಳಿಸಿ

ಅನಾಥ ಮಕ್ಕಳಿಗೆ ಸರ್ಕಾರ ಹೆಚ್ಚಿನ ನೆರವು ನೀಡಬೇಕು. ಮಕ್ಕಳಿಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಅವರಲ್ಲಿ ಇರಬಹುದಾದ ಅನಾಥ ಪ್ರಜ್ಞೆಯನ್ನು ಹೋಗಲಾಡಿಸಬೇಕು. ಇವರಿಗೆ ಸಾಮಾಜಿಕವಾಗಿ ಒಳ್ಳೆಯ ಭವಿಷ್ಯ ರೂಪಿಸಬೇಕು. ಶಿಕ್ಷಣ, ಊಟ, ವಸತಿ ಸೌಕರ್ಯ ಕಲ್ಪಿಸುವ ಮೂಲಕ ಅನಾಥ ಮಕ್ಕಳ ಬದುಕನ್ನು ಹಸನಾಗಿಸಬೇಕು.

**ಬಸವರಾಜಪ್ಪ ಪೂಜಾರ,** ವಿಜಯನಗರ

### ಉಪಹಾರ್ ಚಿತ್ರಮಂದಿರದಲ್ಲಿ ಮತ್ತೆ ಬೆಂಕಿ ಅವಘಡ

**ನವದೆಹಲಿ:** ಇಂದು ಬೆಳಗಿನ ಜಾವ ದೆಹಲಿಯ ಉಪಹಾರ್ ಸಿನಿಮಾ ಮಂದಿರದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಚಿತ್ರ ಮಂದಿರದ ಸೀಟ್‌ಗಳು, ಪೀಠೋಪಕರಣಗಳಿಗೆ ಬೆಂಕಿ ಹೊತ್ತಿದೆ. ಬಾಲ್ಕನಿಯಲ್ಲಿ ಹೆಚ್ಚಿನ ಹಾನಿಯಾಗಿದ್ದು, ಯಾರಿಗೂ ಗಾಯವಾಗಿರುವ ಬಗ್ಗೆ ವರದಿಯಾಗಿಲ್ಲ.

1997ರ ಜೂನ್ 13ರಂದು ಇದೇ ಚಿತ್ರ ಮಂದಿರದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಂಕಿ ಅನಾಹುತ ಸಂಭವಿಸಿತ್ತು. ಆ ದುರಂತದಲ್ಲಿ 59 ಮಂದಿ ಸಾವಿಗೀಡಾಗಿದ್ದರು ಹಾಗೂ ಸುಮಾರು 100 ಮಂದಿ ಗಾಯಗೊಂಡಿದ್ದರು.

### ಇಂದಿನಿಂದ ಸೇನಾ ಕಮಾಂಡರ್‌ಗಳ ಸಮಾವೇಶ

**ನವದೆಹಲಿ (ಪಿಟಿಐ):** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸೋಮವಾರದಿಂದ 5 ದಿನಗಳ ಕಾಲ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ನೇತೃತ್ವದಲ್ಲಿ ಹಿರಿಯ ಸೇನಾಧಿಕಾರಿಗಳ ಸಮಾವೇಶ ನಡೆಯಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಏ. 21ರಂದು ಸಮಾವೇಶದಲ್ಲಿ ಹಿರಿಯ ಕಮಾಂಡರ್‌ಗಳ ಜೊತೆ ಸಮಾಲೋಚನೆ ನಡೆಸುವ ಸಾಧ್ಯತೆಯಿದೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

# ಪಠ್ಯ, ಪರೀಕ್ಷೆಗಳ ಜೊತೆ 'ಪಠ್ಯೇತರ'ವೂ ಇರಲಿ!

**ವೆಂಕಟ ಸುಬ್ಬರಾವ್. ವಿ.**

ಭಾಗ -1

**ಮೊ**ನ್ನೆ ಗೆಳೆಯರೊಬ್ಬರ ಮನೆಗೆ ಹೋಗಿದ್ದೆ. ಅಲ್ಲಿಗೆ ಬಂದಿದ್ದ ಅತಿಥಿಯೊಬ್ಬರು, ಗೆಳೆಯನ ಮಗನನ್ನು 'ಏನಯ್ಯಾ, ಎಷ್ಟನೇ ಕ್ಲಾಸು ನೀನು?' ಎಂದರು. 'ಒಂಬತ್ತು ಪಾಸಾಗಿ ಹತ್ತನೇ ಕ್ಲಾಸು' ಎಂದ ಆ ಹುಡುಗ. 'ಹತ್ತನೇ ಕ್ಲಾಸಾ' ಎಂದು ಉದ್ಗರಿಸಿದ ಆ ಅತಿಥಿ, 'ನೋಡಪ್ಪಾ, ಎಸ್ಸೆಸ್ಸೆಲ್ಸಿ ಜೀವನದಲ್ಲಿ ಟರ್ನಿಂಗ್ ಪಾಯಿಂಟು. ಗಂಭೀರವಾಗಿ ಓದಬೇಕು. ಆಟ–ಸುತ್ತಾಟ, ಟಿವಿ–ಸಿನಿಮಾ ಎಲ್ಲ ಬಿಟ್ಟು ಓದಿನ ಕಡೆಗಷ್ಟೇ ನಿನ್ನ ಗಮನ ಇರಬೇಕು. ಸೆಕೆಂಡ್ ಪಿಯುಸಿ ಮುಗಿಸುವವರೆಗೂ ಹೀಗೆ ಇರಬೇಕು, ಅರ್ಥಾಯ್ತಾ' ಅಂದರು. ಹುಡುಗ ತಲೆ ಆಡಿಸಿ ಸಮ್ಮತಿಸಿದ, ಅವರ ತಂದೆಯೂ ಮಗನ ಕಡೆ ನೋಡುತ್ತಾ, 'ಗೊತ್ತಾಯ್ತೇನೋ' ಎನ್ನುವ ಸನ್ನೆ ಮಾಡಿದರು!

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಮಕ್ಕಳಿರುವ ಮನೆಗಳಲ್ಲಿ ಸಾಮಾನ್ಯವಾಗಿ ನಡೆಯುವ ವಿದ್ಯಮಾನಗಳಿವು. ಅದರಲ್ಲೂ ಈ ಮಕ್ಕಳು ಯಾವುದಾದರೂ ಕಾರ್ಯಕ್ರಮದಲ್ಲಿ ಭೇಟಿಯಾದರೆ 'ಈ ವರ್ಷ ನೀನು ಎಸ್ಸೆಸ್ಸೆಲ್ಸಿ ಅಲ್ವಾ. ಆದ್ರೂ ಇಲ್ಲಿಗೆ ಬಂದ್ಬಿಟ್ಟಿದ್ದೀಯ' ಎನ್ನುತ್ತಾ, ಕಾರ್ಯಕ್ರಮಕ್ಕೆ ಬಂದಿದ್ದೇ ತಪ್ಪಾಯ್ತೇನೋ ಎನ್ನುವಂತೆ ಮಾತಾಡುತ್ತಾರೆ. ಕೆಲವು ಪೋಷಕರಂತೂ 'ಏಕಾಗ್ರತೆ ಡೈವರ್ಟ್ ಆಗುತ್ತೆ. ಅದಕ್ಕೆ ಮಕ್ಕಳ ಎಸ್ಸೆಸ್ಸೆಲ್ಸಿ ಮುಗಿಯೋ ತನಕ ಟಿ.ವಿ, ಕೇಬಲ್ ಎಲ್ಲ ತೆಗೆಸ್ತೇನೆ' ಎನ್ನುತ್ತಾರೆ.

> ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಜೀವನದ ಪ್ರಮುಖ ಘಟ್ಟಗಳೇ. ಮಕ್ಕಳು ಈ ಹಂತವನ್ನು ಯಶಸ್ವಿಯಾಗಿ ಪೂರೈಸಲು ಪಠ್ಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಇರಬೇಕು. ಇವು ಅವರ ಮನಸ್ಸನ್ನು ಪ್ರಫುಲ್ಲಗೊಳಿಸಿ ಓದು ಹಾಗೂ ನೆನಪಿನ ಕ್ಷಮತೆಯನ್ನು ಹೆಚ್ಚಿಸುತ್ತವೆ.

**ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಮಕ್ಕಳು, ಪೋಷಕರಿಗೆ ಸಲಹೆ**

ಈ ತರಗತಿಯಲ್ಲಿ ಓದುತ್ತಿರುವ ಮಕ್ಕಳ ವಿಚಾರದಲ್ಲಿ ಪೋಷಕರು ಏಕೆ ಹೀಗೆ ನಡೆದುಕೊಳ್ಳುತ್ತಾರೆ. ಮಕ್ಕಳು ಓದು ಬಿಟ್ಟು ಬೇರೇನೂ ಮಾಡಬಾರದೇ? ಎಲ್ಲಕ್ಕಿಂತ ಹೆಚ್ಚಾಗಿ, ಎಸ್ಸೆಸ್ಸೆಲ್ಸಿ– ದ್ವಿತೀಯ ಪಿಯುಸಿ ಪರೀಕ್ಷೆಗಳ ಬಗೆಗಿನ ಆತಂಕ ಏಕೆ? ಇದನ್ನು ನಾವು ಒಂದು ಸಣ್ಣ ಉದಾಹರಣೆಯ ಮೂಲಕ ನೋಡೋಣ.

ನೀವು ನೆಲದ ಮೇಲೆ 3 ಅಡಿಗಳ ದೂರ ಹಾರಬೇಕು ಎಂದು ಹೇಳಿದರೆ, ತಕ್ಷಣವೇ ಹಾರಿಬಿಡ್ತೀರಿ. ಅದೇ, ಎರಡು ಅಪಾರ್ಟ್‌ಮೆಂಟ್‌ಗಳ ನಡುವಿನ ಅಂತರ 3 ಅಡಿಗಳಿಷ್ಟಿದೆ. ಅದನ್ನು ಹಾರುತ್ತೀರಾ? ಎರಡು ಬೆಟ್ಟಗಳ ನಡುವೆಯೂ ಇಷ್ಟೇ ಅಂತರವಿದ್ದರೆ, ಅದನ್ನಾದರೂ ಹಾರ್ತೀರಾ? ಇಲ್ಲ ಅಲ್ಲವಾ? ಅಂತರ ಅಷ್ಟೇ ಆದರೂ, ಇದು ಸಾಧ್ಯವಿಲ್ಲ ಅಲ್ಲವಾ?

ಏಕೆಂದರೆ, ನೀವು ಇಲ್ಲಿ ಹಾರಬೇಕಿರುವುದು ದೂರವನ್ನೇ ಹೊರತು, ಎತ್ತರವನ್ನಲ್ಲ. ಆದರೂ, ನೀವೇಕೆ ಎತ್ತರವನ್ನು ನೋಡಿ ಹೆದರುತ್ತಿದ್ದೀರಿ? ಏಕೆಂದರೆ, ಅದು ಮನುಷ್ಯ ಸಹಜ ಗುಣ.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯ ವಿಚಾರದಲ್ಲೂ ಅಷ್ಟೇ. ಇಲ್ಲಿ ದೂರವೆಂದರೆ ಪರೀಕ್ಷೆ. ಎತ್ತರವೆಂದರೆ ಜವಾಬ್ದಾರಿ. ಎಲ್ಲ ಪರೀಕ್ಷೆಗಳೂ ಮಕ್ಕಳ ವಯಸ್ಸಿಗೆ ಸರಿಹೊಂದುವಂತೆ ಇದ್ದರೂ, ಜವಾಬ್ದಾರಿ ಹೆಚ್ಚಾಗಿರುತ್ತದೆ. ಹಾಗಾಗಿ ಆತಂಕ ಸಹಜ. ಮನಶಾಸ್ತ್ರಜ್ಞರ ಪ್ರಕಾರ ಪರೀಕ್ಷೆಗಳೆಂದಾಗ ಸ್ವಲ್ಪಮಟ್ಟಿನ ಆತಂಕ ಸಹಜ ಹಾಗೂ ಅದು ಕಾರ್ಯಕ್ಷಮತೆ ಹೆಚ್ಚಿಸುತ್ತದೆ. ಆದರೆ, ಅತಿಯಾದ ಆತಂಕ ಕಾರ್ಯಕ್ಷಮತೆಯನ್ನು ಗಣನೀಯವಾಗಿ ಕುಗ್ಗಿಸುತ್ತದೆ. ಆದ್ದರಿಂದ ಪೋಷಕರು ಹೆಚ್ಚು ಆತಂಕಪಡಬೇಡಿ.

ನಿಜ, 10ನೇ ತರಗತಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳು ಜೀವನದ ಪ್ರಮುಖ ಘಟ್ಟಗಳೇ. ಈ ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆಯಬೇಕು, ಒಳ್ಳೆಯ ಅಂಕಗಳನ್ನು ಪಡೆಯಬೇಕು ಎನ್ನುವ ನಿರೀಕ್ಷೆ ಇರಬೇಕು. ಅದನ್ನು ಸಾಧಿಸಲು ಸರಿಯಾದ ಪ್ರಯತ್ನ ಮಾಡಲೇಬೇಕು. ಹಾಗೆಂದು, ಈ ಗುರಿ ತಲುಪುವುದಕ್ಕಾಗಿ ವಿದ್ಯಾರ್ಥಿಗಳು ಸದಾ ಓದುತ್ತಿರಬೇಕೆಂಬುದು ಸರಿಯಾದ ಕ್ರಮವಲ್ಲ.

### ಪರಿಹಾರವೇನು?

ತಜ್ಞರ ಪ್ರಕಾರ ಈ ವಯಸ್ಸಿನಲ್ಲಿ ಮಕ್ಕಳ ಮನೋ-ದೈಹಿಕ ಬೆಳವಣಿಗೆಗಳೂ ತ್ವರಿತಗತಿಯಲ್ಲಿರುತ್ತವೆ. ಆದ್ದರಿಂದ ಓದಿನ ಜೊತೆ-ಜೊತೆಗೆ ಬೇರೆಯ ಚಟುವಟಿಕೆಗಳನ್ನು ನಿರ್ಲಕ್ಷಿಸಬಾರದು.

ಇತ್ತೀಚೆಗೆ, ಬಹಳ ಮಕ್ಕಳು ಅದರಲ್ಲೂ ದ್ವಿತೀಯ ಪಿಯುಸಿ ಓದುತ್ತಿರುವವರು, ತಮ್ಮ ಶಾಲೆಯಲ್ಲಿ ಒತ್ತಡ ಹೆಚ್ಚಾಗುತ್ತಿದೆ ಎಂದು ಹೇಳಿದ್ದನ್ನು ಗಮನಿಸಿದ್ದೇನೆ. ಬೇರೆ ಮಕ್ಕಳ ಜೊತೆಗೆ ಹೋಲಿಸಿಕೊಂಡು, ನಾವು ಅಷ್ಟು ಸಮರ್ಥರಿಲ್ಲ ಎಂದೂ ಮಾನಸಿಕವಾಗಿ ಕುಗ್ಗಿ, ಆತ್ಮವಿಶ್ವಾಸ ಕಳೆದುಕೊಳ್ಳುತ್ತಿರುವುದನ್ನು ನೋಡಿದ್ದೇನೆ. ಕೇವಲ ಓದಿನ ಕಡೆಗಷ್ಟೇ ಗಮನ ಕೊಟ್ಟಾಗ, ಒತ್ತಡ ಉಂಟಾದಾಗ ಹೀಗೆ ಆಗುತ್ತದೆ. ಓದು ಮುಖ್ಯ, ಹಾಗೆಯೇ ಜೀವನವು ಅತಿ ಮುಖ್ಯ.

### ಏನು ಮಾಡಬಹುದು?

- ಮಕ್ಕಳು, ವರ್ಷದ ಆರಂಭದಿಂದಲೇ ಒಂದು ವೇಳಾಪಟ್ಟಿ ಮಾಡಿಕೊಳ್ಳಬೇಕು. ಅದರಲ್ಲಿ ಸಮಯವನ್ನು ನಿಗದಿಪಡಿಸುವಾಗ ಶಾಲೆ, ಟ್ಯೂಷನ್, ಓದಬೇಕಾದ ವಿಷಯಗಳ ಪಟ್ಟಿಯ ಜೊತೆಗೆ, ನಿಮಗೆ ಆಸಕ್ತಿಯಿರುವ ಪಠ್ಯೇತರ ಚಟುವಟಿಕೆಗಳನ್ನು ಸೇರಿಸಬೇಕು. ಆ ನಿಗದಿತ ಸಮಯವನ್ನು ಅದೇ ಚಟುವಟಿಕೆಗಳಿಗೆ ಮೀಸಲಿಡಬೇಕು.
- ಅಂದಿನ ಪಾಠವನ್ನು ಅಂದೇ ಓದಿ. ಓದಿನ ಜೊತೆಗೆ, ಸ್ವಲ್ಪ ಆಟ, ಮನರಂಜನೆಯೂ ಇರಲಿ. ಅವಕಾಶ ಸಿಕ್ಕರೆ, ಬೇರೆಯ ಕಾರ್ಯಕ್ರಮಗಳಲ್ಲೂ ಪಾಲ್ಗೊಳ್ಳಿ. ಓದಿನ ಜವಾಬ್ದಾರಿಯೂ ನೆನಪಿರಲಿ.

**(ಮುಂದಿನ ಸಂಚಿಕೆಯಲ್ಲಿ: ಓದು ಮತ್ತು ಇತರ ಚಟುವಟಿಕೆಗಳನ್ನು ಸರಿದೂಗಿಸಲು ಕೆಲವು ಪ್ರಾಯೋಗಿಕ ಸಲಹೆಗಳು)**

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿ., ಬೆಂಗಳೂರು)

## 'ಓದಿನೊಂದಿಗೆ ಮನರಂಜನೆಯೂ ಅಗತ್ಯ'

ಮಕ್ಕಳು ಎಸ್ಸೆಸ್ಸೆಲ್ಸಿಗೋ, ದ್ವಿತೀಯ ಪಿಯುಸಿಗೆ ಬಂದಾಕ್ಷಣ, ಪೋಷಕರು ಅವರನ್ನು ಪಠ್ಯೇತರ ಚಟುವಟಿಕೆಗಳಿಂದ ದೂರಮಾಡುತ್ತಾರೆ. ಅದು ಒಳ್ಳೆಯ ಕ್ರಮವಲ್ಲ. ಆಟ, ಸುತ್ತಾಟ, ಮನರಂಜನೆ ಇವೆಲ್ಲ ಅವರ ಸಹಜ ಕ್ರಮಗಳು. ಇವೆಲ್ಲಕ್ಕೂ ಕಡಿವಾಣ ಹಾಕಿದರೆ, ಮಕ್ಕಳು ಅನಗತ್ಯ ಒತ್ತಡಕ್ಕೆ ಒಳಗಾಗುತ್ತಾರೆ.

ವರ್ಷಪೂರ್ತಿ ಸ್ನೇಹಿತರು, ಬಂಧುಗಳು ಮತ್ತು ಸಮಾಜದಿಂದ ದೂರ ಇಟ್ಟಷ್ಟು ಮಕ್ಕಳು ಒಂಟಿಯಾಗುತ್ತಾ ಹೋಗುತ್ತಾರೆ. ತಮ್ಮ ಮನಸ್ಸಿಗೆ ಅನಿಸಿದ್ದನ್ನು ಹೇಳಿಕೊಳ್ಳಲಾಗದೇ, ಒಳಒಳಗೆ ಕೊರಗುತ್ತಾ ಖಿನ್ನತೆಯ ಮಡಿಲು ಸೇರುತ್ತಾರೆ.

ನೆನಪಿಡಿ, ಒತ್ತಡದಲ್ಲಿ ಮಾಡಿದ ಯಾವ ಕೆಲಸವು ನಿರೀಕ್ಷಿತ ಫಲ ನೀಡುವುದಿಲ್ಲ. ಇದು ವಿದ್ಯಾರ್ಥಿಗಳ ಓದಿಗೂ ಅನ್ವಯಿಸುತ್ತದೆ. ಹಾಗಾಗಿ, ಪೋಷಕರು ಮಕ್ಕಳನ್ನು ಸಹಜವಾಗಿರಲು ಬಿಡಿ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಹಂತಗಳ ವಿದ್ಯಾಭ್ಯಾಸದ ಪ್ರಾಮುಖ್ಯದ ಬಗ್ಗೆ ಅರಿವು ಮೂಡಿಸಿ. ತಜ್ಞ ಉಪನ್ಯಾಸಕರನ್ನು, ಶಾಲಾ-ಕಾಲೇಜು ಪ್ರಾಚಾರ್ಯರನ್ನು ಸಂಪರ್ಕಿಸಿ, ನೆರವು ಪಡೆಯಿರಿ.

ಮಕ್ಕಳಿಗೆ ಈಜು, ಸೈಕ್ಲಿಂಗ್‌ನಂತಹ ದೈಹಿಕ ಚಟುವಟಿಕೆಗಳು, ಮನೆಯ ಕೆಲಸಗಳಲ್ಲಿ ನೆರವಾಗುವುದು, ಮನೆಗೆ ಬರುವ ನೆಂಟರಿಷ್ಟರೊಂದಿಗೆ ಹರಟುವುದು, ಬಿಡುವಿನ ವೇಳೆಯಲ್ಲಿ ಚಿಕ್ಕ ಪ್ರವಾಸ ಮಾಡಿಸಿ. ಮನೆಯ ಸಮಾರಂಭಗಳಲ್ಲಿ ಅವರನ್ನು ಭಾಗಿಯಾಗುವಂತೆ ಮಾಡಿ. ಇಂಥವೆಲ್ಲ ಅವರ ಮನಸ್ಸನ್ನು ಪ್ರಫುಲ್ಲಗೊಳಿಸಿ ಓದು ಹಾಗೂ ನೆನಪಿನ ಕ್ಷಮತೆಯನ್ನು ಹೆಚ್ಚಿಸುತ್ತವೆ.

ಪರೀಕ್ಷೆಯಲ್ಲಿ ಅಂಕಗಳಿಕೆಯಷ್ಟೇ ಮುಖ್ಯವಲ್ಲ. ಅಂಕಗಳನ್ನು ಮೀರಿ ಜೀವನವಿದೆ ಎಂಬುದು ನೆನಪಿರಲಿ.

**ಗುರುರಾಜ್ ಎಸ್.** ಪ್ರಾಚಾರ್ಯರು, ವಿದ್ಯಾ ಪೂರ್ಣಪ್ರಜ್ಞ ಕಾಲೇಜು, ಬೆಂಗಳೂರು

# ಚಾರ್ಟೆಡ್ ಅಕೌಂಟೆಂಟ್ ಕೋರ್ಸ್‌ಗೆ ತಯಾರಿ ಹೇಗೆ?

**ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ**



**ಪ್ರದೀಪ್ ಕುಮಾರ್**

**1. ನನ್ನ ತಮ್ಮ ಈಗ ದ್ವಿತೀಯ ಪಿಯುಸಿ ಮಾಡುತ್ತಿದ್ದು ಮುಂದೆ ಸಿಎ(ಚಾರ್ಟೆಡ್ ಅಕೌಂಟೆಂಟ್) ಮಾಡುವ ಉತ್ಸಾಹದಲ್ಲಿದ್ದಾನೆ. ದಯವಿಟ್ಟು ಈ ಕೋರ್ಸ್ ಕುರಿತ ಮಾಹಿತಿ ನೀಡಿ.**

**ಉದಯಚಂದ್ರ,** ಕುಂದಾಪುರ.

ಪಿಯುಸಿ ಮುಗಿಸಿ ಸಿಎ ಫೌಂಡೇಶನ್ ಕೋರ್ಸ್ ಮಾಡಿ ಇಂಟರ್‌ಮೀಡಿಯೆಟ್ ಕೋರ್ಸ್‌ಗೆ ನೋಂದಾಯಿಸಿಕೊಳ್ಳಬೇಕು. ಜೊತೆಗೆ 3 ವರ್ಷದ ಆರ್ಟಿಕಲ್ ಟ್ರೈನಿಂಗ್‌ಗೆ ಸೇರಬೇಕು. ಇಂಟರ್‌ಮೀಡಿಯೆಟ್ ಪಾಸಾದ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಪಾಸಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ, ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಒಟ್ಟಾರೆ, ಸಿಎ ಕೋರ್ಸ್ ಮಾಡಲು ಕನಿಷ್ಠ 5ರಿಂದ 6 ವರ್ಷ ಬೇಕಾಗುತ್ತದೆ. ಈ ವೃತ್ತಿಯಲ್ಲಿ ಯಶಸ್ವಿಯಾಗಲು ನಿಷ್ಠೆ, ಪ್ರಾಮಾಣಿಕತೆಯ ಜೊತೆಗೆ ಸಂಖ್ಯಾ ಕೌಶಲ, ವಿಶ್ಲೇಷಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ ಮತ್ತು ವ್ಯಾಪಾರೋದ್ಯಮ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಹಾಗಾಗಿ, ಈ ವೃತ್ತಿಗೆ ಬೇಕಾದ ಕೌಶಲಗಳ ಜೊತೆಗೆ ಸ್ವಾಭಾವಿಕ ಆಸಕ್ತಿ ಮತ್ತು ಅಭಿರುಚಿಯಿದ್ದರೆ, ಸಿಎ ಕೋರ್ಸ್ ಮಾಡಬಹುದು. ಚಾರ್ಟೆಡ್ ಅಕೌಂಟೆಂಟ್‌ಗಳಿಗೆ ಕಾರ್ಪೊರೇಟ್ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಹಲವು ವರ್ಷಗಳ ಅನುಭವದ ನಂತರ ಸ್ವತಂತ್ರವಾಗಿ ಪ್ರಾಕ್ಟೀಸ್ ಮಾಡಬಹುದು. ಹೆಚ್ಚಿನ ವಿವರಗಳಿಗೆ ಪರಿಶೀಲಿಸಿ: https://icai.org/

**2. ನಾನು ಸ್ನಾತಕೋತ್ತರ ಪದವಿಯ ನಂತರ, ಯುಪಿಎಸ್‌ಸಿ ಪರೀಕ್ಷೆಗೆ ತಯಾರಾಗಬೇಕು ಎಂದುಕೊಂಡಿದ್ದೇನೆ. ಆದರೆ, ಇದರೊಂದಿಗೆ ನನಗೆ ಕುಟುಂಬಕ್ಕೂ ಆರ್ಥಿಕ ನೆರವು ನೀಡಬೇಕಾಗಿದೆ. ಈ ಕಾರಣಕ್ಕೆ, ಪರೀಕ್ಷೆ ತಯಾರಿ ನಡೆಸಲು ನನ್ನ ಆತ್ಮವಿಶ್ವಾಸ ಕಡಿಮೆಯಾಗುತ್ತಿದೆ. ನಾನು ನನ್ನ ಗುರಿ ತಲುಪಲು ಏನು ಮಾಡಬೇಕು?**

**ಹೆಸರು,** ಊರು ತಿಳಿಸಿಲ್ಲ.

ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ. ಹಾಗಾಗಿ, ನಿಮ್ಮ ಈಗಿನ ಪರಿಸ್ಥಿತಿಯಿಂದ ಎದೆಗುಂದದೆ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ. ಸ್ನಾತಕೋತ್ತರ ಪದವಿಯ ಆಧಾರದ ಮೇಲೆ ಪೂರ್ಣಾವಧಿ/ಅರೆಕಾಲಿಕ ಕೆಲಸಗಳನ್ನು ಮಾಡುತ್ತಾ ಯುಪಿಎಸ್‌ಸಿ ಪರೀಕ್ಷೆಗೆ ತಯಾರಾಗುವುದು ಅಸಂಭವವಲ್ಲ. ದೃಢಸಂಕಲ್ಪ, ಸಮಯದ ನಿರ್ವಹಣೆ ಮತ್ತು ಪರಿಶ್ರಮದಿಂದ, ನಿಮ್ಮ ಗುರಿಯನ್ನು ಸೇರಬಹುದು. ನೆನಪಿರಲಿ; ಮನಸ್ಸಿದ್ದರೆ ಮಾರ್ಗವೆಂಬುದು ಜನಪ್ರಿಯ ನುಡಿಗಟ್ಟು ಮಾತ್ರವಲ್ಲ; ಅದರಲ್ಲಿದೆ ಮಾನವನ ಅಂತರಾಳದಲ್ಲಿರುವ ಅಪಾರವಾದ ಶಕ್ತಿಯನ್ನು ಕೇಂದ್ರೀಕರಿಸಿ, ಗುರಿಯನ್ನು ಮುಟ್ಟುವ ಗುಟ್ಟು. ಶುಭಹಾರೈಕೆಗಳು.

**3. ಬಿಎ ಕೋರ್ಸ್ ಮಾಡಿದರೆ ಮುಂದೆ ನಾವು ಯಾವ ರೀತಿಯ ಕೆಲಸಕ್ಕೆ ಸೇರಬಹುದು ತಿಳಿಸಿ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬಹುದೇ?**

ಬಿಎ ನಂತರ ಯುಪಿಎಸ್‌ಸಿ, ಕೆಪಿಎಸ್‌ಸಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹುದ್ದೆಗಳನ್ನು ಪಡೆದುಕೊಳ್ಳಬಹುದು. ನಿಮ್ಮ ಆಸಕ್ತಿಯಂತೆ ಬಿಎಸ್‌ಡಬ್ಲ್ಯು, ಎಲ್‌ಎಲ್‌ಬಿ, ಬಿಲಿಬ್, ಬಿಪಿಇಡಿ, ಸಿಎ, ಎಂಎ, ಎಂಬಿಎ ಇತ್ಯಾದಿ ಕೋರ್ಸ್‌ಗಳನ್ನು ಮಾಡಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=RW77sMi-ijY3.

**4. ನಾನು ಬಿಎಸ್‌ಸಿ(ಪಿಎಂಎಸ್) ಮುಗಿಸಿ, ಕೆಎಎಸ್‌ಗೆ ಕೋಚಿಂಗ್ ತೆಗೆದುಕೊಳ್ಳುತ್ತಿದ್ದೇನೆ. ನನಗೆ ಖಾಸಗಿಯಾಗಿ ಭೌತಶಾಸ್ತ್ರದಲ್ಲಿ ಎಂಎಸ್‌ಸಿ ಮಾಡಬೇಕೆಂದಿದೆ. ಈ ಬಗ್ಗೆ ಮಾಹಿತಿ ನೀಡಿ.**

**ಹೆಸರು,** ಊರು ತಿಳಿಸಿಲ್ಲ.

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಸೇರಿದಂತೆ ಯುಜಿಸಿ ಮಾನ್ಯತೆ ಪಡೆದ ಅನೇಕ ವಿಶ್ವವಿದ್ಯಾಲಯಗಳಲ್ಲಿ, ದೂರಶಿಕ್ಷಣದ ಮೂಲಕ ಎಂಎಸ್‌ಸಿ (ಭೌತಶಾಸ್ತ್ರ) ಮಾಡಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

**ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ**

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

**ವಿದ್ಯಾರ್ಥಿ ವೇತನ ಕೈಪಿಡಿ**

## ಲೇಡಿ ಮೆಹರ್‌ಬಾಯಿ ಡಿ ಟಾಟಾ ಎಜುಕೇಶನ್ ಸ್ಕಾಲರ್‌ಶಿಪ್ 2022

- **ವಿವರ:** ಲೇಡಿ ಮೆಹರ್‌ಬಾಯಿ ಡಿ ಟಾಟಾ ಎಜುಕೇಶನ್ ಸ್ಕಾಲರ್‌ಶಿಪ್ 2022, ನಿಗದಿತ ಕ್ಷೇತ್ರಗಳಲ್ಲಿ ವಿದೇಶದಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಬಯಸುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಭಾರತೀಯ ಮಹಿಳಾ ಪದವೀಧರರಿಗಾಗಿ ಟಾಟಾ ಎಜುಕೇಶನ್ ಟ್ರಸ್ಟ್ ನೀಡುವ ವಿದ್ಯಾರ್ಥಿವೇತನವಾಗಿದೆ.
- **ಅರ್ಹತೆ:** ಸ್ಥಿರ ಹಾಗೂ ಗಮನಾರ್ಹವಾದ ಶೈಕ್ಷಣಿಕ ದಾಖಲೆಯನ್ನು ಹೊಂದಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯದಿಂದ ಬಂದಿರುವಂತಹ ಭಾರತೀಯ ಮಹಿಳಾ ಪದವೀಧರರು ಈ ವಿದ್ಯಾರ್ಥಿವೇತನಕ್ಕೆ ಅರ್ಹರು. ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು 2022–23ಕ್ಕೆ ಅಮೆರಿಕ, ಬ್ರಿಟನ್ ಅಥವಾ ಯುರೋಪ್‌ನಲ್ಲಿನ ಪ್ರತಿಷ್ಠಿತ ವಿವಿಗಳಲ್ಲಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರಬೇಕು.
- **ಆರ್ಥಿಕ ನೆರವು:** ಕೋರ್ಸ್‌ಗೆ ಅನುಗುಣವಾಗಿ ವಿದ್ಯಾರ್ಥಿವೇತನವನ್ನು ನಿಗದಿ ಪಡಿಸಲಾಗಿದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮೇ 2, 2022
- **ಅರ್ಜಿ ಸಲ್ಲಿಕೆ ವಿಧಾನ:** ಇ ಮೇಲ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/TET7

## ಐಸಿಸಿಆರ್ ಸ್ಕಾಲರ್‌ಶಿಪ್ ಫಾರ್ ಇಂಡಿಯನ್ ಕಲ್ಚರ್ 2022–23

- **ವಿವರ:** ಐಸಿಸಿಆರ್ ಸ್ಕಾಲರ್‌ಶಿಪ್ ಫಾರ್ ಇಂಡಿಯನ್ ಕಲ್ಚರ್ 2022-23, ಭಾರತ ಸರ್ಕಾರದ ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್‌ನಿಂದ ನೀಡುವ ವಿದ್ಯಾರ್ಥಿವೇತನವಾಗಿದ್ದು, 18 ರಿಂದ 30 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.
- ಅರ್ಹತೆ: ನೃತ್ಯ, ಸಂಗೀತ, ರಂಗಭೂಮಿ, ಪ್ರದರ್ಶನ ಕಲೆ, ಶಿಲ್ಪಕಲೆ, ಭಾರತೀಯ ಭಾಷೆಗಳು, ಭಾರತೀಯ ಪಾಕಪದ್ಧತಿ ಮುಂತಾದ ಭಾರತೀಯ ಸಂಸ್ಕೃತಿಯ ಅಧ್ಯಯನವನ್ನು ಅನುಸರಿಸುವ 18-30 ವರ್ಷ ವಯಸ್ಸಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ಆರ್ಥಿಕ ನೆರವು: ಕೋರ್ಸ್‌ಗೆ ಅನುಗುಣವಾಗಿ ವಿದ್ಯಾರ್ಥಿವೇತನವನ್ನು ನಿಗದಿ ಪಡಿಸಲಾಗಿದೆ.
- ಅರ್ಜಿ ಸಲ್ಲಿಕೆ ವಿಧಾನ: ಏಪ್ರಿಲ್ 30, 2022
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/ICS7

**ಕೋರ್ಸ್ ಕಾರ್ನರ್**

# 'ಸಿಪೆಟ್'ನಲ್ಲಿ ಡಿಪ್ಲೊಮಾ, ಪಿಜಿ ಡಿಪ್ಲೊಮಾ

## ಪ್ಲಾಸ್ಟಿಕ್ ತಯಾರಿಕಾ ಉದ್ಯಮಕ್ಕೆ ಸಿಬ್ಬಂದಿ ರೂಪಿಸುವ ಕೋರ್ಸ್

**ಆರ್.ಬಿ.ಗುರುಬಸವರಾಜ**

**ಪ್ಲಾಸ್ಟಿಕ್** ಬಳಕೆಗೆ ವಿರೋಧ ಎಷ್ಟಿದೆಯೋ, ಅಷ್ಟೇ ಅನಿವಾರ್ಯದ ವಸ್ತುವೂ ಆಗಿ ಬದುಕಿನಲ್ಲಿ ಸೇರಿದೆ. ಕೃಷಿ, ಕೈಗಾರಿಕೆ ಸೇರಿದಂತೆ, ಎಲ್ಲ ಕ್ಷೇತ್ರದಲ್ಲೂ ಪ್ಲಾಸ್ಟಿಕ್ ಬಳಕೆ ವ್ಯಾಪಕವಾಗಿದೆ. ಪ್ಲಾಸ್ಟಿಕ್ ತಯಾರಿಕೆ ಉದ್ಯಮ ವಿಸ್ತಾರಗೊಳ್ಳುತ್ತಿದೆ, ಈ ಉದ್ಯಮಕ್ಕೆ ಅಗತ್ಯ ಸಿಬ್ಬಂದಿ ರೂಪಿಸಲು ಕೆಲವೊಂದು ಡಿಪ್ಲೊಮಾ ಹಾಗೂ ಪಿಜಿ ಡಿಪ್ಲೊಮಾ ಕೋರ್ಸ್‌ಗಳು ಚಾಲ್ತಿಯಲ್ಲಿವೆ.

ಮೈಸೂರಿನ ಕೇಂದ್ರೀಯ ಪೆಟ್ರೊಕೆಮಿಕಲ್ಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಶಿಕ್ಷಣ ಸಂಸ್ಥೆ – ಸಿಪೆಟ್ (ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ) ಈ ಕೋರ್ಸ್‌ಗಳನ್ನು ನಡೆಸುತ್ತಿದೆ.

'ಸಿಪೆಟ್'ನಲ್ಲಿ ಪ್ಲಾಸ್ಟಿಕ್ ತಯಾರಿಕೆಗೆ ಸಂಬಂಧಿಸಿದ ವಿವಿಧ ಡಿಪ್ಲೊಮಾ ಮತ್ತು ಪಿ.ಜಿ (ಪೋಸ್ಟ್ ಗ್ರಾಜುಯೆಟ್ ಡಿಪ್ಲೊಮಾ) ಕೋರ್ಸ್‌ಗಳಿವೆ.

ಇಲ್ಲಿನ ಯಾವುದೇ ಕೋರ್ಸ್‌ಗೆ ಸೇರಲು ಪ್ರವೇಶ ಪರೀಕ್ಷೆ ಬರೆಯುವುದು ಕಡ್ಡಾಯ. ಈ ಫಲಿತಾಂಶದ ಅಂಕಗಳ ಮೇಲೆ ಪ್ರವೇಶಾವಕಾಶ ಕಲ್ಪಿಸಲಾಗುತ್ತದೆ. 1 ವರ್ಷದ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗೆ 30 ಸೀಟುಗಳು, ಡಿಪ್ಲೊಮಾ ಇನ್ ಟೆಕ್ನಾಲಜಿ ಕೋರ್ಸ್‌ಗೆ 60 ಸೀಟುಗಳು ಹಾಗೂ ಡಿಪ್ಲೊಮಾ ಇನ್ ಪ್ಲಾಸ್ಟಿಕ್ ಮೌಲ್ಡಿಂಗ್ ಕೋರ್ಸ್ 60 ಸೀಟುಗಳನ್ನು ನಿಗದಿಪಡಿಸಲಾಗಿದೆ.

### ಕೋರ್ಸ್‌ನಲ್ಲಿ ಕಲಿಸುವುದೇನು?

ಈ ಕೋರ್ಸ್‌ಗಳಲ್ಲಿ ವೈವಿಧ್ಯಮಯ ಪ್ಲಾಸ್ಟಿಕ್ ಬಳಕೆ, ಪ್ಲಾಸ್ಟಿಕ್ ಮೌಲ್ಡಿಂಗ್, ಸಂಸ್ಕರಣೆ, ಗುಣಮಟ್ಟ ಪರಿಶೀಲನೆ, ಆಧುನಿಕ ವಿನ್ಯಾಸದಲ್ಲಿ ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ, ಪ್ಲಾಸ್ಟಿಕ್ ಮರುಬಳಕೆಯ ವಿಧಾನ, ಪೈಪ್ ಸೇರಿದಂತೆ ವಿವಿಧ ವಸ್ತುಗಳ ತಯಾರಿಕೆ, ಮಾರುಕಟ್ಟೆ ಹಾಗೂ ದರ ಪರಿಷ್ಕರಣೆ ಕುರಿತು ಕಲಿಸಲಾಗುತ್ತದೆ.

**ವಿವಿಧ ಕೋರ್ಸ್‌ಗಳು**

| ಕೋರ್ಸ್ ವಿಧ | ವಿದ್ಯಾರ್ಹತೆ | ವಯೋಮಿತಿ |
|---|---|---|
| 1 ವರ್ಷದ ಸ್ನಾತಕೋತ್ತರ ಡಿಪ್ಲೊಮಾ | ವಿಜ್ಞಾನದಲ್ಲಿ ಪದವಿ | 18 ರಿಂದ 35 ವರ್ಷಗಳು |
| 3 ವರ್ಷಗಳ ಪ್ಲಾಸ್ಟಿಕ್ ಮೌಲ್ಡ್ ತಂತ್ರಜ್ಞಾನದಲ್ಲಿ ಡಿಪ್ಲೊಮಾ | ಪಿಯುಸಿ (ವಿಜ್ಞಾನ) ಐಟಿಐ | 18 ರಿಂದ 35 ವರ್ಷಗಳು |
| 3 ವರ್ಷಗಳ ಪ್ಲಾಸ್ಟಿಕ್ ತಂತ್ರಜ್ಞಾನದಲ್ಲಿ ಡಿಪ್ಲೊಮಾ | ಪಿಯುಸಿ (ವಿಜ್ಞಾನ) ಐಟಿಐ | 18 ರಿಂದ 35 ವರ್ಷಗಳು |

> "ನಮ್ಮಲ್ಲಿ ಕಡಿಮೆ ಖರ್ಚಿನಲ್ಲಿ ಕೋರ್ಸ್ ಕಲಿಯಬಹುದು. ಜೊತೆಗೆ, ಉದ್ಯೋಗದ ಭರವಸೆಯೂ ಇದೆ. ಪ್ರತಿವರ್ಷ ಕಂಪನಿಗಳು ನಡೆಸುವ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ನಮ್ಮ ಸಂಸ್ಥೆಯ ಹಲವು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ದೊರೆತಿವೆ."
>
> **ಆರ್.ಟಿ. ನಾಗರಹಳ್ಳಿ,** ನಿರ್ದೇಶಕರು, ಸಿಪೆಟ್ ಮೈಸೂರು

**ಅನುತ್ತೀರ್ಣರಿಗೂ ಉಚಿತ ತರಬೇತಿ:** ಮುಖ್ಯ ಕೋರ್ಸ್‌ಗಳಲ್ಲದೇ ಅಲ್ಪಾವಧಿ ಪ್ರಾಯೋಜಿತ ತರಬೇತಿಯನ್ನೂ ನೀಡುವುದು 'ಸಿಪೆಟ್'ನ ವಿಶೇಷ. 8ನೇ ತರಗತಿ/10ನೇ ತರಗತಿ/ಪಿಯುಸಿ/ಐಟಿಐ/ಜೆಒಸಿ/ಡಿಪ್ಲೊಮಾ/ಬಿ.ಇ/ ಯಾವುದೇ ಪದವಿಗಳಲ್ಲಿ ಉತ್ತೀರ್ಣ ಹಾಗೂ ಅನುತ್ತೀರ್ಣರಾದ ಯುವಕ ಯುವತಿಯರಿಗೂ ವಿವಿಧ ವೃತ್ತಿಪರ ಯೋಜನೆಯಡಿ ಸ್ಟೈಫಂಡ್‌ನೊಂದಿಗೆ 3 ಮತ್ತು 6 ತಿಂಗಳ ಅವಧಿಯ ಉಚಿತ ವೃತ್ತಿಪರ ತರಬೇತಿ ಮತ್ತು ಉದ್ಯೋಗ ಖಾತ್ರಿ ಯೋಜನೆ (ಊಟ ಮತ್ತು ವಸತಿಯೊಂದಿಗೆ) ನೀಡಲಾಗುತ್ತದೆ. ಜೊತೆಗೆ ತರಬೇತಿಯ ನಂತರ ಉದ್ಯೋಗಾವಕಾಶಕ್ಕೆ ನೆರವು ನೀಡಲಾಗುತ್ತದೆ.

### ಉದ್ಯೋಗಾವಕಾಶಗಳು

ಈ ಕೋರ್ಸ್ ಪೂರೈಸಿದವರಿಗೆ ಪಂಚಾಯತ್ ರಾಜ್ ಇಲಾಖೆ, ಗೃಹ ಮಂಡಳಿ, ಆಟೊಮೊಬೈಲ್ಸ್, ವಾಹನದ ಬಿಡಿ ಭಾಗಗಳ ತಯಾರಿಕೆ, ಪಿ.ವಿ.ಸಿ ಪೈಪ್ ತಯಾರಿಕಾ ಕಂಪನಿಗಳಲ್ಲಿ, ಪ್ಲಾಸ್ಟಿಕ್ ವಸ್ತು ಉತ್ಪಾದನಾ ಕಂಪನಿಗಳಲ್ಲಿ, ಕರ್ನಾಟಕ ಒಳಚರಂಡಿ ಮತ್ತು ನೈರ್ಮಲ್ಯ ಇಲಾಖೆ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ಹಾಲು ಉತ್ಪಾದಕರ ಮಂಡಳಿಗಳು, ಆಹಾರೋದ್ಯಮ, ಆಗ್ರೊ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್‌ಗಳಲ್ಲಿ ಉದ್ಯೋಗಾವಕಾಶಗಳಿವೆ.

ಮೈಸೂರಿನ ಸಿಪೆಟ್ ಕೇಂದ್ರದ ಚಿತ್ರಗಳು

ಚಿತ್ರಕೃಪೆ: ಮೈಸೂರಿನ ಸಿಪೆಟ್

ಕೋರ್ಸ್ ಕುರಿತ ಹೆಚ್ಚಿನ ವಿವರಗಳಿಗೆ www.cipet.gov.in ಗೆ ಭೇಟಿಕೊಡಬಹುದು. ಕಚೇರಿ ಸಂಖ್ಯೆ 0821-2510618 ಅಥವಾ ನಿರ್ದೇಶಕರು 9466146001 ಸಂಖ್ಯೆಗೆ ಸಂಪರ್ಕಿಸಬಹುದು.

### ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ, ಸಿಐಡಿ ತನಿಖೆ ಚುರುಕು, ದಿವ್ಯಾ ಹಾಗರಗಿ ಮನೆಯಲ್ಲಿ ದಾಖಲೆಗಳಿಗೆ ಹುಡುಕಾಟ

# ಬಿಜೆಪಿ ನಾಯಕಿ ಮನೆ ಮೇಲೆ ಸಿಐಡಿ ದಾಳಿ

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದ, ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ, ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಮನೆ ಮೇಲೆ ಭಾನುವಾರ ದಾಳಿ ಮಾಡಿದ ಸಿಐಡಿ ಅಧಿಕಾರಿಗಳು, ಕೆಲ ದಾಖಲೆ ವಶಪಡಿಸಿಕೊಂಡರು.

‘ಪರೀಕ್ಷಾ ಅಕ್ರಮ ನಡೆದ ಶಾಲೆಯು ದಿವ್ಯಾ ಅವರಿಗೆ ಸೇರಿದ್ದರಿಂದ ಅವರ ವಿಚಾರಣೆ ಮತ್ತೊಮ್ಮೆ ಅಗತ್ಯವಿತ್ತು. ಅವರು ಸಂಪರ್ಕಕ್ಕೆ ಸಿಗದ ಕಾರಣ ಮನೆಯಲ್ಲಿ ಶೋಧ ನಡೆಸಿದೆವು. ಹಣಕಾಸು ವ್ಯವಹಾರದ ಪ್ರತಿಗಳು, ಶಾಲೆಗೆ ಸಂಬಂಧಿಸಿದ ಪತ್ರಗಳು ಸೇರಿದಂತೆ ತನಿಖೆಗೆ ಅಗತ್ಯವಿರುವ ಕೆಲ ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡಿದ್ದೇವೆ’ ಎಂದು ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘545 ಪಿಎಸ್‌ಐ ನೇಮಕಾತಿಗೆ ಅಕ್ಟೋಬರ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದಿತ್ತು. ಜ್ಞಾನಜ್ಯೋತಿ ಶಾಲೆಯಲ್ಲಿ ತೆರೆದಿದ್ದ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ಎಸಗಿದ ನಾಲ್ವರು ಅಭ್ಯರ್ಥಿಗಳು ಮತ್ತು ಮೂವರು ಪರೀಕ್ಷಾ ಮೇಲ್ವಿಚಾರಕಿಯರನ್ನು ಈಗಾಗಲೇ ಬಂಧಿಸಲಾಗಿದೆ. ಈ ಮೂವರೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿಯರೇ ಆಗಿದ್ದಾರೆ’ ಎಂದು ವಿವರಿಸಿದರು.

‘ಮುಖ್ಯ ಶಿಕ್ಷಕಿ ಮತ್ತು ಇತರ ಸಿಬ್ಬಂದಿ ತಲೆಮರೆಸಿಕೊಂಡಿದ್ದಾರೆ. ಸಿ.ಸಿ. ಟಿವಿ ಕ್ಯಾಮೆರಾದ ದಾಖಲೆಗಳೂ ನಾಶಪಡಿಸಲಾಗಿದೆ. ಪರೀಕ್ಷೆ ನಡೆದ ವೇಳೆ ದಿವ್ಯಾ ಕೇಂದ್ರದೊಳಗೆ ಇದ್ದರು ಎಂಬ ದೂರುಗಳೂ ಇವೆ. ಅದನ್ನು ಖಚಿತಪಡಿಸಿಕೊಳ್ಳಲು ಸಿ.ಸಿ.ಟಿವಿ ದಾಖಲೆಗಳು ಬೇಕು. ಹೀಗಾಗಿ, ಸಂಬಂಧಪಟ್ಟವರ ಮನೆ ಮೇಲೆ ದಾಳಿ ನಡೆಸಲಾಗಿದೆ’ ಎಂದು ಅವರು ತಿಳಿಸಿದರು.

ಸಿಐಡಿ ಎಸ್‌ಪಿ ರಾಘವೇಂದ್ರ ಹೆಗಡೆ, ಡಿವೈಎಸ್‌ಪಿಗಳಾದ ಶಂಕರಗೌಡ ಪಾಟೀಲ, ಪ್ರಕಾಶ ರಾಠೋಡ ನೇತೃತ್ವದ ತಂಡವು, ಇಲ್ಲಿನ ಹಳೆ ಜೇವರ್ಗಿ ರಸ್ತೆಯಲ್ಲಿರುವ ಮನೆ ಮೇಲೆ ದಾಳಿ ನಡೆಸಿತು. ಈ ವೇಳೆ ದಿವ್ಯಾ ಮನೆಯಲ್ಲಿ ಇರಲಿಲ್ಲ. ಪ್ರಕರಣ ಬೆಳಕಿಗೆ ಬಂದಾಗಿನಿಂದ ಅವರು ತಲೆಮರೆಸಿಕೊಂಡಿದ್ದಾರೆ. ಅವರ ಪತಿಯಿಂದ ಮಾಹಿತಿ ಪಡೆಯಲು ಯತ್ನಿಸಿದರೂ ಸರಿಯಾದ ಉತ್ತರ ಸಿಗಲಿಲ್ಲ.

‘ನನ್ನ ಪತ್ನಿ ಯಾವುದೋ ಊರಿಗೆ ಹೋಗಿದ್ದಾಳೆ. ಎಲ್ಲಿಗೆ ಹೋಗಿದ್ದಾಳೆ ಗೊತ್ತಿಲ್ಲ. ಅವರನ್ನು ಸಂಪರ್ಕಿಸಲು ನನ್ನ ಬಳಿ ಮೊಬೈಲ್ ಕೂಡ ಇಲ್ಲ. ಮನೆಯ ಕೀಲಿಕೈ ಕೆಲಸದವರ ಬಳಿ ಇದೆ. ನಾನು ಹೊಲದಲ್ಲೇ ಇರುತ್ತೇನೆ’ ಎಂದು ದಿವ್ಯಾ ಅವರ ಪತಿ ರಾಜೇಶ್ ಹೇಳಿದರು.

ನಂತರ ಮನೆಯ ಕೆಲಸದವರನ್ನೇ ಕರೆಸಿದ ಅಧಿಕಾರಿಗಳು, ಬಾಗಿಲು ತೆಗೆಸಿ ದಾಖಲೆಗಳಿಗಾಗಿ ತಡಕಾಡಿದರು.

ಪ್ರಕರಣದ ಸಂಬಂಧ ಈಗಾಗಲೇ ಅಭ್ಯರ್ಥಿಗಳಾದ ಕಲಬುರಗಿಯ ವೀರೇಶ ನಿಡಗುಂದಾ, ಅರುಣ ಪಾಟೀಲ, ರಾಯಚೂರಿನ ಕೆ.ಪ್ರವೀಣಕುಮಾರ, ಚೇತನ ನಂದಗಾಂವ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ ಹಾಗೂ ಸಾವಿತ್ರಿ ಅವರನ್ನು ಬಂಧಿಸಲಾಗಿದೆ. ಇನ್ನೂ ಕೆಲಅಭ್ಯರ್ಥಿಗಳು, ಮಧ್ಯವರ್ತಿಗಳು ಭಾಗಿಯಾಗಿರುವ ಬಗ್ಗೆ ಶಂಕೆ ಇದ್ದು, ಅಧಿಕಾರಿಗಳು ತನಿಖೆಯನ್ನು ತೀವ್ರಗೊಳಿಸಿದ್ದಾರೆ.

**ಮನೆಗೆ ಭೇಟಿ ನೀಡಿದ್ದ ಗೃಹ ಸಚಿವ:** ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಈಚೆಗೆ ಕಲಬುರಗಿಗೆ ಬಂದಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ದಿವ್ಯಾ ಹಾಗರಗಿ ಮನೆಗೂ ಭೇಟಿ ನೀಡಿದ್ದರು. ಆ ಸಂದರ್ಭ ಕುಟುಂಬದೊಂದಿಗೆ ತೆಗೆಸಿಕೊಂಡ ಫೋಟೊ ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಸದ್ಯ ಇದೇ ಮನೆಯ ಮೇಲೆ ಸಿಐಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಕಲಬುರಗಿಯಲ್ಲಿರುವ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರ ಮನೆ —ಪ್ರಜಾವಾಣಿ ಚಿತ್ರ

### ‘ತನಿಖಾ ವರದಿ ಆಧರಿಸಿ ಕ್ರಮ’

**ಬೆಂಗಳೂರು:** ‘545 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಅದರ ಅಂತಿಮ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹೇಳಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಅಕ್ರಮದಲ್ಲಿ ಭಾಗಿಯಾದ ಅಭ್ಯರ್ಥಿಗಳು, ಪರೀಕ್ಷಾ ಮೇಲ್ವಿಚಾರಕರು ಹಾಗೂ ಸಹಾಯಕ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಪ್ರಾಮಾಣಿಕವಾಗಿ ಪರೀಕ್ಷೆ ಎದುರಿಸಿ ಆಯ್ಕೆಯಾದ ನಿಜವಾದ ಅಭ್ಯರ್ಥಿಗಳ ಹಿತಾಸಕ್ತಿ ರಕ್ಷಿಸಲಾಗುವುದು’ ಎಂದಿದ್ದಾರೆ.

‘ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ನಾಲ್ವರು ಅಭ್ಯರ್ಥಿಗಳು ಸೇರಿ ಏಳು ಮಂದಿಯನ್ನು ಬಂಧಿಸಲಾಗಿದೆ. ಇನ್ನೂ ಹಲವರು ತಲೆಮರೆಸಿಕೊಂಡಿದ್ದು, ಶೀಘ್ರದಲ್ಲೇ ಬಂಧಿಸಲಾಗುವುದು’ ಎಂದೂ ಹೇಳಿದ್ದಾರೆ.

'545 ಹುದ್ದೆಗಳ ಅಕ್ರಮ ಪ್ರಕರಣದ ತನಿಖೆ ಮುಗಿದ ನಂತರ, 402 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಆದಷ್ಟು ಬೇಗ ಪರೀಕ್ಷೆ ನಡೆಸಲಾಗುವುದು’ ಎಂದೂ ತಿಳಿಸಿದ್ದಾರೆ.

# ಸಮಗ್ರ ತನಿಖೆಗೆ ಪ್ರಿಯಾಂಕ್ ಖರ್ಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪಿಎಸ್‌ಐ 545 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನೊಂದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸಮಗ್ರ ತನಿಖೆ ನಡೆಸಬೇಕು’ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಸರ್ಕಾರದಲ್ಲಿ ಅಧಿಕಾರದಲ್ಲಿರುವವರ ಬೆಂಬಲ ಇಲ್ಲದೆ ಅಕ್ರಮ ನಡೆಯಲು ಸಾಧ್ಯವಿಲ್ಲ. ನೊಂದ ಅಭ್ಯರ್ಥಿಗಳಿಗೆ ಮತ್ತು ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿರುವವರಿಗೆ ನ್ಯಾಯ ದೊರೆಯಬೇಕು. ಅಕ್ರಮಕ್ಕೆ ಅವಕಾಶ ಕೊಡುವವರಿಗೆ ಜೈಲು ಶಿಕ್ಷೆ ಆಗಬೇಕು’ ಎಂದರು.

ಪ್ರಿಯಾಂಕ್ ಖರ್ಗೆ

‘ಗೃಹ ಇಲಾಖೆ ಅತ್ಯಂತ ಭ್ರಷ್ಟ. ಪೊಲೀಸರು ಎಂಜಲು ಕಾಸು ತಿಂದು ಬಿದ್ದಿದ್ದಾರೆ ಎಂದು ನೀವೇ ಹೇಳುತ್ತೀರಿ. ನಿಮ್ಮ ಅಧಿಕಾರಿಗಳ ಅಪಮಾನ ನೀವೇ ಮಾಡುತ್ತೀರಿ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಉದ್ದೇಶಿಸಿ ಹೇಳಿದ ಪ್ರಿಯಾಂಕ್, ‘ಅವರು ಕೆಟ್ಟ ಗೃಹಮಂತ್ರಿ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದು ಉತ್ತಮ. 545 ಹುದ್ದೆಗಳ ಪೈಕಿ, 300 ಮಂದಿ ಅಕ್ರಮವಾಗಿ ಆಯ್ಕೆಯಾಗಿದ್ದು, ಪ್ರತಿ ಅಭ್ಯರ್ಥಿಯಿಂದ ಕನಿಷ್ಠ ₹ 80 ಲಕ್ಷ ಪಡೆದಿದ್ದು, ಅಲ್ಲಿಗೆ ₹ 210 ಕೋಟಿ ಅವ್ಯವಹಾರ ನಡೆದಿದೆ’ ಎಂದು ದೂರಿದರು.

‘ಈ ಅಕ್ರಮದಲ್ಲಿಯೂ ಶೇ 40 ಕಮಿಷನ್ ಸರ್ಕಾರ ಭಾಗಿಯಾಗಿರುವುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಪೊಲೀಸ್ ನೇಮಕಾತಿಯಲ್ಲಿ ಅಕ್ರಮ ನಡೆದಿಲ್ಲ ಎಂದು ಗೃಹ ಸಚಿವರು ಸುಳ್ಳು ಹೇಳಿದ್ದಾರೆ. ಗೃಹಮಂತ್ರಿಗೆ ತಮ್ಮ ಇಲಾಖೆಯಲ್ಲಿ ಏನಾಗುತ್ತಿದೆ ಎಂದು ತಿಳಿದಿಲ್ಲವೇ? ಈ ಪ್ರಕರಣ ಸರಿಯಾಗಿ ತನಿಖೆ ಮಾಡಿದರೆ ಸರ್ಕಾರದ 3-4 ವಿಕೆಟ್ ಉರುಳಲಿದೆ’ ಎಂದರು.

‘ಈ ಅಕ್ರಮವನ್ನು ಗೋಕುಲ ನಗರ ಜಿಡಿಎ ಲೇಔಟ್‌ನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಮಾಡಲಾಗಿದೆ ಎಂದು ತಿಳಿದುಬಂದಿದೆ. ಈ ಶಾಲೆ ಬಿಜೆಪಿಯ ಪದಾಧಿಕಾರಿಗಳದ್ದು. ಗೃಹ ಸಚಿವರು ಅವರ ಮನೆಗೆ ಹೋಗಿ ಆರತಿ ಮಾಡಿಸಿಕೊಂಡಿದ್ದರು. ಈ ಅವ್ಯವಹಾರ ಮಾಡಲು ಹೋಗಿದ್ದರೆ? ಅವರು ದಿಶಾ ಸಮಿತಿ ಹಾಗೂ ನರ್ಸಿಂಗ್ ಕೌನ್ಸಿಲ್ ಸದಸ್ಯರಾಗಿದ್ದಾರೆ. ಈ ಪದಾಧಿಕಾರಿಗಳು ಈಗ ತಲೆಮರೆಸಿಕೊಂಡಿರುವುದೇಕೆ. ಸಣ್ಣ ಪುಟ್ಟವರನ್ನು ಬಂಧಿಸಿ, ಪದಾಧಿಕಾರಿಗಳನ್ನು ಯಾಕೆ ಬಂಧಿಸುತ್ತಿಲ್ಲ’ ಎಂದೂ ಪ್ರಶ್ನಿಸಿದರು.

# ‘ಅನುಭವ ಮಂಟಪದ ಮೂಲ ಸ್ಥಳ ಈಗ ಕಸಾಯಿಖಾನೆ’

**ಲಿಂಗಸುಗೂರು (ರಾಯಚೂರು ಜಿಲ್ಲೆ):** ‘ಶರಣರ ಕ್ರಾಂತಿಯ ನೆಲ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಸರ್ಕಾರವು ಕೋಟ್ಯಂತರ ರೂಪಾಯಿಯಲ್ಲಿ ಅನುಭವ ಮಂಟಪ ನಿರ್ಮಿಸುತ್ತಿದೆ. ಆದರೆ, 12ನೇ ಶತಮಾನದಲ್ಲಿದ್ದ ಅನುಭವ ಮಂಟಪದ ಮೂಲ ಸ್ಥಳ ಈಗ ಕಸಾಯಿಖಾನೆಯಾಗಿ ಮಾರ್ಪಟ್ಟಿದೆ’ ಎಂದು ಶ್ರೀರಾಮಸೇನೆ ರಾಜ್ಯ ಘಟಕದ ಅಧ್ಯಕ್ಷ ಆಂದೋಲಾದ ಸಿದ್ಧಲಿಂಗ ಸ್ವಾಮೀಜಿ ವಿಷಾದಿಸಿದರು.

ಭಾನುವಾರ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಮತ್ತು ಜಂಗಮ ಸಮಾವೇಶದಲ್ಲಿ ಮಾತನಾಡಿದ ಅವರು, ‘ಮೂಲಸ್ಥಳವನ್ನೇ ಕಡೆಗಣಿಸಿ, ಬೇರೆ ಕಡೆ ಅನುಭವ ಮಂಟಪ ನಿರ್ಮಿಸುವುದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ. ಮೂಲ ಸ್ಥಳ ಪತ್ತೆ ಮಾಡುವಲ್ಲಿ, ನ್ಯಾಯ ಒದಗಿಸುವಲ್ಲಿ ಸರ್ಕಾರ ಎಡವಿದೆ’ ಎಂದರು.

‘5 ಸಾವಿರ ವರ್ಷದ ಹಿಂದೆ ರೇಣುಕಾಚಾರ್ಯರಿಂದ ಸ್ಥಾಪಿತ ವೀರಶೈವ ಲಿಂಗಾಯತ ಧರ್ಮ ವಿಘಟನೆಗೆ ಪಕ್ಷವೊಂದರ ಮುಖಂಡರು ಪ್ರಯತ್ನಿಸುತ್ತಿರುವುದು ನೋವಿನ ಸಂಗತಿ. ಜಂಗಮರಾದಿ ವೀರಶೈವ ಲಿಂಗಾಯತರು ಸಂಘಟಿತ ಶಕ್ತಿ ಪ್ರದರ್ಶನ ಮೂಲಕ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕು’ ಎಂದು ಹೇಳಿದರು.

## ಸುದ್ದಿ 2 ನಿಮಿಷ

### ‘ಮಠಗಳಿಗೂ ಶೇ 30ರಷ್ಟು ಕಮಿಷನ್ ನಿಗದಿ’

**ಬಾಗಲಕೋಟೆ:** ‘ಮಠಗಳಿಗೆ ಸರ್ಕಾರ ಬಿಡುಗಡೆ ಮಾಡುವ ಅನುದಾನ ಪಡೆಯಲು ಶೇ 30 ರಷ್ಟು ಕಮಿಷನ್ ನೀಡಬೇಕಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ಇಲ್ಲಿಗೆ ಬಂದು ನಿಂತಿದೆ’ ಎಂದು ಶಿರಹಟ್ಟಿ ಜಗದ್ಗುರು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದರು.

ಬೀಳಗಿ ತಾಲ್ಲೂಕಿನ ಬಾಡಗಂಡಿಯಲ್ಲಿ ಉತ್ತರ ಕರ್ನಾಟಕ ಸ್ವಾಭಿಮಾನಿ ವೇದಿಕೆ ಭಾನುವಾರ ಆಯೋಜಿಸಿದ್ದ ಕೃಷ್ಣಾ–ಮಹಾದಾಯಿ–ನವಲಿ ಸಂಕಲ್ಪ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಮಠಗಳಿಗೆ ಬಿಡುಗಡೆ ಆದ ಅನುದಾನದಲ್ಲಿ ಪರ್ಸೆಂಟೇಜ್ ಕಡಿತ ಆದ ನಂತರವೇ ಕಟ್ಟಡದ ಕೆಲಸ ಆರಂಭವಾಗುತ್ತದೆ. ಇಲ್ಲದಿದ್ದರೆ ಆಗೊಲ್ಲ. ಆ ಅಧಿಕಾರಿಗಳು ಬಂದು ನಮಗೆ ಹೇಳುತ್ತಾರೆ. ಇಷ್ಟು ರೊಕ್ಕ ಕಡಿತ ಮಾಡದಿದ್ದರೆ ನಿಮ್ಮ ಕೆಲಸವಂತೂ ಆಗುವುದಿಲ್ಲ ಎನ್ನುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಈಗಂತೂ ನಾಡಿನಲ್ಲಿ ಬುದ್ಧಿಗೇಡಿ ಸರ್ಕಾರಗಳು ಬರುತ್ತಿವೆ. ಕಾಂಕ್ರೀಟ್ ರಸ್ತೆ ಮೆಷಿನ್ ಹಚ್ಚಿ ಒಡೆಸಿ ಪೈಪ್‌ಲೈನ್ ಹಾಕಿ ನಳದ ಮೂಲಕ ನೀರು ಕೊಡುವ ಬದಲಿಗೆ ರೈತನ ಹೊಲಗಳಿಗೆ ನೀರು ಕೊಡಿ ಎಂದು ಆಗ್ರಹಿಸಿದ ಅವರು, ಉತ್ತರ ಭಾರತದಲ್ಲಿ ಒಂದು ವರ್ಷ ಕಾಲ ಸಾವು–ನೋವಿಗೂ ಅಂಜದೇ ರೈತರು ನಡೆಸಿದ ಹೋರಾಟದ ಮಾದರಿಯ ಪ್ರತಿರೋಧಕ್ಕೆ ಇಲ್ಲಿಯ ರೈತರು ಸಿದ್ಧರಾದರೆ ಮಾತ್ರ ನಿಮಗೆ ಅನ್ನಸಿಕ್ಕೀತು. ಇಲ್ಲದಿದ್ದರೆ ಏನೂ ಸಿಗೊಲ್ಲ. ನೀವು ಬಹಳ ಜಾಣರಾಗಬೇಕು’ ಎಂದು ಕಿವಿಮಾತು ಹೇಳಿದರು.

### ಕಾಳಿ ನದಿಯಲ್ಲಿ ಜಲಕ್ರೀಡೆಗೆ ತಾತ್ಕಾಲಿಕ ನಿಷೇಧ

**ಜೊಯಿಡಾ:** ‘ಜಿಲ್ಲಾಡಳಿತದಿಂದ ಹೊಸ ಮಾರ್ಗಸೂಚಿ, ಆದೇಶ ಬರುವ ತನಕ ತಾಲ್ಲೂಕಿನಲ್ಲಿ ಕಾಳಿ ನದಿಯಲ್ಲಿ ಯಾವುದೇ ರೀತಿಯ ಜಲಕ್ರೀಡೆಗಳನ್ನು ನಡೆಸಬಾರದು’ ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಆದೇಶಿಸಿದ್ದಾರೆ.

ತಾಲ್ಲೂಕಿನ ಗಣೇಶಗುಡಿ ಸಮೀಪ ಗುರುವಾರ ಸಂಜೆ ಕಾಳಿ ನದಿಯಲ್ಲಿ ರ‍್ಯಾಫ್ಟಿಂಗ್ ನಡೆಯುವಾಗ ಅಪಾಯಕ್ಕೆ ಸಿಲುಕಿದ್ದ ದೋಣಿಯಿಂದ ಮಕ್ಕಳೂ ಸೇರಿ 12 ಜನರನ್ನು ರಕ್ಷಿಸಲಾಗಿತ್ತು. ಈ ಸಂಬಂಧ ಶನಿವಾರ ಸಂಜೆ ಗಣೇಶಗುಡಿಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ, ರೆಸಾರ್ಟ್ ಮಾಲೀಕರು ಹಾಗೂ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಬಳಿಕ ಜಲಕ್ರೀಡೆಗಳಿಗೆ ತಾತ್ಕಾಲಿಕವಾಗಿ ನಿರ್ಬಂಧ ವಿಧಿಸಲು ಕ್ರಮ ಕೈಗೊಂಡರು.

‘ಜಲಕ್ರೀಡೆಗಳನ್ನು ಪ್ರಾರಂಭಿಸುವ ಮೊದಲು ಆಯೋಜಕರು ಪರವಾನಗಿ ನವೀಕರಿಸಿಕೊಳ್ಳಬೇಕು. ಆಯೋಜನಾ ಸಂಸ್ಥೆಯ ವಿಮೆ, ಗೈಡ್‌ಗಳು ಪರವಾನಗಿ ಹೊಂದಿದ್ದರೆ ಮಾತ್ರ ಪರವಾನಗಿ ನವೀಕರಿಸಲಾಗುವುದು’ ಎಂದರು.

‘ಈ ಕುರಿತು ಶೀಘ್ರದಲ್ಲೇ ಅಧಿಕಾರಿಗಳ ಸಭೆ ನಡೆಸಿ, ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಈ ನಡುವೆ, ಆವೇಡಾ ಗ್ರಾಮ ಪಂಚಾಯಿತಿಯು, ಜಲಸಾಹಸ ಕ್ರೀಡೆಗಳನ್ನು ನಡೆಸಲು ನೀಡಿದ್ದ ಎಲ್ಲ ಪ್ರಮಾಣ ಪತ್ರ, ಪರವಾನಗಿಗಳನ್ನು ಮುಂದಿನ ಆದೇಶದವರೆಗೆ ರದ್ದು ಪಡಿಸಿ ನೋಟಿಸ್ ನೀಡಲಾಗಿದೆ.

### ಹುಬ್ಬಳ್ಳಿ ಗಲಭೆ: ಸಿ.ಟಿ.ರವಿ ಪ್ರಶ್ನೆ ● ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮಾದರಿ ಘಟನೆ – ಕಟೀಲ್ ವ್ಯಾಖ್ಯಾನ

# ಒಂದು ಸ್ಟೇಟಸ್ ಹಾಕಿದ್ದಕ್ಕೆ ಇಷ್ಟೊಂದು ಕೆರಳಬೇಕೆ?

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ)/ ಹುಬ್ಬಳ್ಳಿ:** ‘ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಘಟನೆ ಮಾದರಿಯಲ್ಲಿ ಹುಬ್ಬಳ್ಳಿಯಲ್ಲಿಯೂ ನಡೆದಿದೆ. ಒಂದು ವಾಟ್ಸ್ ಆ್ಯಪ್ ಸಂದೇಶ ಆಧರಿಸಿ ಇಷ್ಟು ಗೊಂದಲ ಉಂಟುಮಾಡುವುದು ಸರಿಯಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

ಭಾನುವಾರ ನಗರದಲ್ಲಿ ಏರ್ಪಡಿಸಿದ್ದ ಬಿಜೆಪಿ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು ಹುಬ್ಬಳ್ಳಿಯಲ್ಲಿ ನಡೆದ ಗಲಭೆಯನ್ನು ಉಲ್ಲೇಖಿಸಿ ಈ ಮಾತು ಹೇಳಿದರು. ‘ಮತಾಂಧ ಶಕ್ತಿಗಳ ವಿರುದ್ಧ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ’ ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು, ‘ಸಣ್ಣ ವಿಚಾರಗಳಿಗೆ ಯಾಕೆ ಕೆರಳುತ್ತಾರೆ? ಅವರು ಮಾತ್ರ ಉಪ್ಪು, ಹುಳಿ, ಖಾರ ತಿಂತಾರಾ? ಅದನ್ನೇ ಇಟ್ಟುಕೊಂಡು ಗಲಾಟೆ ಮಾಡಲು ಕಾಯ್ತಾ ಇರ್ತಾರಾ ಅಂತ ಅನಿಸುತ್ತೆ’ ಎಂದು ಪ್ರತಿಕ್ರಿಯಿಸಿದರು.

‘ಈ ಹಿಂದೆ ನಡೆದ ಘಟನೆ ಕೂಡಾ ಸ್ಟೇಟಸ್ ಕಾರಣದಿಂದ. ಇದು ಈ ನೆಲದ ಕಾನೂನಿಗೆ ಬೆಲೆ ಕೊಡೋ ಮಾನಸಿಕತೆನಾ? ಸೆಕ್ಯುಲರ್‌ಗಳು ಏಕೆ ಈಗ ಮಾತನಾಡುವುದಿಲ್ಲ’ ಎಂದು ಖಾರವಾಗಿ ಪ್ರಶ್ನಿಸಿದರು.

**ಪೊಲೀಸರು ನಿಯಂತ್ರಸಬೇಕು:** ಶಾಸಕ ಬಿ.ಎಸ್.ಯಡಿಯೂರಪ್ಪ ಪ್ರತಿಕ್ರಿಯಿಸಿ, ‘ಶಾಂತಿ ಕದಡುವ ಕೆಲಸ ನಡೆದಿರುವುದು ದುರದೃಷ್ಟಕರ. ಪ್ರಕರಣದಲ್ಲಿ ಆರೋಪಿಗಳು ಯಾರೇ ಇರಲಿ ತನಿಖೆ ಮಾಡಿ ಬಂಧಿಸಬೇಕು’ ಎಂದರು.

‘ಕೋಮುವಾದ ನಿಯಂತ್ರಿಸುವ ಕೆಲಸ ಪೊಲೀಸರು ಮಾಡಬೇಕು. ಶಾಂತಿ-ಸುವ್ಯವಸ್ಥೆ ತರುವ ಕೆಲಸವನ್ನು ನಮ್ಮ ಸರ್ಕಾರ ಖಂಡಿತ ಮಾಡಲಿದೆ’ ಎಂದರು.

**ಕಾಂಗ್ರೆಸ್ ಪ್ರತಿಭಟಿಸುವುದಿಲ್ಲವೇ?:** ಶಾಸಕ ಜಗದೀಶ ಶೆಟ್ಟರ್ ಅವರು, ‘ಈ ಹಿಂದೆ ಧಾರವಾಡದಲ್ಲಿ ಕಲ್ಲಂಗಡಿ ಅಂಗಡಿ ಹಾಳುಗೆಡವಿದರು ಎಂದು ಕಾಂಗ್ರೆಸ್‌ನವರು ಪ್ರತಿಭಟನೆ ಮಾಡಿದ್ದರು. ಈಗ ನಡೆದ ಘಟನೆಗೆ ಸಂಬಂಧಿಸಿದಂತೆ ಪ್ರತಿಭಟನೆ ಮಾಡುವುದಿಲ್ಲವೇ? ವೋಟ್ ಬ್ಯಾಂಕ್ ರಾಜಕೀಯ ಮಾಡಲಾಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹುಬ್ಬಳ್ಳಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ‘ವಾಟ್ಸ್‌ಆ್ಯಪ್ ಸ್ಟೇಟಸ್ ಹಾಕಿದ್ದ ಆರೋಪಿಯ ಬಂಧನ ಬಳಿಕವೂ ಕಾನೂನು ಕೈಗೆತ್ತಿಕೊಳ್ಳುವುದು ಅಕ್ಷಮ್ಯ ಅಪರಾಧ. ಗೂಂಡಾಗಿರಿಯನ್ನೂ ಯಾವುದೇ ಕಾರಣಕ್ಕೂ ಸಹಿಸಲ್ಲ. ಪ್ರಾರ್ಥನೆಗೆ ಸೇರಿದವರನ್ನು ಕರೆತಂದಿದ್ದಾರೆ ಎಂಬ ಆರೋಪ ಇದೆ. ಅವರೆಲ್ಲರ ಮೇಲೂ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ತಮ್ಮ ಕುಟುಂಬದ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಆರೋಪಿಸಿ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಎದುರು ಜಮಾಯಿಸಿದ್ದ ಮಹಿಳೆಯರು —ಪ್ರಜಾವಾಣಿ ಚಿತ್ರ

> **ಮುಸ್ಲಿಂ ಗೂಂಡಾಗಳಿಂದ ಠಾಣೆ, ಆಸ್ಪತ್ರೆ ಮೇಲೆ ದಾಳಿಯಾಗಿದೆ. ಸರ್ಕಾರ ತಕ್ಷಣವೇ ಇವರನ್ನು ಗೂಂಡಾ ಕಾಯ್ದೆ, ಭಯೋತ್ಪಾದಕ ಕಾಯ್ದೆ ಅಡಿ ಬಂಧಿಸಬೇಕು**
> **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

> **ಕೆ.ಜೆ.ಹಳ್ಳಿ, ಡಿ.ಜೆ. ಹಳ್ಳಿ ಘಟನೆಯನ್ನು ಸರಿಯಾಗಿ ನಿರ್ವಹಣೆ ಮಾಡದ್ದೇ ಈ ಘಟನೆಗೆ ಕಾರಣ. ಅವರನ್ನು ಮುಗಿಸಲು ಕಠಿಣ ಕ್ರಮ ಕೈಗೊಳ್ಳಬೇಕು**
> **ಬಸನಗೌಡ ಪಾಟೀಲ ಯತ್ನಾಳ್**
> ಶಾಸಕ

> **ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಶೂನ್ಯವಾಗಿವೆ. ಇದನ್ನು ಮರೆಮಾಚಿ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ರಾಜ್ಯ ಸರ್ಕಾರವೇ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡುತ್ತಿದೆ**
> **ಭಾಸ್ಕರ್ ರಾವ್,** ಎಎಪಿ ಮುಖಂಡ

### ಹುಬ್ಬಳ್ಳಿ ಗಲಭೆಗೆ ಕಾಂಗ್ರೆಸ್‌ನಿಂದ ಬೆಂಕಿ : ಕುಮಾರಸ್ವಾಮಿ

**ಬೆಂಗಳೂರು:** ‘ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದ ಹಿಂದೆ ಯಾರಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬೇಕು. ಕಾಂಗ್ರೆಸ್ ನಾಯಕರು ಉರಿಯುವ ಬೆಂಕಿಗೆ ಪೆಟ್ರೋಲ್ ಸುರಿಸುವ ಕೆಲಸ ಮಾಡುತ್ತಿದ್ದಾರೆ. ಇದನ್ನು ನಂಬಿ ಮುಸ್ಲಿಂ ಜನಾಂಗ ಎಚ್ಚರ ತಪ್ಪಬಾರದು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

‘ಹುಬ್ಬಳ್ಳಿ ನಗರದಲ್ಲಿ 15 -20 ವರ್ಷ ನೆತ್ತರ ಓಕುಳಿ ಆಡುತ್ತಿದ್ದರು. 1994 ರಲ್ಲಿ ದೇವೇಗೌಡರು ಅದನ್ನು ತಹಬದಿಗೆ ತಂದಿದ್ದರು. ಆದರೆ, ಶನಿವಾರ ರಾತ್ರಿ ಮತ್ತೆ ಬೆಂಕಿ ಹಚ್ಚುವ ಕೆಲಸ ನಡೆದಿದೆ. ಮುಸ್ಲಿಂ ಜನಾಂಗವನ್ನು ದಿಕ್ಕು ತಪ್ಪಿಸಿ, ಬೆಂಕಿ ಹಚ್ಚುವುದರಿಂದ ಯಾವುದೇ ಪ್ರಯೋಜನ ಇಲ್ಲ’ ಎಂದಿದ್ದಾರೆ.

‘ಬೆಂಗಳೂರಿನ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿಯಲ್ಲಿ ನಡೆದ ಘಟನೆಯಲ್ಲಿ ಬೆಂಕಿ ಹಚ್ಚಿದ ಕಾರಣಕ್ಕೆ ಅನೇಕ ಆಸ್ತಿ ಪಾಸ್ತಿ ಹಾಳಾದವು. ಆ ಘಟನೆ ಮರೆಯುವ ಮುನ್ನವೇ ಹುಬ್ಬಳ್ಳಿಯಲ್ಲಿ ಗಲಾಟೆ ಆಗಿದೆ. ಪ್ರಚೋದನಾತ್ಮಕ ಪೋಸ್ಟ್ ಮಾಡಿದವನ ಹಿಂದೆ ಯಾರು ಇದ್ದಾರೆ? ಅವನು ಯಾರ ಚಿತಾವಣೆಯಿಂದ ಪೋಸ್ಟ್ ಮಾಡಿದ್ದಾನೆ? ಎನ್ನುವುದನ್ನು ಪತ್ತೆ ಹಚ್ಚಬೇಕು’ ಎಂದೂ ಒತ್ತಾಯಿಸಿದರು.

‘ಆಸ್ಪತ್ರೆ, ಪೊಲೀಸ್ ಠಾಣೆ, ದೇವಸ್ಥಾನಕ್ಕೆ ಬೆಂಕಿ ಹಚ್ಚಿದ್ದಾರೆ. ಇದರಿಂದ ಯಾರೋ ಸಂಚು ರೂಪಿಸಿದ್ದಾರೆ ಎನ್ನುವ ಅನುಮಾನ ಬರುತ್ತದೆ. ರಾಜ್ಯದಲ್ಲಿ ಇಂಥ ಘಟನೆಗಳು ಹೆಚ್ಚುತ್ತಿವೆ. ಸರ್ಕಾರ ಏನು ಮಾಡುತ್ತಿದೆ’ ಎಂದೂ ಅವರು ಪ್ರಶ್ನಿಸಿದರು.

ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಸಂದರ್ಭದಲ್ಲಿ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ ಹಳೇ ಹುಬ್ಬಳ್ಳಿಯ ದಿಡ್ಡಿ ಓಣಿಯ ಹನುಮಾನ್ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿದ ಗೃಹ ಸಚಿವ ಅರಗ ಜ್ಞಾನೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಹಾಲಪ್ಪ ಆಚಾರ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಶಾಸಕ ಜಗದೀಶ ಶೆಟ್ಟರ್ ಅವರು ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಸವಣೂರ ಅವರಿಂದ ಮಾಹಿತಿ ಪಡೆದರು – ಪ್ರಜಾವಾಣಿ ಚಿತ್ರ

### ಈಶ್ವರಪ್ಪ ವಿರುದ್ಧ ಪ್ರತಿಭಟನೆ: ಕಾಂಗ್ರೆಸ್ ಮುಖಂಡರ ವಿರುದ್ಧ ಎಫ್‌ಐಆರ್

**ಬೆಂಗಳೂರು:** ‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ಮೊದಲ ಆರೋಪಿ ಆಗಿರುವ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಬಂಧಿಸಬೇಕು’ ಎಂದು ಒತ್ತಾಯಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದ್ದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಏಪ್ರಿಲ್ 14ರಂದು ನಡೆದಿದ್ದ ಪ್ರತಿಭಟನೆ ಬಗ್ಗೆ ಮಹಿಳಾ ಪಿಎಸ್‌ಐ ಜಾಹೀದಾ ನೀಡಿರುವ ದೂರು ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ. ಸದ್ಯದಲ್ಲೇ ಮುಖಂಡರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಶಾಸಕ ಪ್ರಿಯಾಂಕ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮ್ಮದ್, ರಾಮಲಿಂಗಾ ರೆಡ್ಡಿ, ಧ್ರುವನಾರಾಯಣ್, ಮುಖಂಡರಾದ ಟಿ.ಬಿ. ಜಯಚಂದ್ರ, ಐವಾನ್ ಡಿಸೋಜ, ಪ್ರಕಾಶ್ ರಾಥೋಡ್, ವಿ.ಎಸ್. ಉಗ್ರಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ 36 ಮಂದಿಯನ್ನು ಆರೋಪಿಯನ್ನಾಗಿ ಮಾಡಲಾಗಿದೆ’ ಎಂದೂ ತಿಳಿಸಿವೆ.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರಿ ನಿವಾಸ ‘ಕೃಷ್ಣಾ’ಗೆ ಮುತ್ತಿಗೆ ಹಾಕಲು ತೀರ್ಮಾನಿಸಿದ್ದ ಕಾಂಗ್ರೆಸ್ ಮುಖಂಡರು, ಮಾಧವನಗರದಿಂದ ಮೆರವಣಿಗೆ ಹೊರಟಿದ್ದರು. ಮಧ್ಯಾಹ್ನ 12.30ರ ಸುಮಾರಿಗೆ ರೇಸ್‌ಕೋರ್ಸ್ ರಸ್ತೆಯಲ್ಲಿರುವ ರೇಸ್ ವ್ಯೂ ಹೋಟೆಲ್ ಬಳಿ ಬಂದಿದ್ದರು. ಅಕ್ರಮ ಕೂಟ ಕಟ್ಟಿಕೊಂಡಿದ್ದ ಮುಖಂಡರು, ಘೋಷಣೆ ಕೂಗಿದರು. ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡಿದರು ಎಂಬ ಸಂಗತಿ ದೂರಿನಲ್ಲಿದೆ’ ಎಂದೂ ಮೂಲಗಳು ಹೇಳಿವೆ.

‘ಯಾವುದೇ ಅನುಮತಿ ಪಡೆಯದೇ ಸಾರ್ವಜನಿಕರ ರಸ್ತೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಅಕ್ರಮವಾಗಿ ಗುಂಪು ಸೇರಿ ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ. ಅಕ್ರಮ ಕೂಟ (ಐಪಿಸಿ 143) ಹಾಗೂ ಅಕ್ರಮ ಬಂಧನ (ಐಪಿಸಿ 341) ಆರೋಪ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

# ಹುಬ್ಬಳ್ಳಿ ಗಲಭೆ: ಪೊಲೀಸ್ ಕಟ್ಟೆಚ್ಚರ

ಒಂದನೇ ಪುಟದಿಂದ

**ಠಾಣೆ, ದೇವಸ್ಥಾನ, ಆಸ್ಪತ್ರೆಗೂ ಕಲ್ಲು:** ಶನಿವಾರ ರಾತ್ರಿ ಪೊಲೀಸ್ ಠಾಣೆಯನ್ನು ಸುತ್ತುವರಿದಿದ್ದ ಕೆಲ ದುಷ್ಕರ್ಮಿಗಳು ಕಾಂಪೌಂಡ್ ಮೇಲೆ ಹತ್ತಿದ್ದಾರೆ. ಕೆಲವರು ಠಾಣೆಗೆ ನುಗ್ಗಲು ಯತ್ನಿಸಿ ಕಲ್ಲು ತೂರಿದ್ದಾರೆ. ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಸಹ ಹಾಕಿದ್ದಾರೆ.

ಠಾಣೆಯಿಂದ ಅನತಿ ದೂರದಲ್ಲಿರುವ ದಿಡ್ಡಿ ಓಣಿಯ ಹನುಮಂತ ದೇವಸ್ಥಾನಕ್ಕೂ ಕಲ್ಲುಗಳನ್ನು ತೂರಿ, ಕಿಟಕಿಗಳಿಗೆ ಹಾನಿಮಾಡಿದ್ದಾರೆ.

ಸಮೀಪದ ಆಸ್ಪತ್ರೆ, ಜಯದೇವ ಇಂಗ್ಲಿಷ್ ಮಾಧ್ಯಮ ಶಾಲೆ, ಅಂಗಡಿಗಳು, ತಳ್ಳುಗಾಡಿಗಳು ಹಾಗೂ ಮನೆಗಳತ್ತಲೂ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಗಾಜು, ಕಿಟಕಿ ಹಾಗೂ ಹೆಂಚುಗಳಿಗೆ ಹಾನಿಯಾಗಿದೆ. ಉದ್ರಿಕ್ತರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಎಂಟು ಸುತ್ತು ಗುಂಡು ಹಾರಿಸಿ ಅಶ್ರುವಾಯು ಸಿಡಿಸಿದರು.

ಘಟನಾ ಸ್ಥಳದಲ್ಲಿ ಬೆಳಿಗ್ಗೆ ಒಂದು ಟ್ರಾಕ್ಟರ್‌ನಷ್ಟು ಕಲ್ಲುಗಳು ಹಾಗೂ ಚಪ್ಪಲಿಗಳು ಬಿದ್ದಿದ್ದವು. ಗಲಭೆ ಹಾಗೂ ಕಲ್ಲು ತೂರಾಟದ ವಿಡಿಯೊ ಹಾಗೂ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳು ಇದೀಗ ಹರಿದಾಡುತ್ತಿವೆ. ಘಟನಾ ಸ್ಥಳ ಹಾಗೂ ಸುತ್ತಮುತ್ತ ನಿಲ್ಲಿಸಿದ್ದ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದು, ಮಾಲೀಕರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ವಿಡಿಯೊಗಳು, ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಆಧರಿಸಿ ಗಲಭೆಯಲ್ಲಿ ಭಾಗಿಯಾದವರನ್ನು ವಶಕ್ಕೆ ಪಡೆದಿದ್ದಾರೆ.

**12 ಪೊಲೀಸರಿಗೆ ಗಾಯ:** ‘ಗಲಭೆ ನಿಯಂತ್ರಿಸುತ್ತಿದ್ದ ಪೂರ್ವ ಸಂಚಾರ ಠಾಣೆಯ ಇನ್‌ಸ್ಪೆಕ್ಟರ್ ಎನ್‌.ಸಿ. ಕಾಡದೇವರ, ಕಾನ್‌ಸ್ಟೆಬಲ್ ಗುರುಪಾದಪ್ಪ ಸ್ವಾದಿ ಅವರು ಗಾಯಾಳುಗಳಲ್ಲಿ ಸೇರಿದ್ದಾರೆ. ಕಾಡದೇವರ ಜೊತೆಗೆ ಇಬ್ಬರು ಪೊಲೀಸರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರಿಗೆ ಪ್ರಥಮ ಚಿಕಿತ್ಸೆ ಕೊಡಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಲಾಭೂರಾಮ್ ಸುದ್ದಿಗಾರರಿಗೆ ತಿಳಿಸಿದರು.

‘ಘಟನೆಯಲ್ಲಿ 12 ಪೊಲೀಸ್ ವಾಹನಗಳು, ಸ್ಥಳದಲ್ಲಿದ್ದ ಇತರ ವಾಹನಗಳಿಗೆ ಹಾನಿಯಾಗಿದೆ. ಸಾರ್ವಜನಿಕರ ಆಸ್ತಿಪಾಸ್ತಿಗಳಿಗೂ ಹಾನಿಯಾಗಿದೆ. ಬಂದೋಬಸ್ತ್‌ಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಿದ್ದು, ಗಲಭೆ ನಡೆಸಿದವರು ಹಾಗೂ ಘಟನೆ ಹಿಂದಿರುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

**ತಾಯಂದಿರ ಅಳಲು:** ಗಲಭೆಗೆ ಸಂಬಂಧ ಪೊಲೀಸರು ಬಂಧಿಸಿರುವ ಹಾಗೂ ವಶಕ್ಕೆ ಪಡೆದಿರುವ ಆರೋಪಿಗಳ ತಾಯಂದಿರು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಮುಂದೆ ಜಮಾಯಿಸಿ, ‘ನಮ್ಮ ಮಕ್ಕಳು ಅಮಾಯಕರಾಗಿದ್ದು, ಪೊಲೀಸರು ವಿನಾ ಕಾರಣ ಎಳೆದು ಕೊಂಡು ಬಂದಿದ್ದಾರೆ. ಅವರನ್ನು ಬಿಟ್ಟು ಬಿಡಿ’ ಎಂದು ಮನವಿ ಮಾಡಿದರು.

ಪೊಲೀಸ್ ವಶದಲ್ಲಿರುವ ಕೆಲಯುವಕರ ಸಹೋದರಿಯರು ಸಹ ಠಾಣೆ ಬಳಿ ಬಂದು ಅಳುತ್ತಾ, ಸಹೋದರರನ್ನು ಬಿಡುವಂತೆ ಗೋಗರೆಯುತ್ತಿದ್ದ ದೃಶ್ಯವೂ ಕಂಡುಬಂತು.

ಠಾಣೆಗೆ ಕಾಂಗ್ರೆಸ್, ಎಐಎಂಐಎಂ ಹಾಗೂ ಮುಸ್ಲಿಂ ಮುಖಂಡರು ಭೇಟಿ ನೀಡಿ, ಅಮಾಯಕರ ಬದಲು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಹನುಮಂತ ದೇವಸ್ಥಾನದ ಮೇಲೆ ಕಲ್ಲು ತೂರಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಹಿಂದೂ ಸಮುದಾಯದ ಮುಖಂಡರು ಆಗ್ರಹಿಸಿದರು.

### ‘ಪೂರ್ವನಿಯೋಜಿತ ಕೃತ್ಯ’

‘ಕಲ್ಲು ತೂರಾಟ ನಡೆಸುವಾಗ ಇಂಡಿ ಪಂಪ್ ವೃತ್ತದ ಹೈಮಾಸ್ಟ್ ವಿದ್ಯುತ್ ದೀಪ ಆರಿಸಲಾಗಿತ್ತು. ಕೆಲ ಹೊತ್ತಿನ ನಂತರ ಬೆಳಗಿಸಲಾಯಿತು. ಪೊಲೀಸರು, ಸಾರ್ವಜನಿಕರು ಸೇರಿದಂತೆ, ಶಾಂತಿ ಕಾಯ್ದುಕೊಳ್ಳುವಂತೆ ಮನವಿ ಮಾಡುತ್ತಿದ್ದ ಮುಸ್ಲಿಂ ಮುಖಂಡರಿಗೂ ಕಲ್ಲೇಟುಗಳು ಬಿದ್ದಿವೆ. ಈ ಗಲಭೆ ಪೂರ್ವನಿಯೋಜಿತವಾಗಿದೆ’ ಎಂದು ಹುಬ್ಬಳ್ಳಿ ಅಂಜುಮನ್ ಎ ಸಂಸ್ಥೆ ಅಧ್ಯಕ್ಷ ಯೂಸುಫ್ ಸವಣೂರ ಪ್ರತಿಕ್ರಿಯಿಸಿದರು.

‘20ರಿಂದ 25 ವರ್ಷದೊಳಗಿನ ಯುವಕರೇ ಹೆಚ್ಚಾಗಿದ್ದರು. ಎರಡು ಟ್ರಾಕ್ಟರ್‌ನಷ್ಟು ಕಲ್ಲುಗಳು ಎಲ್ಲಿಂದ ಬಂದವು? ಪವಿತ್ರ ರಂಜಾನ್ ಮಾಸದಲ್ಲೇ ಈ ಅಹಿತಕರ ಘಟನೆ ನಡೆದಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಎಲ್ಲರೂ ಸೌಹಾರ್ದ ಕಾಪಾಡಬೇಕು’ ಎಂದು ಮನವಿ ಮಾಡಿದರು.

### ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಏನಿತ್ತು?

ಅಭಿಷೇಕ ಹಿರೇಮಠ

ಮಸೀದಿ ಮೇಲೆ ಭಗವಾಧ್ವಜ ಹಾರಿಸುತ್ತಿರುವಂತೆ ಕಾಣುವ ಎಡಿಟ್ ಮಾಡಿದ ಅನಿಮೇಟೆಡ್ ವಿಡಿಯೊವನ್ನು ಆನಂದನಗರದ ದ್ವಿತೀಯ ಪಿಯು ವಿದ್ಯಾರ್ಥಿ ಅಭಿಷೇಕ ಹಿರೇಮಠ ತನ್ನ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ.

‘ಹಿಂದೂ ಸಾಮ್ರಾಟ್, ತಲೆ ಕೆಟ್ಟರೆ ಇಲ್ಲೂ ಭಗವಾಧ್ವಜ ಹಾರಿಸುವೆವು, ಜೈ ಶ್ರೀರಾಮ್’ ಎಂಬ ಬರಹ ಅದರಲ್ಲಿತ್ತು. ಇದು ವೈರಲ್ ಆಗಿತ್ತು. ಈ ಬಗ್ಗೆ ತಬೀಬ್ ಲ್ಯಾಂಡ್‌ನ ಮೊಹಮ್ಮದ್ ಅಜರ್ ಬೇಲೇರಿ ಶನಿವಾರ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿತ್ತು. ಗಲಭೆ ವಿಷಯ ತಿಳಿಯುತ್ತಿದ್ದಂತೆ, ಆರೋಪಿಯ ಕುಟುಂಬದವರು, ಯಾರ ಸಂಪರ್ಕಕ್ಕೂ ಸಿಗದಂತೆ ಆನಂದನಗರದಲ್ಲಿರುವ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದಾರೆ.

### ‘ಗಲಭೆಗೂ ಎಐಎಂಐಎಂ ಪಕ್ಷಕ್ಕೂ ಸಂಬಂಧವಿಲ್ಲ’

ಪಾಲಿಕೆಯ ಸದಸ್ಯೆಯ ಪತಿ ಇರ್ಫಾನ್ ನಾಲತವಾಡ ಬಂಧನಕ್ಕೆ ಸಂಬಂಧಿಸಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಎಐಎಂಐಎಂ ಪಕ್ಷದ ಧಾರವಾಡ ಜಿಲ್ಲಾ ಜಂಟಿ ಕಾರ್ಯದರ್ಶಿ ವಿಜಯ ಗುಂಟ್ರಾಳ, ‘ಗಲಭೆಗೂ, ಪಕ್ಷಕ್ಕೂ ಸಂಬಂಧವಿಲ್ಲ. ಉದ್ರಿಕ್ತ ಯುವಕರಿಗೆ ತಿಳಿಹೇಳುತ್ತಿದ್ದ ಇರ್ಫಾನ್ ಅವರ ಬಂಧನವನ್ನೇ ನೆಪವಾಗಿಟ್ಟುಕೊಂಡು, ಘಟನೆಗೆ ಪಕ್ಷವೇ ಕಾರಣ ಎಂದು ಬಿಂಬಿಸಲಾಗುತ್ತಿದೆ. ಇದರ ಹಿಂದೆ ದುರುದ್ದೇಶವಿದೆ’ ಎಂದು ಹೇಳಿದರು.

### ಮಳೆ: ವಿವಿಧೆಡೆ ಬೆಳೆ ಹಾನಿ

**ಹೊಸದುರ್ಗ:** ತಾಲ್ಲೂಕಿನ ವಿವಿಧೆಡೆ ಶನಿವಾರ ಸಂಜೆ ಬಿರುಗಾಳಿ ಸಹಿತ ಮಳೆಯಾಗಿದ್ದು, ಹೊತ್ತರಗೊಂಡನಹಳ್ಳಿಯಲ್ಲಿ ಕೆಂಚಪ್ಪ ಅವರ ಮನೆಗೋಡೆ ಕುಸಿದಿದ್ದು, ನಾಲ್ವರಿಗೆ ಪೆಟ್ಟಾಗಿದೆ.

ಚಿಕ್ಕಜಾಜೂರು ಬಳಿ ಅರಸನಘಟ್ಟ ಗ್ರಾಮದಲ್ಲಿ ಬಾಳೆ, ಬಾಳೆ, ಪಪ್ಪಾಯಿ, ಅಡಿಕೆ–ತೆಂಗು ಬೆಳೆ ಹಾನಿಯಾಗಿದೆ. ಹಿರಿಯೂರು ತಾಲ್ಲೂಕಿನ ಕೋವೇರಹಟ್ಟಿಯಲ್ಲಿ ಬಾಳೆ, ಅಡಿಕೆ ಗಿಡಗಳು ಉರುಳಿವೆ.

**ಆಲಿಕಲ್ಲು ಮಳೆ:** ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ, ದಾವಣಗೆರೆ ಜಿಲ್ಲೆಯ ಚನ್ನಗಿರಿ, ನ್ಯಾಮತಿ ಸೇರಿ ವಿವಿಧೆಡೆ ಆಲಿಕಲ್ಲು ಸಮೇತ ಮಳೆಯಾಗಿದೆ.

**ಚಿಕ್ಕಮಗಳೂರು ವರದಿ:** ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಲ್ದೂರು, ಗಿರಿಶ್ರೇಣಿ, ಅಲ್ಲಂಪುರ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.

### ರಾಜ್ಯದಲ್ಲಿ ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ 75 ಲಕ್ಷ

**ಬೆಂಗಳೂರು:** ರಾಜ್ಯದಲ್ಲಿ ದಾಖಲೆಯ 75 ಲಕ್ಷ ಮಂದಿ ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ ಪಡೆದಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಎಐಸಿಸಿ ಡಿಜಿಟಲ್ ಸದಸ್ಯತ್ವ ಅಭಿಯಾನದ ಕರ್ನಾಟಕದ ನೇತೃತ್ವವನ್ನು ರಘುನಂದನ್ ರಾಮಣ್ಣ ವಹಿಸಿದ್ದರು. ಇಡೀ ದೇಶದಲ್ಲಿಯೇ ಅತಿ ಹೆಚ್ಚು ಡಿಜಿಟಲ್ ಸದಸ್ಯತ್ವಕ್ಕೆ ಕಾರಣರಾದ ರಘುನಂದನ್ ರಾಮಣ್ಣ ಅವರನ್ನು ಎಐಸಿಸಿ ವರಿಷ್ಠ ರಾಹುಲ್ ಗಾಂಧಿ ಅಭಿನಂದಿಸಿದ್ದಾರೆ.

ರಾಜ್ಯದಲ್ಲಿ ಫೆ. 4ರಂದು ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ ಆರಂಭವಾಗಿತ್ತು. ಡಿ.ಕೆ. ಶಿವಕುಮಾರ್ ಅವರು ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಸದಸ್ಯತ್ವ ಅಭಿಯಾನದ ತರಬೇತಿ, ಪ್ರಗತಿ ಪರಿಶೀಲನೆ ಜತೆಗೆ ನಿರಂತರ ಜೂಮ್ ಸಭೆಗಳನ್ನು ನಡೆಸಿದ್ದರು. ಇದೇ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷ ಸಂಘಟನೆ ಹಾಗೂ ಬಲವರ್ಧನೆಗೆ ಅತ್ಯಂತ ಸುಧಾರಿತ ತಂತ್ರಜ್ಞಾನವನ್ನು ಬಳಸಿ, ಕಾರ್ಯಕರ್ತರು ಹಾಗೂ ಮತದಾರರ ಸಂಪರ್ಕ ಸಾಧಿಸಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ನೋಂದಣಿದಾರರು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

## ಕಬ್ಬಿಣ ಅದಿರು ರಫ್ತು ಮೇಲಿನ ನಿರ್ಬಂಧ ತೆರವು: ಬೆಂಬಲ

ನವದೆಹಲಿ: ಕರ್ನಾಟಕದಿಂದ ಕಬ್ಬಿಣ ಅದಿರು ರಫ್ತಿನ ಮೇಲೆ ವಿಧಿಸಿರುವ ನಿರ್ಬಂಧವನ್ನು ತೆರವುಗೊಳಿಸಬೇಕು ಎಂಬ ಬೇಡಿಕೆಗೆ ಉಕ್ಕು ಸಚಿವಾಲಯ ಬೆಂಬಲ ಸೂಚಿಸಿದೆ.

ರಫ್ತಿನ ಮೇಲೆ ಹೇರಿರುವ ನಿರ್ಬಂಧವನ್ನು ತೆರವುಗೊಳಿಸುವಂತೆ ಗಣಿ ಸಚಿವಾಲಯವು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ ಬೆನ್ನಲ್ಲೇ, ಉಕ್ಕು ಸಚಿವಾಲಯದಿಂದ ಇಂಥದೇ ಬೇಡಿಕೆ ವ್ಯಕ್ತವಾಗಿದೆ. ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠವು ಈ ವಿಷಯಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ಸೋಮವಾರ (ಏ.18) ನಡೆಸಲಿದೆ.

ಇತರ ರಾಜ್ಯಗಳು, ಕರ್ನಾಟಕದಲ್ಲಿರುವ ಕಬ್ಬಿಣ ಅದಿರು ಗಣಿಗಳ ನಡುವಿನ ತಾರತಮ್ಯ ಕೊನೆಗಾಣಿಸಬೇಕು ಎಂದು ಸಚಿವಾಲಯ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಹೀಗೆ ಮಾಡುವುದರಿಂದ ಕರ್ನಾಟಕದ ಗಣಿಗಳಿಂದ ಹೊರತೆಗೆಯಲಾದ ಅದಿರನ್ನು ಇತರ ರಾಜ್ಯಗಳಿಗೆ ಸಾಗಿಸಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕಬ್ಬಿಣ ಅದಿರಿನ ಗಣಿಗಾರಿಕೆ ಮೇಲೆ ಮಿತಿ ಹೇರಿ ನೀಡಿರುವ ಆದೇಶವನ್ನು ತೆರವುಗೊಳಿಸಬೇಕು. ಇದರಿಂದ ಅಗತ್ಯ ಪ್ರಮಾಣದ ಅದಿರು ಲಭ್ಯವಾಗುವುದನ್ನು ಖಾತ್ರಿಪಡಿಸಿದಂತಾಗುವುದು ಎಂದೂ ಸಚಿವಾಲಯವು ಸುಪ್ರೀಂಗೆ ತಿಳಿಸಿದೆ.

ರಫ್ತು ನಿರ್ಬಂಧ ತೆರವುಗೊಳಿಸಬೇಕು ಎಂಬ ಬೇಡಿಕೆಗೆ ಬೆಂಬಲ ವ್ಯಕ್ತಪಡಿಸಿ ಗಣಿ ಸಚಿವಾಲಯ ಸಲ್ಲಿಸಿದ್ದ ಅರ್ಜಿಯನ್ನು, ಸ್ವಯಂಸೇವಾ ಸಂಸ್ಥೆ ಸಮಾಜ ಪರಿವರ್ತನಾ ಸಮುದಾಯ ವಿರೋಧಿಸಿತ್ತು. ಈ ಬೇಡಿಕೆ ಬಗ್ಗೆ ಉಕ್ಕು ಸಚಿವಾಲಯ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸಂಸ್ಥೆ ಹೇಳಿತ್ತು.

### ಕೀವ್ ಸಮೀಪ ಸೇನಾ ಕಾರ್ಖಾನೆ ಧ್ವಂಸ, ಮರಿಯುಪೋಲ್ ಮೇಲೆ ರಷ್ಯಾ ಬಿಗಿ ಹಿಡಿತ

# ದೊಡ್ಡ ನಗರಗಳ ಮೇಲೆ ತೀವ್ರ ದಾಳಿ

ಕೀವ್/ ಮಾಸ್ಕೊ (ಎಪಿ/ಎಎಫ್‌ಪಿ): ರಷ್ಯಾ ಪಡೆಗಳು, ಉಕ್ರೇನ್‌ನ ದೊಡ್ಡ ನಗರಗಳನ್ನು ಪ್ರಮುಖ ಗುರಿಯಾಗಿಸಿ ದಾಳಿಯನ್ನು ಭಾನುವಾರ ತೀವ್ರಗೊಳಿಸಿವೆ. ಪ್ರತಿಷ್ಠಿತ ಸಮರ ನೌಕೆ 'ಮಾಸ್ಕವಾ' ಮುಳುಗಿದ ನಂತರ ಪ್ರತೀಕಾರಕ್ಕಾಗಿ ಕೀವ್ ಮತ್ತು ಮೈಕೊಲೈವ್ ನಗರಗಳ ಸುತ್ತಮುತ್ತಲಿನ ಸೇನಾ ನೆಲೆಗಳು ಮತ್ತು ಸೇನಾ ಸಾಧನಗಳ ಕಾರ್ಖಾನೆಗಳನ್ನೇ ಗುರಿಯಾಗಿಸಿ ರಷ್ಯಾ ಕ್ಷಿಪಣಿಗಳ ದಾಳಿ ನಡೆಸಿದೆ.

ಭಾನುವಾರ ನಸುಕಿನಲ್ಲಿ ಕೀವ್ ಹೊರವಲಯದ ಬ್ರೊವರಿ ನಗರದಲ್ಲಿನ ಶಸ್ತ್ರಾಸ್ತ್ರಗಳ ಕಾರ್ಖಾನೆಯನ್ನು ರಷ್ಯಾ ವಾಯುಪಡೆಯು ಶರವೇಗದ ಕ್ಷಿಪಣಿಗಳ ದಾಳಿ ನಡೆಸಿ, ಧ್ವಂಸಗೊಳಿಸಿದೆ. ಕ್ಷಿಪಣಿ ದಾಳಿಯಾಗಿರುವುದನ್ನು ಮೇಯರ್ 'ಇಗೊರ್ ಸಪೋಝ್ಕೊ' ಖಚಿತಪಡಿಸಿದ್ದಾರೆ. ಕೀವ್ ಸಮೀಪದ ಡಾರ್ನಿಟ್ಸ್ಕಿ ಜಿಲ್ಲೆಯಲ್ಲಿರುವ ಶಸ್ತ್ರಾಸ್ತ್ರ ವಾಹನಗಳ ತಯಾರಿಕೆ ಮತ್ತು ಯುದ್ಧ ಟ್ಯಾಂಕ್ ದುರಸ್ತಿ ಕಾರ್ಖಾನೆಗಳನ್ನು ಶನಿವಾರ ರಷ್ಯಾ ವಾಯುಪಡೆ, ಕ್ಷಿಪಣಿ ದಾಳಿ ನಡೆಸಿ ನಾಶಮಾಡಿತ್ತು.

ಉಕ್ರೇನ್‌ನ ಎರಡನೇ ಅತಿದೊಡ್ಡ ನಗರ ಹಾರ್ಕಿವ್ ಮೇಲೂ ರಷ್ಯಾ ಪಡೆಗಳು ಶೆಲ್, ಕ್ಷಿಪಣಿಗಳ ದಾಳಿ ತೀವ್ರಗೊಳಿಸಿವೆ. 'ನಾಗರಿಕ ಪ್ರದೇಶದ ಮೇಲೆ ಕಲಿಬರ್ ಕ್ರೂಸ್ ಕ್ಷಿಪಣಿಗಳು ಅಪ್ಪಳಿಸಿದ್ದು, ಐದು ನಾಗರಿಕರು ಮೃತಪಟ್ಟು, 13 ಜನರು ಗಾಯಗೊಂಡಿದ್ದಾರೆ' ಎಂದು ಗವರ್ನರ್ ಕಚೇರಿ ಮಾಹಿತಿ ನೀಡಿದೆ.

ಕಳೆದ 24 ತಾಸುಗಳಲ್ಲಿ ದೇಶದಾದ್ಯಂತ ಎಂಟು ಪ್ರಾಂತ್ಯಗಳಲ್ಲಿ ದಾಳಿ ನಡೆದಿದೆ. ಅದರಲ್ಲೂ ಕೀವ್ ಮೇಲೆ ಶನಿವಾರ ಹಲವು ಬಾರಿ ಕ್ಷಿಪಣಿ ಮತ್ತು ಶೆಲ್ ದಾಳಿಯಾಗಿದೆ. ಲುವಿವ್ ಮೇಲೆ ರಷ್ಯಾ ಸುಖೋಯ್– 35 ಯುದ್ಧವಿಮಾನಗಳಿಂದ ಕ್ಷಿಪಣಿ ದಾಳಿ ನಡೆಸಿತ್ತು. ಕೀವ್‌ನಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದ್ದು, ಪಶ್ಚಿಮದ ರಾಷ್ಟ್ರಗಳು ರಾಯಭಾರ ಕಚೇರಿಗಳನ್ನು ಪುನಃ ತೆರೆಯಲು ಸಜ್ಜಾಗುತ್ತಿದ್ದ ಬೆನ್ನಲ್ಲೇ ದಾಳಿ ತೀವ್ರಗೊಂಡಿದೆ ಎಂದು ಉಕ್ರೇನ್ ಹೇಳಿದೆ. ಕೀವ್ ನಗರ ವಶಕ್ಕೆ ಪಡೆಯುವಲ್ಲಿ ವಿಫಲವಾದ ಕಾರಣಕ್ಕೆ ರಷ್ಯಾ ತನ್ನ ಪಡೆಗಳನ್ನು ಪೂರ್ವದ ಲುಹಾನ್ಸ್ಕ್ ಮತ್ತು ಡಾನ್‌ಬಾಸ್ ಪ್ರಾಂತ್ಯಕ್ಕೆ ಸ್ಥಳಾಂತರಿಸಿತ್ತು.

### ಶರಣಾಗದಿದ್ದರೆ ಹತ್ಯೆ ಖಚಿತ: ರಷ್ಯಾ ಎಚ್ಚರಿಕೆ

'ಮರಿಯುಪೋಲ್ ನಗರ ಸಂಪೂರ್ಣ ಹಿಡಿತದಲ್ಲಿದ್ದು, ಉಕ್ರೇನ್ ಸೈನಿಕರು ಶಸ್ತ್ರ ತೊರೆದು, ಜೀವ ಉಳಿಸಿಕೊಳ್ಳಲು ದಿನದ ಗಡುವು ನೀಡಲಾಗಿತ್ತು. ಆದರೆ, ಅವರು ಶರಣಾಗತಿ ತಿರಸ್ಕರಿಸಿದ್ದು, ಅವರೆಲ್ಲರನ್ನೂ ಹತ್ಯೆ ಮಾಡಲಾಗುವುದು' ಎಂದು ರಷ್ಯಾ ಸೇನೆ ಭಾನುವಾರ ಎಚ್ಚರಿಕೆ ನೀಡಿದೆ.

ಅಜೋವ್‌ಸ್ಟಾಲ್ ಉಕ್ಕಿನ ಕಾರ್ಖಾನೆಯಲ್ಲಿ ಭಾನುವಾರ ಮಧ್ಯಾಹ್ನ 1 ಗಂಟೆಯವರೆಗೂ ಶರಣಾಗಲು ಉಕ್ರೇನ್ ಸೈನಿಕರಿಗೆ ಅವಕಾಶ ಕಲ್ಪಿಸಿ, ಶಸ್ತ್ರಾಸ್ತ್ರ ತ್ಯಜಿಸುವವರೆಲ್ಲರ ಜೀವ ಉಳಿಸುವ ಖಾತ್ರಿಯನ್ನು ರಷ್ಯಾ ಸೇನೆ ನೀಡಿತ್ತು. 'ಉಕ್ರೇನ್ ಸೇನಾ ಕಮಾಂಡ್ ತನ್ನ ಸೈನಿಕರ ಶರಣಾಗತಿ ನಿಷೇಧಿಸಿರುವ ಖಚಿತ ಮಾಹಿತಿ ನಮ್ಮ ಸೇನೆಗೆ ಲಭಿಸಿದೆ. ಅಲ್ಲಿ ಪ್ರತಿರೋಧ ತೋರುವವರೆಲ್ಲರೂ ಹತರಾಗಲಿದ್ದಾರೆ' ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೋರ್ ಕೊನಶೆಂಕೊವ್ ಎಚ್ಚರಿಕೆ ನೀಡಿದ್ದಾರೆ.

'ಅಜೋವ್‌ಸ್ಟಾಲ್‌ನಲ್ಲಿ ಉಕ್ರೇನ್ ಪಡೆಗಳ ಜೊತೆಗೆ ಸುಮಾರು 400 ವಿದೇಶಿ ಬಾಡಿಗೆ ಸೈನಿಕರು ಇದ್ದಾರೆ. ಅವರಲ್ಲಿ ಹೆಚ್ಚಿನವರು ಐರೋಪ್ಯ ದೇಶಗಳು ಮತ್ತು ಕೆನಡಾದಿಂದ ಬಂದವರು. ಈವರೆಗೆ ಉಕ್ರೇನ್ ಸೇನೆ, ಯೋಧರು ಮತ್ತು ಬಾಡಿಗೆ ಸೈನಿಕರು ಸೇರಿ 23,367 ಸಿಬ್ಬಂದಿಯನ್ನು ಕಳೆದುಕೊಂಡಿದೆ. ಮರಿಯುಪೋಲ್ ನಗರದ ಬಳಿ ಮಸೀದಿಯಲ್ಲಿ ಒತ್ತೆ ಇರಿಸಿಕೊಂಡಿದ್ದ ಟರ್ಕಿ ಪ್ರಜೆಗಳನ್ನು ವಿಶೇಷ ಸೇನಾ ಪಡೆಗಳು ವಿಮುಕ್ತಗೊಳಿಸಿವೆ. ಈ ವೇಳೆ 18 ಉಗ್ರರನ್ನು ಹತ್ಯೆಗೈಯಲಾಗಿದೆ' ಎಂದು ಕೊನಶೆಂಕೊವ್ ಹೇಳಿದ್ದಾರೆ.

### ಭಾರಿ ಶಸ್ತ್ರಾಸ್ತ್ರಗಳಿಗೆ ಬೇಡಿಕೆ

'ಮರಿಯುಪೋಲ್ ನಗರಕ್ಕೆ ಮುತ್ತಿಗೆ ಹಾಕಿರುವ ರಷ್ಯಾ, ಅಲ್ಲಿರುವ ಎಲ್ಲರ ಹತ್ಯೆಗೆ ಯತ್ನಿಸುತ್ತಿದೆ. ನಗರ ರಕ್ಷಿಸಲು ಉಕ್ರೇನ್ ಸೇನೆಗೆ ಪಶ್ಚಿಮದ ರಾಷ್ಟ್ರಗಳು ಹೆಚ್ಚಿನ ಭಾರಿ ಶಸ್ತ್ರಾಸ್ತ್ರಗಳನ್ನು ಪೂರೈಸಬೇಕು' ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಒತ್ತಾಯಿಸಿದ್ದಾರೆ.

**4 ಸಾವಿರ ಯೋಧರು ಹತ:** 'ಮರಿಯುಪೋಲ್‌ನ ನಗರ ಪ್ರದೇಶವನ್ನು ಶನಿವಾರವೇ ವಶಕ್ಕೆ ಪಡೆದ ರಷ್ಯಾ ಪಡೆಗಳು, ಅಜೋವ್‌ಸ್ಟಾಲ್ ಉಕ್ಕಿನ ಕಾರ್ಖಾನೆಯ ವಶಕ್ಕೆ ಕಾರ್ಯಾಚರಣೆ ನಡೆಸುತ್ತಿವೆ. ಈ ನಗರದಲ್ಲಿ ಉಕ್ರೇನ್ ಪಡೆಗಳ 4 ಸಾವಿರ ಸಿಬ್ಬಂದಿ ಹತರಾಗಿದ್ದಾರೆ' ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿರುವುದಾಗಿ 'ರಿಯಾ' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಉಕ್ರೇನ್‌ನ ಹಾರ್ಕಿವ್‌ನಲ್ಲಿ ಭಾನುವಾರ ನಡೆದ ಬಾಂಬ್ ದಾಳಿಯಿಂದ ಜನವಸತಿ ಕಟ್ಟಡಕ್ಕೆ ಹೊತ್ತಿಕೊಂಡ ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಮಾಡಿದರು —ಎಎಫ್‌ಪಿ ಚಿತ್ರ

### ಟೋಕಿಯೊದಲ್ಲಿ ಮೇ 24ರಂದು ಕ್ವಾಡ್ ರಾಷ್ಟ್ರಗಳ ಶೃಂಗಸಭೆ

ನವದೆಹಲಿ: ಮೇ 24ರಂದು ಟೋಕಿಯೊದಲ್ಲಿ 'ಕ್ವಾಡ್' ಶೃಂಗಸಭೆ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುವ ಸಾಧ್ಯತೆ ಇದೆ.

ಕ್ವಾಡ್ ಸದಸ್ಯ ರಾಷ್ಟ್ರಗಳ ನಾಯಕರು, ಭೌತಿಕವಾಗಿ ನಡೆಯುತ್ತಿರುವ ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಚೀನಾದ ಪ್ರಯತ್ನಗಳಿಗೆ ತಡೆಯೊಡ್ಡಲು ತಾವು ಬದ್ಧ ಎಂಬ ಸಂದೇಶವನ್ನು ಕ್ವಾಡ್ ಸದಸ್ಯ ರಾಷ್ಟ್ರಗಳ ನಾಯಕರು ಈ ಶೃಂಗಸಭೆ ಮೂಲಕ ರವಾನಿಸಲಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಆತಿಥ್ಯದಲ್ಲಿ ನಡೆಯಲಿರುವ ಈ ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಸಹ ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

'ಕ್ವಾಡ್' 2017ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಟೋಕಿಯೊದಲ್ಲಿ ನಡೆಯಲಿರುವ ಶೃಂಗಸಭೆಯು ಭೌತಿಕವಾಗಿ ಆಯೋಜನೆಯಾಗುತ್ತಿರುವ 2ನೇ ಸಭೆಯಾಗಿದೆ. ಮೊದಲನೇ ಸಭೆ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ವಾಷಿಂಗ್ಟನ್‌ನಲ್ಲಿ ನಡೆದಿತ್ತು.

ರಷ್ಯಾ–ಉಕ್ರೇನ್ ಯುದ್ಧವೂ ಈ ಶೃಂಗಸಭೆಯಲ್ಲಿ ಪ್ರಸ್ತಾಪವಾಗುವ ಸಾಧ್ಯತೆ ಇದೆ. ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗಗಳ ಮೂಲಕ ಉಭಯ ದೇಶಗಳ ಬಿಕ್ಕಟ್ಟು ಬಗೆಹರಿಸಿಕೊಳ್ಳಬೇಕು ಎಂಬ ತನ್ನ ನಿಲುವನ್ನು ಭಾರತ ಈ ಸಭೆಯಲ್ಲಿ ಪುನರುಚ್ಚರಿಸಲಿದೆ. ಈ ನಿಟ್ಟಿನಲ್ಲಿ ಜಪಾನ್, ಆಸ್ಟ್ರೇಲಿಯಾ ಹಾಗೂ ಅಮೆರಿಕ ನಡೆಸುವ ಪ್ರಯತ್ನಗಳಿಗೆ ತಾನು ಕೈಜೋಡಿಸುವುದಾಗಿ ಭಾರತ ಸ್ಪಷ್ಟಪಡಿಸಲಿದೆ ಎಂದು ಮೂಲಗಳು ಹೇಳಿವೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್ ಯುಟ್ಯೂಬ್ ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಗುತ್ತಿಗೆ: ಶೇ 40ರಷ್ಟು ಕಮಿಷನ್ ಏನಿದರ ಹಕೀಕತ್?
ಸಂವಾದ
ಭಾಗವಹಿಸುವವರು:
ಕೆ. ನೀಲಾ, ಸಿಪಿಎಂ ನಾಯಕಿ
ಬಿ.ಭಾಸ್ಕರರಾವ್, ಆಮ್ ಆದ್ಮಿ ಪಕ್ಷದ ನಾಯಕ
ಮಲ್ಲಿಕಾರ್ಜುನ ಭಟ್ಟರಹಳ್ಳಿ, ಕೆಆರ್‌ಎಸ್ ಪಕ್ಷ, ರಾಜ್ಯ ಕಾರ್ಯದರ್ಶಿ
ಮಧ್ಯಾಹ್ನ 2 ರಿಂದ 3
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಕನ್ನಡ ಧ್ವನಿ

### ಪೊಲೀಸರಿಂದ ಶಾಂತಿಸಭೆ; ಸ್ಥಳದಲ್ಲಿ ಬಂದೋಬಸ್ತ್ • ಚಲನವಲನಗಳ ಮೇಲೆ ನಿಗಾಕ್ಕೆ ಡ್ರೋನ್

# ಜಹಾಂಗಿರ್‌ಪುರಿ ಹಿಂಸಾಚಾರ: 20 ಜನರ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಜಹಾಂಗಿರ್‌ಪುರಿಯಲ್ಲಿ ಹನುಮ ಜಯಂತಿ ಮೆರವಣಿಗೆ ವೇಳೆ ಹಿಂಸಾಚಾರ ನಡೆಸಿದ ಆರೋಪದ ಮೇಲೆ ಮುಖ್ಯ ಸಂಚುಕೋರ ಸೇರಿದಂತೆ 20 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಸ್ಥಳದಲ್ಲಿ ಪೊಲೀಸರು ತೀವ್ರ ನಿಗಾ ವಹಿಸಿದ್ದು, ಶಾಂತಿ ಸಭೆಗಳನ್ನು ಭಾನುವಾರ ನಡೆಸಿದರು.

ಘಟನೆ ಸಂಬಂಧ ಇಬ್ಬರು ಬಾಲಕರನ್ನೂ ವಶಕ್ಕೆ ಪಡೆಯಲಾಗಿದೆ. ಜಹಾಂಗಿರ್‌ಪುರದಲ್ಲಿ ಪರಿಸ್ಥಿತಿ ಈಗ ಶಾಂತವಾಗಿದೆ. ಶನಿವಾರ ಸಂಜೆ ಹಿಂಸಾಚಾರಕ್ಕೆ ಕಾರಣವಾಗಿದ್ದ ಸ್ಥಳದಲ್ಲಿ ಜನರ ಚಲನವಲನಗಳ ಮೇಲೆ ನಿಗಾ ಇರಿಸಲು ಪೊಲೀಸರು ಡ್ರೋನ್‌ಗಳನ್ನು ನಿಯೋಜಿಸಿದ್ದಾರೆ. ಹಿಂಸಾಚಾರದಲ್ಲಿ ಭಾಗಿಯಾದವರ ಗುರುತು ಪತ್ತೆಹಚ್ಚಲು ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಮೊಬೈಲ್ ಫೋನ್‌ಗಳ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದು, ಚಹರೆ ಪತ್ತೆ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದೆ. ವಾಯವ್ಯ ದೆಹಲಿಯ ಜೊತೆಗೆ ಆಗ್ನೇಯ ದೆಹಲಿಯಲ್ಲೂ ಪೊಲೀಸರು ನಿಗಾ ವಹಿಸಿದ್ದಾರೆ.

ಗುಂಡು ಹಾರಿಸಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಗಾಯಗೊಳ್ಳುವಂತೆ ಮಾಡಿದ 21 ವರ್ಷದ ಮೊಹಮ್ಮದ್ ಅಸ್ಲಾಂ ಎಂಬಾತನಿಂದ ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಈತನ ವಿರುದ್ಧ ಈ ಹಿಂದೆ ಅಪರಾಧ ಪ್ರಕರಣ ದಾಖಲಾಗಿದ್ದವು.

> ದೆಹಲಿಗರು ಒಗ್ಗಟ್ಟಾಗಿ, ಜಾಗೃತವಾಗಿ ಇರಬೇಕು. ಹಿಂಸಾಚಾರ, ಗಲಭೆಗಳು ಸುರಕ್ಷಿತ ಭಾವಕ್ಕೆ ಅಡ್ಡಿಯಾಗಿವೆ. ಆಳುವವರಲ್ಲಿ ಸಹಾನುಭೂತಿಯ ಕೊರತೆಯಿದೆ
> **ರಣದೀಪ್ ಸುರ್ಜೇವಾಲಾ,** ಕಾಂಗ್ರೆಸ್ ವಕ್ತಾರ

ಜಹಾಂಗಿರ್‌ಪುರಿ ಠಾಣೆಯಲ್ಲಿ ಅಸ್ಲಾಂ ವಿರುದ್ಧ 2020ರಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿ ವಿರುದ್ಧ 307, 12ಬಿ ಹಾಗೂ 147ನೇ ಕಲಂ ಅಡಿಯಲ್ಲಿ ಶನಿವಾರ ಸಂಜೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ವಾಯವ್ಯ ದೆಹಲಿ ಪೊಲೀಸ್ ಆಯುಕ್ತೆ ಉಷಾ ರಂಗಾನಿ ಹೇಳಿದ್ದಾರೆ.

ಶನಿವಾರ ಸಂಜೆ ಜಹಾಂಗಿರ್‌ಪುರಿಯ ಸಿ–ಬ್ಲಾಕ್ ಸಮೀಪಕ್ಕೆ ಹನುಮಾನ್ ಜಯಂತಿ ಮೆರವಣಿಗೆ ತಲುಪಿದಾಗ, ಗುಂಪಿನಲ್ಲಿದ್ದ ಜನರ ಜೊತೆ ಹೊರಗಿನಿಂದ ಬಂದ ನಾಲ್ಕೈದು ಜನರು ವಾಗ್ವಾದ ನಡೆಸಲು ಮುಂದಾದರು. ನಂತರ ಅದು ಕಲ್ಲುತೂರಾಟಕ್ಕೆ ತಿರುಗಿತು. ಘಟನೆಯಲ್ಲಿ ಎಂಟು ಪೊಲೀಸರು ಹಾಗೂ ಒಬ್ಬ ಸ್ಥಳೀಯ ವ್ಯಕ್ತಿ ಗಾಯಗೊಂಡರು. ಹಲವು ವಾಹನಗಳು ಜಖಂಗೊಂಡವು. ಘಟನಾ ನಂತರ ಸ್ಥಳದಲ್ಲಿ ಕ್ಷಿಪ್ರಕಾರ್ಯಪಡೆಯ ಸಿಬ್ಬಂದಿ ಸೇರಿದಂತೆ ಭಾರಿ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿದೆ.

ಶಾಂತಿಸಮಿತಿ ಸಭೆಗಳನ್ನು ನಡೆಸಿದ ಪೊಲೀಸರು, ಸ್ಥಳದಲ್ಲಿ ಶಾಂತಿ, ಸೌಹಾರ್ದ ಕಾಪಾಡುವಂತೆ ಮನವಿ ಮಾಡಿದರು. ವೃತ್ತಿಪರ ಹಾಗೂ ಮುಕ್ತ ತನಿಖೆಯ ಭರವಸೆ ನೀಡಿದರು.

ಬಾಂಗ್ಲಾದೇಶದ ಅಕ್ರಮ ವಲಸಿಗರಿಂದ ಹಿಂಸಾಚಾರ ನಡೆದಿದೆ ಎಂದು ಆದರ್ಶ ನಗರ ಬಿಜೆಪಿ ಕೌನ್ಸಿಲರ್ ಗರಿಮಾ ಗುಪ್ತಾ ಅವರು ಆರೋಪಿಸಿದರು.

ಗಲಭೆ ಸೃಷ್ಟಿಸಲು ಯತ್ನಿಸಿದವರು ಹೊರಗಿನವರು ಎಂದು ಅಂಗಡಿ ಮಾಲೀಕ ಮುಕೇಶ್ ಎಂಬುವರು ಅಭಿಪ್ರಾಯಪಟ್ಟರು.

ಕ್ಷಿಪ್ರಕಾರ್ಯಪಡೆ ಸಿಬ್ಬಂದಿ ದೆಹಲಿಯ ಜಹಾಂಗಿರ್‌ಪುರಿಯಲ್ಲಿ ಭಾನುವಾರ ಗಸ್ತು ನಡೆಸಿದರು–ಪಿಟಿಐ ಚಿತ್ರ

### 'ಮಕ್ಕಳನ್ನು ಬಳಸಿಕೊಂಡವರ ವಿರುದ್ಧ ಎಫ್‌ಐಆರ್ ದಾಖಲಿಸಿ'

ಜಹಾಂಗಿರ್‌ಪುರಿಯಲ್ಲಿ ನಡೆದ ಹಿಂಸಾಚಾರದಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಮಾಡಿದ ಆರೋಪಿಗಳ ಮೇಲೆ ಎಫ್‌ಐಆರ್ ದಾಖಲಿಸುವಂತೆ ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ದೆಹಲಿ ಪೊಲೀಸ್ ಆಯುಕ್ತರಿಗೆ ಭಾನುವಾರ ಸೂಚಿಸಿದೆ.

'ಮಕ್ಕಳನ್ನು ಈ ರೀತಿ ಬಳಸಿಕೊಳ್ಳುವುದು ಮಕ್ಕಳ ಹಕ್ಕುಗಳ ಕಾಯ್ದೆ ಪ್ರಕಾರ ಅಪರಾಧವಾಗಿದೆ. ಈ ಕಾನೂನನ್ನು ಉಲ್ಲಂಘಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಎನ್‌ಸಿಪಿಸಿಆರ್, ದೆಹಲಿ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದೆ.

### 'ಓಲೈಕೆ ಸಿದ್ಧಾಂತವೇ ಗಲಭೆಗಳಿಗೆ ಕಾರಣ'

ನವದೆಹಲಿ (ಪಿಟಿಐ): ಕಳೆದ 70 ವರ್ಷಗಳಿಂದ ನಡೆದುಕೊಂಡು ಬಂದಿರುವ 'ಓಲೈಕೆ ಸಿದ್ಧಾಂತ'ವೇ ದೇಶದಾದ್ಯಂತ ಕೋಮು ಗಲಭೆಗಳು ನಡೆಯಲು ಕಾರಣವಾಗಿವೆ ಎಂದು ಬಿಜೆಪಿ ಭಾನುವಾರ ಹೇಳಿದೆ.

'ಸೋನಿಯಾ ಗಾಂಧಿ ಅವರು ತಮ್ಮ ಪತ್ರದಲ್ಲಿ ಸಿದ್ಧಾಂತದ ಕುರಿತು ಮಾತನಾಡಿದ್ದಾರೆ. ಯಾವ ಸಿದ್ಧಾಂತ ಇಂತಹ ಗಲಭೆಗಳಿಗೆ ಕಾರಣವಾಗುತ್ತಿದೆ ಎಂಬ ಪ್ರಶ್ನೆ ಇಂದು ಮೂಡಿದೆ. 70 ವರ್ಷಗಳಿಂದ ಇಂಥ ಗಲಭೆಗೆ ಕಾರಣವಾಗಿರುವ ಒಂದೇ ಸಿದ್ಧಾಂತವೆಂದರೆ, ಓಲೈಕೆಯ ಸಿದ್ಧಾಂತ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಹೇಳಿದರು.

ದೇಶದಲ್ಲಿ ನಡೆಯುತ್ತಿರುವ ಕೋಮು ಗಲಭೆಗಳ ಕುರಿತು ಕಳವಳ ವ್ಯಕ್ತಪಡಿಸಿ 13 ವಿರೋಧ ಪಕ್ಷಗಳು ಜಂಟಿ ಹೇಳಿಕೆಯನ್ನು ಶನಿವಾರ ಹೊರಡಿಸಿದ್ದವು.

## ಆಶಿಶ್ ಮಿಶ್ರಾ ಜಾಮೀನು ರದ್ದತಿ: ಇಂದು ತೀರ್ಪು

ನವದೆಹಲಿ (ಪಿಟಿಐ): ಲಖಿಂಪುರ ಖೇರಿ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರ ಜಾಮೀನು ರದ್ದತಿ ಕೋರಿದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಕಟಿಸಲಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠವು ಸೋಮವಾರ ಬೆಳಗ್ಗೆ 10.30ಕ್ಕೆ ತೀರ್ಪನ್ನು ಪ್ರಕಟಿಸುವ ಸಾಧ್ಯತೆಯಿದೆ. ಆಶಿಶ್ ಮಿಶ್ರಾ ಅವರ ಜಾಮೀನು ರದ್ದುಗೊಳಿಸಬೇಕು ಎಂದು ಕೋರಿ ರೈತರು ಸಲ್ಲಿಸಿದ್ದ ಅರ್ಜಿಯನ್ನು ಏಪ್ರಿಲ್ 4ರಂದು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ತೀರ್ಪನ್ನು ಕಾಯ್ದಿರಿಸಿತ್ತು.


KEA

ಕರ್ನಾಟಕ ಸರ್ಕಾರ

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keaugcet2022@gmail.com ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.01/2022–23 ದಿನಾಂಕ: 16–04–2022

**ಅಧಿಸೂಚನೆ**

**2022–23 ನೇ ಸಾಲಿಗೆ ಕರ್ನಾಟಕದ ರಾಜ್ಯದಲ್ಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ**

1. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ, 2006 ನಿಯಮಗಳು (ತಿದ್ದುಪಡಿಗಳು) ನಿಯಮ 3, ನಿಯಮ 6 (3) ಮತ್ತು ನಿಯಮ (7) ರ ಅನ್ವಯ ಹಾಗು ಸರ್ಕಾರದ ಆದೇಶದ ಅನುಸಾರವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, **ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ–2022ಕ್ಕೆ,** ಅರ್ಹತೆ / ಮೆರಿಟ್‌ಅನ್ನು ಆಧರಿಸಿ, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ / ವಿಶ್ವವಿದ್ಯಾಲಯ / ಖಾಸಗಿ ಅನುದಾನಿತ / ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ತಂತ್ರಜ್ಞಾನ, ಯೋಗ ಮತ್ತು ನ್ಯಾಚುರೋಪತಿ, ಬಿ–ಫಾರ್ಮ ಮತ್ತು ಫಾರ್ಮಾ–ಡಿ, ಕೃಷಿ ವಿಜ್ಞಾನ ಕೋರ್ಸುಗಳು ಹಾಗು ವೆಟರಿನರಿ ಕೋರ್ಸುಗಳಲ್ಲಿ ಲಭ್ಯವಿರುವ ಸರ್ಕಾರದ ಪಾಲಿನ ಸೀಟುಗಳಿಗೆ ಸಂಬಂಧಿಸಿದಂತೆ, ಪೂರ್ಣಾವಧಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಅಥವಾ ಮೊದಲನೇ ಸೆಮಿಸ್ಟರ್‌ಗೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ 2022–23ನೇ ಸಾಲಿಗೆ ಅನ್ವಯಿಸುವಂತೆ ಪ್ರವೇಶ ನೀಡುವುದಕ್ಕೆ ಅರ್ಹ ಕರ್ನಾಟಕದ ವಿದ್ಯಾರ್ಥಿಗಳಿಂದ ಹಾಗೂ ಜಮ್ಮು ಮತ್ತು ಕಾಶ್ಮೀರದಿಂದ ವಲಸೆ ಬಂದಿರುವವರ ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಮೇಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ನಂತರ ಕೆಇಎ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ 2022ಕ್ಕೆ ಹಾಜರಾಗಬೇಕಿರುತ್ತದೆ.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸರ್ಕಾರದ ಪಾಲಿನ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳ ಪ್ರವೇಶಕ್ಕಾಗಿ, ಅಭ್ಯರ್ಥಿಗಳು, ಎನ್‌ಟಿಎ, ನವದೆಹಲಿ ಇವರು ನಡೆಸುವ ರಾಷ್ಟ್ರೀಯ ಅರ್ಹತಾ ಕಮ್ ಪ್ರವೇಶ ಪರೀಕ್ಷೆ (NEET) – 2022 ರಲ್ಲಿ ಅರ್ಹತೆಯನ್ನು ಪಡೆದಿರಬೇಕು
4. ಆರ್ಕಿಟೆಕ್ಚರ್ ಸೀಟುಗಳ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ರವರು ನಡೆಸುವ NATA-2022 ರಲ್ಲಿ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಅರ್ಹತೆಯನ್ನು ಪಡೆದಿರಬೇಕು. (ಸಿಇಟಿ–2022ಕ್ಕೆ ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ)
5. ಅರ್ಹತೆ: ನಿಯಮ 5 (1) ರ Karnataka Selection of Candidates for Admission to Government seats in Professional Educational Institutions Rules, 2006, ಅನ್ವಯ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ನಿಗದಿ ಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು, ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ.
6. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆಗಳು, ಶೈಕ್ಷಣಿಕ ಅರ್ಹತೆ ಹಾಗು ಇತರೆ ವಿವರಗಳನ್ನು ಒಳಗೊಂಡ "ಯುಜಿಸಿಇಟಿ–2022–ಮಾಹಿತಿ ಪುಸ್ತಕ" ವನ್ನು ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ನಲ್ಲಿ ಪ್ರಚುರ ಪಡಿಸಲಾಗುವುದು. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಕೆಇಎ ನಡೆಸುವ ಸಿಇಟಿ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆಯಲು ತಮ್ಮ ಅರ್ಜಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.
7. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ – ಶುಲ್ಕ ಪಾವತಿ – ವಿಶೇಷ ಪ್ರವರ್ಗಗಳ ಮೂಲ ಪ್ರಮಾಣ ಪತ್ರಗಳ ಸಲ್ಲಿಸುವ ವೇಳಾಪಟ್ಟಿ.

| | | |
|---|---|---|
| 01 | ಸಿಇಟಿ–2022ಕ್ಕೆ ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು | ದಿನಾಂಕ 18.04.2022 ರ ಮಧ್ಯಾಹ್ನ 1:00 ರಿಂದ 05.05.2022 ರ ರಾತ್ರಿ 11:59 ರ ವರೆಗೆ |
| 02 | ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | 06.05.2022 |
| 03 | ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯಲ್ಲಿನ ಮಾಹಿತಿಗಳನ್ನು ಅವಶ್ಯವಿದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು (ಶುಲ್ಕ ಪಾವತಿ ಮಾಡುವವರಿಗೆ ಮಾತ್ರ) | ದಿನಾಂಕ 07.05.2022 ರ ಬೆಳಗ್ಗೆ 11:00 ರಿಂದ 10.05.2022 ರ ಸಂಜೆ 5:30ರ ವರೆಗೆ |
| 04 | ವಿಶೇಷ ಪ್ರವರ್ಗಗಳ ಮೂಲ ಪ್ರಮಾಣ ಪತ್ರಗಳನ್ನು ನಿಗದಿತ ದಿನಾಂಕಗಳಂದು ಸಲ್ಲಿಸುವುದು (ಇ–ಮಾಹಿತಿ ಪುಸ್ತಕದಲ್ಲಿ ನೀಡಿರುವ ವೇಳಾಪಟ್ಟಿಯಂತೆ) | 02.06.2022 ರಿಂದ 08.06.2022 ರ ವರೆಗೆ |
| 05 | ಸಿಇಟಿ–2022ಕ್ಕೆ ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳುವುದು | 30.05.2022 ರ ಬೆಳಗ್ಗೆ 11:00 ರಿಂದ |

**ಸಾಮಾನ್ಯ ಪ್ರವೇಶ ಪರೀಕ್ಷೆ – 2022ರ ವೇಳಾಪಟ್ಟಿ**

| ದಿನಾಂಕ | ದಿನ | ಸಮಯ | ವಿಷಯ | ಅಂಕಗಳು |
|---|---|---|---|---|
| 16.06.2022 | ಗುರುವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಜೀವಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ಗಣಿತಶಾಸ್ತ್ರ | 60 |
| 17.06.2022 | ಶುಕ್ರವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಭೌತಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ರಸಾಯನ ಶಾಸ್ತ್ರ | 60 |
| ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ **ಕನ್ನಡ ಭಾಷಾ ಪರೀಕ್ಷೆ – ಬೆಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ವಿಜಯಪುರ, ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ** | | | | |
| 18.06.2022 | ಶನಿವಾರ | ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30ರ ವರೆಗೆ | 4ನೇ ತರಗತಿಯ ಮಟ್ಟದ | 50 |

ಕೃಷಿಕ ಕುಟುಂಬ ಕೋಟದ ಅಡಿಯಲ್ಲಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಪ್ರಾಯೋಗಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು

**ಸೂಚನೆ:**

(ಎ) ಕ.ಪ.ಪ್ರಾ (ಸಿಇಟಿ ಸೆಲ್) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡು ಆಯಾ ವಿಭಾಗದ ಅಂತಿಮ ಸುತ್ತಿನ ಸೀಟು ಹಂಚಿಕೆಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಸೀಟನ್ನು ರದ್ದು ಪಡಿಸದೇ ಇರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆ–2022ಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಗಳು 2022ನೇ ಸಾಲಿನಲ್ಲಿ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

(ಬಿ) ನಿಗದಿಪಡಿಸಿರುವ ಶೈಕ್ಷಣಿಕೆ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು MCI, DCI, AICTE, COA, NCISM, NCH, PCI, ಸರ್ಕಾರ, ವಿಶ್ವವಿದ್ಯಾಲಯ, ಅಪೆಕ್ಸ್ ಸಂಸ್ಥೆಗಳು ಕಾಲ ಕಾಲಕ್ಕೆ ನಿಗದಿಪಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ;

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ಅನ್ನು ನೋಡಲು ಕೋರಿದೆ.

ಕೆಇಎ ಸಹಾಯವಾಣಿ ಸಂಖ್ಯೆಗಳು: 080 – 23 460 460 – (ಐದು ಲೈನುಗಳು – ಬೆ. 9.30 ರಿಂದ ಸಂ. 6.00 – ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)

ಸಹಿ/–
(ಎಸ್. ರಮ್ಯ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/ಜಗದಾಳೆ ಅಡ್ವರ್ಟೈಸಿಂಗ್/189/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


# ಆಂಧ್ರದಲ್ಲಿ ಕಲ್ಲು ತೂರಾಟ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಹೊಲಗುಂಡ ಗ್ರಾಮದಲ್ಲಿ ಶನಿವಾರ ತಡರಾತ್ರಿ ಘಟಿಸಿದ ಸಣ್ಣ ಜಗಳ ವಿಕೋಪಕ್ಕೆ ತಿರುಗಿ ಎರಡು ಸಮುದಾಯಗಳ ಮಧ್ಯೆ ಕಲ್ಲು ತೂರಾಟ ನಡೆದಿದೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದಾರೆ.

ಹನುಮ ಜಯಂತಿ ಪ್ರಯುಕ್ತ ಶನಿವಾರ ರಾತ್ರಿ ಧಾರ್ಮಿಕ ಗುಂಪು ಮೆರವಣಿಗೆ ನಡೆಸುತ್ತಿತ್ತು. ಮೆರವಣಿಗೆಯು ಮಸೀದಿ ಸಮೀಪಿಸುತ್ತಿದ್ದಂತೆ, ಕೆಲವು ಭಕ್ತರು 'ಜೈ ಶ್ರೀ ರಾಮ್' ಘೋಷಣೆ ಕೂಗಿದರು. ಇದರಿಂದ ಕ್ರೋಧಗೊಂಡ ಮುಸ್ಲಿಂ ಸಮುದಾಯದವರು ಹನುಮ ಜಯಂತಿ ಮೆರವಣಿಗೆ ಮೇಲೆ ಕಲ್ಲು ತೂರಿದ್ದಾರೆ. ಹನುಮ ಜಯಂತಿಯಲ್ಲಿ ಪಾಲ್ಗೊಂಡವರೂ ಪ್ರತಿದಾಳಿ ನಡೆಸಿದ್ದಾರೆ. ಪೊಲೀಸರು, ಎರಡೂ ಗುಂಪಿನವರನ್ನು ಠಾಣೆಗೆ ಕರೆಸಿ, ಪರಿಸ್ಥಿತಿ ತಿಳಿಗೊಳಿಸಲು ಯತ್ನಿಸಿದರು. ಆಗ ಠಾಣೆಯಲ್ಲೇ ಕೆಲವರು ಮಾರಾಮಾರಿಗೆ ಮುಂದಾಗಿದ್ದು, ಎರಡೂ ಗುಂಪಿನವರಿಗೆ ಪೊಲೀಸರು ಎಚ್ಚರಿಕೆ ನೀಡಿದರು. ಗ್ರಾಮದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಉತ್ತರಾಖಂಡದಲ್ಲಿ ನಾಲ್ವರಿಗೆ ಗಾಯ

ಡೆಹ್ರಾಡೂನ್ (ಪಿಟಿಐ): ಹನುಮ ಜಯಂತಿಯ ಪ್ರಯುಕ್ತ ಶನಿವಾರ ಸಂಜೆ ನಡೆದ ಮೆರವಣಿಗೆ ಮೇಲೆ ಕಲ್ಲು ತೂರಾಟ ಮಾಡಿದ ಘಟನೆ ಉತ್ತರಾಖಂಡದ ಹರಿದ್ವಾರ ಜಿಲ್ಲೆಯಲ್ಲೂ ನಡೆದಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆ ಸಂಬಂಧ 13 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, 9 ಮಂದಿಯನ್ನು ಬಂಧಿಸಿದ್ದಾರೆ. ಹರಿದ್ವಾರ ಜಿಲ್ಲೆಯ ರೂರ್ಕಿ ಬಳಿಯ ಭಗವಾನ್‌ಪುರದಲ್ಲಿ ಹನುಮ ಜಯಂತಿಯ ಮೆರವಣಿಗೆ ಆಗಮಿಸುತ್ತಿದ್ದಂತೆ, ಮನೆಗಳ ಮೇಲೆ ನಿಂತಿದ್ದವರು ಕಲ್ಲು ತೂರಾಟ ನಡೆಸಿದ್ದಾರೆ. ಈ ವೇಳೆ ಮೆರವಣಿಗೆಯಲ್ಲಿ ಭಾಗಿಯಾಗಿದ್ದವರು ಕಕ್ಕಾಬಿಕ್ಕಿಯಾಗಿ ಓಡಿದ್ದರಿಂದ ಕಾಲ್ತುಳಿತದ ರೀತಿಯ ಘಟನೆಯೂ ನಡೆದಿದೆ. ಈ ವೇಳೆ ಸ್ಥಳಕ್ಕೆ ಬಂದ ಪೊಲೀಸರು, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ.

# ಗುಜರಾತ್‌ಗೆ ಬ್ರಿಟನ್ ಪ್ರಧಾನಿ

ಲಂಡನ್ (ಪಿಟಿಐ) : ಇದೇ ಮೊದಲ ಬಾರಿಗೆ ಬ್ರಿಟನ್ ಪ್ರಧಾನಿಯೊಬ್ಬರು ಭಾರತದ ಗುಜರಾತ್‌ಗೆ ಭೇಟಿ ನೀಡುತ್ತಿದ್ದಾರೆ. ಬೋರಿಸ್ ಜಾನ್ಸನ್ ಮುಂದಿನ ವಾರ ಎರಡು ದಿನಗಳ ಭಾರತ ಭೇಟಿಗೆ ಬರಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

ಏಪ್ರಿಲ್ 21ರಂದು ಅವರ ಪ್ರಯಾಣ ಆರಂಭವಾಗಲಿದೆ. ಬ್ರಿಟನ್ ಮತ್ತು ಭಾರತದಲ್ಲಿನ ಪ್ರಮುಖ ವಲಯಗಳಲ್ಲಿನ ಹೂಡಿಕೆಗಳ ಕುರಿತು ಘೋಷಣೆಯಾಗಲಿವೆ ಎಂದು ಡೌನಿಂಗ್ ಸ್ಟ್ರೀಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಏಪ್ರಿಲ್ 22ರಂದು ನವದೆಹಲಿಯಲ್ಲಿ ಬೋರಿಸ್ ಜಾನ್ಸನ್ ಮತ್ತು ನರೇಂದ್ರ ಮೋದಿ ಮಾತುಕತೆ ನಡೆಸಲಿದ್ದಾರೆ. ಭಾರತ ಮತ್ತು ಬ್ರಿಟನ್ ನಡುವಿನ ರಕ್ಷಣಾ ಕಾರ್ಯತಂತ್ರ, ರಾಜತಾಂತ್ರಿಕತೆ ಮತ್ತು ಆರ್ಥಿಕತೆಯ ಪಾಲುದಾರಿಕೆ, ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಸಂಬಂಧಿಸಿದಂತೆ ಮಾತುಕತೆ ನಡೆಯಲಿದೆ.

'ನನ್ನ ಭಾರತದ ಭೇಟಿಯ ವೇಳೆ ಉಭಯ ರಾಷ್ಟ್ರಗಳಿಗೆ ಮುಖ್ಯವಾಗಿರುವ ವಿಚಾರಗಳನ್ನು ಪ್ರಸ್ತಾಪಿಸಲಿದ್ದೇನೆ. ಉದ್ಯೋಗ ಸೃಷ್ಟಿಯಿಂದ ಹಿಡಿದು, ಆರ್ಥಿಕತೆ ವೃದ್ಧಿ, ಇಂಧನ ಹಾಗೂ ರಕ್ಷಣಾ ಕ್ಷೇತ್ರದ ವಿಷಯಗಳನ್ನು ಒಳಗೊಂಡಿರಲಿವೆ' ಎಂದು ಬೋರಿಸ್ ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ಅವರು ಪ್ರಮುಖ ಉದ್ದಿಮೆಗಳಿಗೆ ಭೇಟಿ ನೀಡಲಿದ್ದು, ಎರಡೂ ರಾಷ್ಟ್ರಗಳ ನಡುವಿನ ವಾಣಿಜ್ಯ, ವ್ಯಾಪಾರ ಹಾಗೂ ಜನರ ಸಂಪರ್ಕಗಳ ಬಗ್ಗೆ ಚರ್ಚಿಸಲಿದ್ದಾರೆ. ಕೋವಿಡ್–19 ಸಾಂಕ್ರಾಮಿಕದ ಕಾರಣಗಳಿಂದಾಗಿ ಈ ಹಿಂದೆ ಬೋರಿಸ್ ಅವರ ಭಾರತ ಭೇಟಿಯು ಎರಡು ಬಾರಿ ಮುಂದೂಡಲಾಗಿತ್ತು.

### ಶಾಂಘೈ: ಕೋವಿಡ್ ಪ್ರಕರಣ ಉಲ್ಬಣ

# ಸೇನೆಗೆ ನೌಕೆ ಸೇರ್ಪಡೆ ವಿಳಂಬ

ಬೀಜಿಂಗ್: ಶಾಂಘೈನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು ಚೀನಾದ ಹಡಗು ನಿರ್ಮಾಣ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಇದೇ ಏ. 23ರಂದು ನಡೆಯಬೇಕಿದ್ದ ಯುದ್ಧವಿಮಾನ ಕಾರ್ಯಾಚರಣೆ ಸಾಮರ್ಥ್ಯದ ವಿಮಾನವಾಹಕ ನೌಕೆಯ ಸೇನಾ ಸೇರ್ಪಡೆ ಮೇಲೂ ಪರಿಣಾಮ ಬೀರಿದೆ.

ಶಾಂಘೈನಲ್ಲಿ ಓಮೈಕ್ರಾನ್ ಸೋಂಕು ವೇಗವಾಗಿ ಹರಡುತ್ತಿದ್ದು ಲಾಕ್‌ಡೌನ್ ಘೋಷಿಸಲಾಗಿದೆ. 2.6 ಕೋಟಿಗೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಈ ನಗರದಲ್ಲಿ ಚೀನಾದ ಪ್ರಮುಖ ವ್ಯಾಪಾರ ಮತ್ತು ಕೈಗಾರಿಕಾ ಕೇಂದ್ರಗಳಿದ್ದು, ಕೋವಿಡ್‌ನಿಂದಾಗಿ ಇವೆಲ್ಲ ಆರ್ಥಿಕವಾಗಿ ನಷ್ಟಕ್ಕೀಡಾಗಿವೆ.

'ಲಾಕ್‌ಡೌನ್‌ನಿಂದಾಗಿ ಚೀನಾದಲ್ಲಿ ಹಡಗು ನಿರ್ಮಾಣ ಯೋಜನೆಗಳು ನಿಧಾನಗತಿಯಲ್ಲಿ ಸಾಗುತ್ತಿದ್ದು, ದೇಶದ ಮೂರನೇ ವಿಮಾನ ವಾಹಕ ನೌಕೆಯ ಸೇನಾ ಸೇರ್ಪಡೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದು ಹಾಂಗ್ ಕಾಂಗ್ ಮೂಲದ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ಭಾನುವಾರ ವರದಿ ಮಾಡಿದೆ.



ಪೀಪಲ್ಸ್ ಲಿಬರೇಷನ್ ಆರ್ಮಿ ನೇವಿಯು (ಪ್ಲಾನ್) ತನ್ನ 73ನೇ ವಾರ್ಷಿಕೋತ್ಸವ ದಿನ ಅಂದರೆ ಏ. 23ರಂದು ವಿಮಾನವಾಹಕ ನೌಕೆಯನ್ನು ಸೇನೆಗೆ ಸೇರ್ಪಡೆಗೊಳಿಸಲು ಯೋಜಿಸಿತ್ತು. ಆದರೆ, ಶಾಂಘೈನಲ್ಲಿ ಕೋವಿಡ್ ಹೆಚ್ಚುತ್ತಿರುವುದರಿಂದ ನೌಕೆಯ ಪ್ರಮುಖ ಘಟಕಗಳ ಸಾಗಣೆ ಕಾರ್ಯದಲ್ಲಿ ವಿಳಂಬವಾಗಿದೆ.

# ಕೋವಿಡ್: 15 ದಿನಗಳಲ್ಲಿ ಶೇ 500 ಹೆಚ್ಚಳ

ನವದೆಹಲಿ (ಪಿಟಿಐ): 'ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ'ದ (ದೆಹಲಿ–ಎನ್‌ಸಿಆರ್) ನಿವಾಸಿಗಳ ಪೈಕಿ ತಮ್ಮ ಹತ್ತಿರದವರಿಂದಲೇ ಕೊರೊನಾ ಸೋಂಕು ತಗುಲಿಸಿಕೊಂಡವರ ಸಂಖ್ಯೆಯಲ್ಲಿ ಕಳೆದ 15 ದಿನಗಳ ಅವಧಿಯಲ್ಲಿ ಶೇ 500ರಷ್ಟು ಹೆಚ್ಚಳ ಕಂಡುಬಂದಿದೆ ಎಂದು ಸಮೀಕ್ಷೆಯೊಂದು ಹೇಳಿದೆ.

'ಲೋಕಲ್ ಸರ್ಕಲ್ಸ್' ಎಂಬ ಸಂಸ್ಥೆ ಈ ಸಮೀಕ್ಷೆ ನಡೆಸಿದೆ. ಸಮೀಕ್ಷೆಯ ಭಾಗವಾಗಿ ಒಟ್ಟು 11,743 ಜನರ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗಿದೆ. ಈ ಪೈಕಿ ಶೇ 67 ರಷ್ಟು ಪುರುಷರು ಹಾಗೂ ಶೇ 33ರಷ್ಟು ಮಹಿಳೆಯರು ಇದ್ದರು ಎಂದು ಸಂಸ್ಥೆ ತಿಳಿಸಿದೆ.

ಕೊರೊನಾ ವೈರಸ್ ಸಾಂಕ್ರಾಮಿಕದ ಸಂದರ್ಭದಲ್ಲಿ 40 ಲಕ್ಷ ಭಾರತೀಯರು ಮೃತಪಟ್ಟಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

### ದೆಹಲಿಯಲ್ಲಿ 517 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಭಾನುವಾರ ಹೊಸದಾಗಿ 517 ಕೊರೊನಾ ಪ್ರಕರಣಗಳು ವರದಿಯಾಗಿದ್ದು, ಪಾಸಿಟಿವಿಟಿ ದರ ಶೇ 4.21 ಆಗಿದೆ. ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಮತ್ತೆ ಪಾಲಿಸುವಂತೆ ಸಲಹೆ ನೀಡಿರುವ ಇಲ್ಲಿನ ವೈದ್ಯರು, ಲಕ್ಷಣ ಇರುವವರು ತಪ್ಪದೆ ಪರೀಕ್ಷೆಗೆ ಒಳಗಾಗಬೇಕು ಮತ್ತು ಸರ್ಕಾರ ಮಾಸ್ಕ್ ಅನ್ನು ಕಡ್ಡಾಯಗೊಳಿಸಬೇಕು ಎಂದು ಹೇಳಿದ್ದಾರೆ.

### ಡಬ್ಲ್ಯುಎಚ್‌ಒ ವಿಧಾನ ಪ್ರಶ್ನಿಸಿದ ಭಾರತ

ನವದೆಹಲಿ (ಪಿಟಿಐ): ಕೋವಿಡ್–19ನಿಂದಾಗಿ ದೇಶದಲ್ಲಿ ಸಂಭವಿಸಿರುವ ಸಾವುಗಳನ್ನು ಅಂದಾಜಿಸಲು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅನುಸರಿಸುತ್ತಿರುವ ವಿಧಾನವನ್ನು ಭಾರತ ಪ್ರಶ್ನಿಸಿದೆ. 'ಭೌಗೋಳಿಕವಾಗಿ, ಜನಸಂಖ್ಯಾ ದೃಷ್ಟಿಯಿಂದ ಬೃಹತ್ ದೇಶವಾಗಿರುವ ಭಾರತದಲ್ಲಿ ಕೋವಿಡ್‌ನಿಂದ ಸಾವನ್ನಪ್ಪಿದವರ ಸಂಖ್ಯೆಯನ್ನು ಲೆಕ್ಕಹಾಕಲು ಗಣಿತ ಮಾದರಿಯ ವಿಧಾನವನ್ನು ಬಳಸುವುದು ಸರಿಯಲ್ಲ' ಎಂದು ಭಾರತ ಸ್ಪಷ್ಟವಾಗಿ ಹೇಳಿದೆ. 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಏ.16ರಂದು ಪ್ರಕಟವಾಗಿರುವ ಲೇಖನವೊಂದಕ್ಕೆ ಸಂಬಂಧಿಸಿ ಕೇಂದ್ರ ಆರೋಗ್ಯ ಸಚಿವಾಲಯ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ

## ಸುಭಾಷಿತ

ಸದೃಢ ಮನಸ್ಸನ್ನು ಸೋಲಿಸಲು ಯಾರಿಗೂ ಸಾಧ್ಯವಿಲ್ಲ.
–ಚಾಣಕ್ಯ

# ಕೋವಿಡ್ ಮುನ್ನೆಚ್ಚರಿಕೆ ಲಸಿಕೆ ಎಲ್ಲರ ಕೈಗೂ ಎಟಕುವಂತಾಗಲಿ

**18 ವರ್ಷ** ಮೇಲ್ಪಟ್ಟ, 60 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲರೂ ಕೋವಿಡ್‌ನ ಬೂಸ್ಟರ್ ಡೋಸ್ ಅಥವಾ ಮುನ್ನೆಚ್ಚರಿಕೆ ಡೋಸ್ ಪಡೆಯಲು ಅವಕಾಶ ಕಲ್ಪಿಸುವ ಮೂಲಕ ಕೇಂದ್ರ ಸರ್ಕಾರವು ಒಳ್ಳೆಯ ಕೆಲಸ ಮಾಡಿದೆ. ಕೋವಿಡ್ ವಿರುದ್ಧ ಲಸಿಕೆ ನೀಡುವ ಈ ಹಂತದ ಕಾರ್ಯಕ್ರಮವು ಏಪ್ರಿಲ್ 10ರಿಂದ ಆರಂಭವಾಗಿದೆ. 60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು, ಆರೋಗ್ಯಸೇವಾ ಕಾರ್ಯಕರ್ತರು ಹಾಗೂ ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಮುನ್ನೆಚ್ಚರಿಕೆ ಡೋಸ್ ಪಡೆಯಲು ಜನವರಿಯಿಂದಲೇ ಅವಕಾಶ ನೀಡಲಾಗಿತ್ತು. ಕೋವಿಡ್ ಸಾಂಕ್ರಾಮಿಕದ ಅಬ್ಬರ ಈಗ ತಗ್ಗಿದೆ. ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಹಲವು ನಿಯಮಗಳನ್ನು ಈಗ ದೇಶದ ಬಹುತೇಕ ಭಾಗಗಳಲ್ಲಿ ಸಡಿಲಗೊಳಿಸಲಾಗಿದೆ. ಹೀಗಿದ್ದರೂ ಕೋವಿಡ್‌ನ ಭಯ ಪೂರ್ತಿಯಾಗಿ ನಿವಾರಣೆ ಆಗಿಲ್ಲ. ಕೆಲವು ದೇಶಗಳಲ್ಲಿ ಕೋವಿಡ್ ಸಾಂಕ್ರಾಮಿಕದ ನಾಲ್ಕನೆಯ ಹಾಗೂ ಐದನೆಯ ಅಲೆಗಳು ಕಾಣಿಸಿಕೊಂಡಿವೆ. ಚೀನಾದ ಶಾಂಘೈ ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಕೊರೊನಾ ವೈರಾಣುವಿನ ಹೊಸ ತಳಿಗಳು ತಲೆ ಎತ್ತುವ ಸಾಧ್ಯತೆಯನ್ನು ಅಲ್ಲಗಳೆಯಲು ಆಗದು. ಹೆಚ್ಚು ವೇಗವಾಗಿ ಹರಡುತ್ತದೆ ಎನ್ನಲಾಗಿರುವ ಕೊರೊನಾದ ಇನ್ನೊಂದು ರೂಪಾಂತರಿ ತಳಿ ಎಕ್ಸ್‌ಇ ಹಲವೆಡೆ ಕಾಣಿಸಿಕೊಂಡಿದೆ. ಈ ರೂಪಾಂತರಿಯ ವಿರುದ್ಧ ಮತ್ತು ಮುಂದೆ ಬರಬಹುದಾದ ಯಾವುದೇ ರೂಪಾಂತರಿಯ ವಿರುದ್ಧ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕಾದ ಅಗತ್ಯ ಖಂಡಿತ ಇದೆ.

ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಇಂತಹ ಉದ್ದೇಶಗಳಿಗೆ ವೆಚ್ಚ ಮಾಡುವುದಕ್ಕೆ ಸರ್ಕಾರ ಹಿಂದೇಟು ಹಾಕಬಾರದು

ಈ ಹಿನ್ನೆಲೆಯಲ್ಲಿ ನೋಡಿದಾಗ, ಕೋವಿಡ್ ವಿರುದ್ಧ ಲಸಿಕೆ ನೀಡುವ ಹೊಸ ಕಾರ್ಯಕ್ರಮವು ಸಮಯೋಚಿತ ಎಂದು ಅನ್ನಿಸುತ್ತದೆ. ಲಸಿಕೆ ಪಡೆದ ನಂತರ ವ್ಯಕ್ತಿಗೆ ಬರುವ ನಿರೋಧಕ ಶಕ್ತಿಯು ನಿರ್ದಿಷ್ಟ ಅವಧಿಯ ನಂತರದಲ್ಲಿ ಕಡಿಮೆ ಆಗಲಾರಂಭಿಸುತ್ತದೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಎರಡನೆಯ ಡೋಸ್ ಪಡೆದ ನಾಲ್ಕರಿಂದ ಆರು ತಿಂಗಳ ನಂತರದಲ್ಲಿ ನಿರೋಧಕ ಶಕ್ತಿ ಕಡಿಮೆ ಆಗುತ್ತದೆ ಎಂಬುದು ಈಗಿನ ತಿಳಿವಳಿಕೆ. ದೇಶದ ವಯಸ್ಕರಲ್ಲಿ ದೊಡ್ಡ ಸಂಖ್ಯೆಯ ಜನ ಎರಡನೆಯ ಡೋಸ್ ಪಡೆದಿದ್ದು ಆರು ತಿಂಗಳುಗಳ ಹಿಂದೆ. ಹೀಗಾಗಿ, ಈಗ ಮುನ್ನೆಚ್ಚರಿಕೆ ಡೋಸ್ ನೀಡಲು ಸಕಾಲ. ಲಸಿಕೆ ನೀಡಬೇಕಾದ ಅವಧಿ ಮತ್ತು ಲಸಿಕೆಗೆ ಸಂಬಂಧಿಸಿದ ಇತರ ಹಲವು ವಿಷಯಗಳು ಈಗಲೂ ಅಧ್ಯಯನದ ವಸ್ತು. ಮೊದಲ ಎರಡು ಡೋಸ್‌ಗಳಲ್ಲಿ ಬಳಕೆಯಾದ ಲಸಿಕೆಯನ್ನೇ ಮುನ್ನೆಚ್ಚರಿಕೆ ಲಸಿಕೆಯಾಗಿ ಪಡೆದರೆ ಹೆಚ್ಚು ಪರಿಣಾಮಕಾರಿಯೇ ಅಥವಾ ಬೇರೆ ಲಸಿಕೆ ಪಡೆದರೆ ಹೆಚ್ಚು ಪರಿಣಾಮಕಾರಿಯೇ ಎಂಬುದು ಕೂಡ ಅಧ್ಯಯನದ ವಸ್ತು. ಹೀಗಿದ್ದರೂ, ಮುನ್ನೆಚ್ಚರಿಕೆ ಡೋಸ್‌ನ ಅಗತ್ಯ ಇದೆ, ಅದನ್ನು ಪಡೆಯುವುದು ಒಳ್ಳೆಯದು ಎಂಬ ವಿಚಾರವಾಗಿ ಸಹಮತ ಇದೆ. ಕೆಲವು ದೇಶಗಳಲ್ಲಿ ನಾಲ್ಕನೆಯ ಡೋಸ್ ನೀಡುವ ಕೆಲಸ ಕೂಡ ಶುರುವಾಗಿದೆ.

ಆದರೆ, ಮುನ್ನೆಚ್ಚರಿಕೆ ಡೋಸ್‌ಗಳು ಈ ಹಂತದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಸಿಗುತ್ತಿರುವುದು ಹಾಗೂ ಅದು ಬೇಕು ಎಂದು ಬಯಸಿರುವವರು ಹಣ ಪಾವತಿಸಬೇಕಿರುವುದು ದುರದೃಷ್ಟಕರ. ಮುನ್ನೆಚ್ಚರಿಕೆ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಸಿಗುವಂತೆ ಮಾಡಿರುವುದು ತಪ್ಪು. ಇದು ತಾರತಮ್ಯದ ನಡೆ. ದೇಶದ ದೊಡ್ಡ ಜನವರ್ಗಕ್ಕೆ ಲಸಿಕೆ ಸಿಗದಂತಾಗುವುದಕ್ಕೆ ಇದು ದಾರಿ ಮಾಡಿಕೊಡುತ್ತದೆ. ಲಸಿಕೆಗಳ ಬೆಲೆಯನ್ನು ತಗ್ಗಿಸಲಾಗಿದೆ ಎಂಬುದು ನಿಜ. ಆದರೆ, ಲಸಿಕೆ ನೀಡಿದ್ದಕ್ಕೆ ಆಸ್ಪತ್ರೆಗಳು ಪಡೆಯುವ ಸೇವಾ ಶುಲ್ಕ ಸೇರಿ ಲಸಿಕೆಗೆ ಪಾವತಿಸಬೇಕಿರುವ ವೆಚ್ಚವು ಹಲವರ ಪಾಲಿಗೆ ದೊಡ್ಡ ಮೊತ್ತವಾಗಬಹುದು. ಲಸಿಕೆಯ ವೆಚ್ಚಕ್ಕೆ ಸಂಬಂಧಿಸಿದಂತೆ ಕೆಲವು ಗೊಂದಲಗಳು ಇದ್ದವು. ಖಾಸಗಿ ಆಸ್ಪತ್ರೆಗಳಲ್ಲಿ ಮೊದಲೇ ಖರೀದಿಸಿರುವ ಲಸಿಕೆಗಳು ಇವೆ. ಅವುಗಳನ್ನು ಹೆಚ್ಚಿನ ಬೆಲೆ ನೀಡಿ ಖರೀದಿಸಲಾಗಿದೆ. ಈಗ ನಿಗದಿ ಮಾಡಿರುವ ಬೆಲೆ ಹಾಗೂ ಹಿಂದೆ ಖರೀದಿಸಿದ್ದ ಬೆಲೆಯ ನಡುವಿನ ವ್ಯತ್ಯಾಸವನ್ನು ಭರ್ತಿ ಮಾಡಿಕೊಡಲಾಗುವುದು ಎಂದು ಆಸ್ಪತ್ರೆಗಳಿಗೆ ಹೇಳಲಾಗಿದೆ. ಆದರೂ ಅನುಮಾನಗಳು ಪೂರ್ತಿಯಾಗಿ ಬಗೆಹರಿದಂತಿಲ್ಲ. ಮುನ್ನೆಚ್ಚರಿಕೆ ಡೋಸ್ ಪಡೆಯುವ ವಿಚಾರದಲ್ಲಿ ಸಾರ್ವಜನಿಕರಿಂದ ಬಂದಿರುವ ಸ್ಪಂದನ ನೀರಸವಾಗಿದೆ. ಕೋವಿಡ್ ನಿರೋಧಕ ಲಸಿಕೆ ಎಲ್ಲರಿಗೂ ಸಿಗುವಂತೆ ಮಾಡುವುದು ಸರ್ಕಾರದ ಗುರಿಯಾಗಬೇಕು. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಇಂತಹ ಉದ್ದೇಶಗಳಿಗೆ ವೆಚ್ಚ ಮಾಡುವುದಕ್ಕೆ ಅದು ಹಿಂದೇಟು ಹಾಕಬಾರದು.

## ದಿನದ ಟ್ವೀಟ್

### ರಾಜಕೀಯ ಗೂಂಡಾಗಳು

**ಪ್ರತೀ ಸಮುದಾಯವೂ ಪ್ರೀತಿ ಮತ್ತು ಸಿಹಿಯನ್ನು ಹಂಚುವ ಮೂಲಕ ತನ್ನ ಹಬ್ಬಗಳನ್ನು ಆಚರಿಸುತ್ತದೆ. ಆದರೆ, ಇನ್ನೊಬ್ಬರನ್ನು ದೂಷಿಸಲು, ಇನ್ನೊಬ್ಬರ ಮೇಲೆ ಆಕ್ರಮಣ ನಡೆಸಲು, ಕತ್ತಿ ಮತ್ತು ಬಂದೂಕುಗಳನ್ನು ಪ್ರದರ್ಶಿಸಲು ಈ ಹಬ್ಬಗಳನ್ನು ಬಳಸುವವರು ಅವರವರ ಧರ್ಮಗಳ ಅನುಯಾಯಿಗಳಲ್ಲ. ಅವರು ರಾಜಕೀಯ ಗೂಂಡಾಗಳು. ತಮ್ಮ ರಾಜಕಾರಣಕ್ಕೆ ಧಾರ್ಮಿಕ ಭಾವನೆಗಳನ್ನು ದುರ್ಬಳಕೆ ಮಾಡಿಕೊಳ್ಳುವವರು.**

**ಶಾಹಿದ್ ಸಿದ್ದಿಕಿ,** ಆರ್‌ಎಲ್‌ಡಿ ರಾಷ್ಟ್ರೀಯ ಉಪಾಧ್ಯಕ್ಷ

## ಕಿಡಿನುಡಿ

**ಸ್ಮಾರ್ಟ್ ಸಿಟಿ ಹೆಸರಿನಲ್ಲಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಎಲ್ಲ ಕಾಮಗಾರಿಗಳನ್ನೂ ನಿಲ್ಲಿಸಿ. ಸಾಧ್ಯವಾದಷ್ಟು ಮಟ್ಟಿಗೆ ನಮಗೆ ನಮ್ಮ ಹಳೆಯ ನಗರವೇ ಮತ್ತೆ ಬೇಕಾಗಿದೆ. ನೀರು ನಿಲ್ಲುವುದು, ಟ್ರಾಫಿಕ್ ಜಾಮ್, ಮಾಲಿನ್ಯ ಮತ್ತು ಸಾರ್ವಜನಿಕ ಹಣ ವ್ಯರ್ಥ ಆಗುವಂತಹ ಪ್ರಮುಖ ಸಮಸ್ಯೆಗಳಿಗೆ ಸ್ಮಾರ್ಟ್ ಸಿಟಿ ಯೋಜನೆಗಳು ಕಾರಣ ಆಗುತ್ತಿವೆ.**

**ರೋಹಿತ್ ಸಿಂಹ,** ಎಂಜಿನಿಯರ್

## 25 ವರ್ಷಗಳ ಹಿಂದೆ

ಶುಕ್ರವಾರ, 18-4-1997

**• ಭೂಕಬಳಿಕೆ: ನೆರವು ನೀಡಿದ 8 ಅಧಿಕಾರಿಗಳ ಅಮಾನತು**

ಬೆಂಗಳೂರು, ಏ. 17– ರಾಜ್ಯದ ಇಬ್ಬರು ಹಿರಿಯ ಐಎಎಸ್ ಅಧಿಕಾರಿಗಳ ಪತ್ನಿಯರಿಂದ ನಡೆದಿರುವ ಭೂ ಸುಧಾರಣಾ ಕಾಯ್ದೆ ಉಲ್ಲಂಘನೆ ಹಾಗೂ ಜಮೀನು ಖರೀದಿ ವ್ಯವಹಾರದಲ್ಲಿ 1.17 ಕೋಟಿ ರೂಪಾಯಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಹಗರಣದಲ್ಲಿ ನಾಲ್ವರು ಅಧಿಕಾರಿಗಳು ಸೇರಿದಂತೆ ಎಂಟು ಮಂದಿಯನ್ನು ಅಮಾನತು ಮಾಡಲಾಗಿದೆ.

ಕಂದಾಯ ಸಚಿವ ರಮೇಶ್ ಜಿಗಜಿಣಗಿ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

**• ಕಾಂಗ್ರೆಸ್ ಬೆಂಬಲ ವಾಪಸಿಗೆ ದೇವೇಗೌಡ ಹೊಣೆ- ಗುಪ್ತಾ**

ನವದೆಹಲಿ, ಏ.17(ಪಿಟಿಐ)– 'ಪ್ರಧಾನಿ ಎಚ್.ಡಿ.ದೇವೇಗೌಡರು ಕಾಂಗ್ರೆಸ್ ಜತೆಗಿನ ಸಂಬಂಧವನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲರಾದರು; ಸಂಯುಕ್ತ ರಂಗಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ವಾಪಸ್ ಪಡೆದುಕೊಳ್ಳುವುದಕ್ಕೆ ಪ್ರಧಾನಿಯೇ ಮೊದಲ ಹೊಣೆಗಾರರು' ಎಂದು ಗೃಹ ಸಚಿವ ಇಂದ್ರಜಿತ್ ಗುಪ್ತಾ ಅವರು ದೇವೇಗೌಡರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಕಾಂಗ್ರೆಸ್ ನಾಯಕರ ಜತೆ ಮುಂದೆ ಉತ್ತಮ ಸಂಬಂಧ ರೂಪಿಸಲು ಸಂಯುಕ್ತ ರಂಗ ಉದ್ದೇಶಿಸಿದ್ದು, ರಂಗದ ಹೊಸ ನಾಯಕರು ಈ ಕೆಲಸ ಮಾಡಬೇಕಾಗುತ್ತದೆ. ಕಾಂಗ್ರೆಸ್ ಜತೆಗಿನ ಸಂಬಂಧವನ್ನು ಉತ್ತಮವಾಗಿ ನಿರ್ವಹಿಸಲಾಗುವುದು. ಇದರಲ್ಲಿ ಸಂಶಯವೇ ಬೇಡ' ಎಂಬ ಭರವಸೆಯನ್ನು ಹೋಂ ಟಿವಿಗೆ ನೀಡಿರುವ ಸಂದರ್ಶನದಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಗುಪ್ತಾ ಅವರ ಸಂದರ್ಶನ ನಾಳೆ ಪ್ರಸಾರವಾಗಲಿದೆ.

## 50 ವರ್ಷಗಳ ಹಿಂದೆ

ಮಂಗಳವಾರ, 18-4-1972

**• ನಮ್ಮದೇ ಸಮಾಜವಾದಿ ಪಕ್ಷ; ರಾಜನಾರಾಯಣ್ ತಂಡದ ಪ್ರತಿಪಾದನೆ**

ನವದೆಹಲಿ, ಏ. 17– ರಾಷ್ಟ್ರೀಯ ಅಡ್‌ಹಾಕ್ ಸಮಿತಿಯ ರಾಜನಾರಾಯಣ್ ತಂಡದ ಸದಸ್ಯರು ಇಂದು ಸಭೆ ಸೇರಿ, ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಸಂಸತ್ ಸದಸ್ಯ ಮಧು ದಂಡವತೆ ಅವರನ್ನು ವಜಾ ಮಾಡಿ, ಅವರ ಸ್ಥಾನದಲ್ಲಿ ಮಣಿರಾಂ ಬಾಗ್ರಿ ಅವರನ್ನು ನೇಮಕ ಮಾಡಿದಾಗ, ಹತ್ತು ತಿಂಗಳ ಸಮಾಜವಾದಿ ಪಕ್ಷದಲ್ಲಿ ಒಡಕು ಸ್ಥಿರಗೊಂಡಿತು.

ರಾಜನಾರಾಯಣ್‌ರ ನಿವಾಸದಲ್ಲಿ ಪಕ್ಷದ ಕಚೇರಿಯನ್ನು ಅವರು ಸ್ಥಾಪಿಸಿ, ಕೆಲವು ಕಾರ್ಯಕರ್ತರ ಸಮ್ಮುಖದಲ್ಲಿ ಪಕ್ಷದ ಧ್ವಜಾರೋಹಣ ನಡೆಸಿದರು.

**• ಎರಡು ವರ್ಷಗಳ ಬಾಕಿ ಮೊತ್ತ ಪಾವತಿ ಮಾಡಿದರೆ ಉಚ್ಚಾಟನೆ ವಿರುದ್ಧ ರಕ್ಷಣೆ**

ಬೆಂಗಳೂರು, ಏ. 17– ಗೇಣಿ ಬಾಕಿ ಇರುವ ಗೇಣಿದಾರ, ಎರಡು ವರ್ಷದ ಗೇಣಿಗೆ ಸಮನಾದ ಮೊತ್ತವನ್ನು ಪಾವತಿ ಮಾಡಿದಲ್ಲಿ ಅವನಿಗೆ ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ನೀಡುವ ತಿದ್ದುಪಡಿ ಮಸೂದೆಗೆ ವಿಧಾನಸಭೆ ಇಂದು ಅಂಗೀಕಾರ ನೀಡಿತು.

ಮೈಸೂರು ಭೂ ಸುಧಾರಣಾ ಶಾಸನದ 22ನೇ ಕಲಮಿಗೆ ಸೂಚಿಸಲಾದ ಈ ತಿದ್ದುಪಡಿಯಲ್ಲಿ, ಕೆಲ ಸಂದರ್ಭಗಳಲ್ಲಿ ಗೇಣಿದಾರರಿಗೆ ಮತ್ತೆ ಜಮೀನು ದೊರೆಯುವಂತೆ ಅವಕಾಶ ಕಲ್ಪಿಸಲಾಗಿದೆ.

ಯೋಜನಾ ವರದಿಯಲ್ಲಿನ ಎರಡು ಅಂಶಗಳು ತೀವ್ರ ಸ್ವರೂಪದ ವಾದ–ವಿವಾದಗಳಿಗೆ ಎಡೆಮಾಡಿವೆ

# ನದಿ ಪುನರುಜ್ಜೀವನಕ್ಕೆ ಅರಣ್ಯೀಕರಣ

ವಿಶ್ಲೇಷಣೆ

**ಡಾ. ಎಚ್.ಆರ್.ಕೃಷ್ಣಮೂರ್ತಿ**

**ಈ ವರ್ಷದ** ಮಾರ್ಚ್ 14ರಂದು, ಕೇಂದ್ರ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯವು ಅರಣ್ಯೀಕರಣದ ಮೂಲಕ ನಮ್ಮ ದೇಶದ 13 ಪ್ರಮುಖ ನದಿಗಳ ಪುನರುಜ್ಜೀವನಕ್ಕಾಗಿ ಯೋಜನೆಯೊಂದನ್ನು ಪ್ರಕಟಿಸಿದೆ. ನದಿಯ ಪಥದುದ್ದಕ್ಕೂ ಎರಡೂ ದಂಡೆಗಳಲ್ಲಿ ಮರ ಗಿಡಗಳನ್ನು ಬೆಳೆಸುವುದು, ನಿಗದಿತ ಜಾಗಗಳಲ್ಲಿ ನದೀತಟವನ್ನು ಆಕರ್ಷಕವಾಗಿ ಅಭಿವೃದ್ಧಿಪಡಿಸುವುದು ಮತ್ತು ಪರಿಸರ ಉದ್ಯಾನಗಳನ್ನು ನಿರ್ಮಿಸುವುದು ಈ ಯೋಜನೆಯ ಮೂರು ಮುಖ್ಯ ಗುರಿಗಳು. ಝೀಲಮ್, ರಾವಿ, ಚೀನಾಬ್, ಬೀಯಾಸ್, ಸಟ್ಲೆಜ್, ಯಮುನಾ, ಬ್ರಹ್ಮಪುತ್ರ, ಲೂನಿ, ನರ್ಮದಾ, ಗೋದಾವರಿ, ಮಹಾನದಿ, ಕೃಷ್ಣಾ ಮತ್ತು ಕಾವೇರಿ ನದಿಗಳಿಗೆ ಅನ್ವಯಿಸುವಂತೆ 24 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯಗತವಾಗಲಿರುವ ಈ ಯೋಜನೆಯ ಅಂದಾಜು ವೆಚ್ಚ ₹19,300 ಕೋಟಿ.

ನಮ್ಮ ದೇಶದ ಅರ್ಧಕ್ಕೂ ಹೆಚ್ಚಿನ ಭೌಗೋಳಿಕ ಪ್ರದೇಶಕ್ಕೆ ನೀರನ್ನೊದಗಿಸಿ, 42,830 ಕಿ.ಮೀ.ಗಳ ಉದ್ದಕ್ಕೆ ಪ್ರವಹಿಸುವ ಈ 13 ಮುಖ್ಯ ನದಿಗಳಲ್ಲಿ ವರ್ಷವಿಡೀ ತಕ್ಕ ಮಟ್ಟಿಗೆ ನೀರಿರುವಂತೆ ನೋಡಿಕೊಳ್ಳುವುದೇ ಈ ಯೋಜನೆಯ ಅತಿ ಮುಖ್ಯ ಉದ್ದೇಶ. ಈ ಸಂಬಂಧ ವಿವರವಾದ ವರದಿಯನ್ನು ಸಿದ್ಧಪಡಿಸಿರುವ, 'ದಿ ಇಂಡಿಯನ್ ಕೌನ್ಸಿಲ್ ಆಫ್ ಫಾರೆಸ್ಟ್ರಿ ರಿಸರ್ಚ್ ಆ್ಯಂಡ್ ಎಜುಕೇಶನ್' ಸಂಸ್ಥೆ (ಐಸಿಎಫ್‌ಆರ್‌ಇ) ನದಿಯ ಎರಡೂ ದಂಡೆಗಳ ಮೇಲೆ ಮರಗಿಡಗಳನ್ನು ಬೆಳೆಸುವುದರ ಮೂಲಕವಾಗಿ ಯೋಜನೆಯ ಉದ್ದೇಶವನ್ನು ಸಾಧಿಸಬಹುದೆಂಬ ಅಭಿಪ್ರಾಯವನ್ನು ಪ್ರತಿಪಾದಿಸಿದೆ. ಈ ಸಸ್ಯಸಮೂಹವು ಮಳೆಯ ನೀರನ್ನು ನೆಲದಲ್ಲಿ ಇಂಗಿಸಿ, ಅಂತರ್ಜಲದ ಮರುಪೂರಣ ಮಾಡಿ, ನದಿ, ತೊರೆಗಳಲ್ಲಿ ವರ್ಷವಿಡೀ ನೀರಿರುವಂತೆ ಮಾಡಲಿದೆ ಎಂಬುದೇ ಈ ಇಡೀ ಯೋಜನೆಯ ಆಧಾರ ತತ್ವ. ಈ ನದಿಗಳು ಹಾದುಹೋಗುವ ಮಾರ್ಗಗಳನ್ನು ನೈಸರ್ಗಿಕ, ಕೃಷಿ ಮತ್ತು ನಗರ- ಪಟ್ಟಣ ಭೂದೃಶ್ಯಗಳೆಂದು (ಲ್ಯಾಂಡ್ ಸ್ಕೇಪ್) ವಿಂಗಡಿಸಲಾಗಿದ್ದು, ಅವುಗಳಿಗೆ ಸರಿಹೊಂದುವಂತಹ ಮಾದರಿಯ ನೆಡುತೋಪುಗಳನ್ನು ಬೆಳೆಸಲಾಗುತ್ತದೆ. ನದಿಯ ದಂಡೆಗಳ ರೈತರಿಗೆ ಅಗತ್ಯ ಸಸ್ಯಗಳ ವಿತರಣೆ, ಹಣ್ಣು ಮತ್ತು ಚೌಬೀನೆ ಉತ್ಪಾದಿಸುವ ಮರಗಳನ್ನು ಬೆಳೆಸುವುದು, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಕ್ರಮಗಳು, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮುಂತಾದವುಗಳಿಗೆ ಯೋಜನೆಯಲ್ಲಿ ಗಮನ ನೀಡಲಾಗಿದೆ.

ಐಸಿಎಫ್‌ಆರ್‌ಇ ಸಿದ್ಧಪಡಿಸಿರುವ 'ನದಿಗಳ ಪುನರುಜ್ಜೀವನ' ವರದಿಯಲ್ಲಿರುವ ಎರಡು ಅಂಶಗಳು ತೀವ್ರ ಸ್ವರೂಪದ ವಾದ-ವಿವಾದಗಳಿಗೆ ದಾರಿ ಮಾಡಿಕೊಟ್ಟಿವೆ. ಈ ಇಡೀ ಯೋಜನೆ 'ಗಂಗಾ ನದಿಯ ಪುನರುಜ್ಜೀವನ ಕಾರ್ಯಕ್ರಮದಲ್ಲಿ, ನದಿಯ ದಡದಲ್ಲಿ ಪ್ರಾಯೋಗಿಕವಾಗಿ ನಡೆಸಿದ ಅರಣ್ಯೀಕರಣದ ಯಶಸ್ಸಿನ ಮೇಲೆ ರೂಪುಗೊಂಡಿದೆ' ಎಂಬ ಘೋಷಣೆ ಮೊದಲನೆಯದು. ಎರಡನೆಯದು, 'ನದಿಯ ದಂಡೆಯ ಮೇಲೆ ಮರಗಳನ್ನು ಬೆಳೆಸುವುದರಿಂದ ನದಿಯಲ್ಲಿ ವರ್ಷವಿಡೀ ನೀರಿರುವಂತೆ ಮಾಡುವುದು ಸಾಧ್ಯ' ಎಂಬ ಬಲವಾದ ಪ್ರತಿಪಾದನೆ.

ಗಂಗಾ ಮತ್ತು ಅದರ ಉಪನದಿಗಳ ದಂಡೆಯಲ್ಲಿ ಮರಗಿಡಗಳನ್ನು ಬೆಳೆಸುವ ಯೋಜನೆ ರೂಪುಗೊಂಡದ್ದು 2015ರಲ್ಲಿ. ಡೆಹ್ರಾಡೂನ್‌ನ ಅರಣ್ಯ ಸಂಶೋಧನಾ ಸಂಸ್ಥೆ ಸಿದ್ಧಪಡಿಸಿದ ಈ ಯೋಜನೆ ಕಾರ್ಯಗತವಾಗಿದ್ದು, ಗಂಗಾ ನದಿ ಪ್ರವಹಿಸುವ ರಾಜ್ಯಗಳ ನದಿಯ ದಡದಲ್ಲಿನ 1,34,100 ಹೆಕ್ಟೇರ್ ಪ್ರದೇಶದಲ್ಲಿ 43 ವಿವಿಧ ಮಾದರಿಯ ನೆಡುತೋಪುಗಳನ್ನು ಬೆಳೆಸಲಾಗಿದೆ. ಆದರೆ ಗಂಗಾ ನದಿಯನ್ನು ಮಾಲಿನ್ಯಮುಕ್ತವನ್ನಾಗಿ ಮಾಡಿ, ನೀರಿನ ಗುಣಮಟ್ಟ ಉತ್ತಮಪಡಿಸುವ ಒಟ್ಟಾರೆ ಉದ್ದೇಶಕ್ಕೆ ಅರಣ್ಯೀಕರಣ ಯೋಜನೆಯ ಕೊಡುಗೆ ನಗಣ್ಯವೆನ್ನುವುದು ಪರಿಣತರ ಅಭಿಪ್ರಾಯ. ಆರು ವರ್ಷಗಳ ಅರಣ್ಯೀಕರಣ ಯೋಜನೆಯನ್ನು ಪರಿಶೀಲಿಸಿರುವ ಸ್ವತಂತ್ರ ಪರಿಣತರ ತಂಡ, ಅದು ಯಶಸ್ವಿಯಾಯಿತೆಂಬುದಕ್ಕೆ ವಿಶ್ವಾಸಾರ್ಹ ಸಾಕ್ಷ್ಯಾಧಾರಗಳಿಲ್ಲ ಎಂಬ ನಿರ್ಧಾರಕ್ಕೆ ಬಂದಿದೆ. ಯಾವ ಮಾನದಂಡದಿಂದ ಈ ಯೋಜನೆ ಇದೀಗ ಅನುಕರಣೀಯ ಮಾದರಿಯಾಗಲಿದೆ ಎಂಬುದು ಸ್ಪಷ್ಟವಾಗಿಲ್ಲ.

ನದಿಯ ದಂಡೆಗುಂಟ ಬೆಳೆಸುವ ಮರಗಿಡಗಳು ನದಿಯಲ್ಲಿ ನೀರಿನ ಹರಿವನ್ನು ಹೆಚ್ಚಿಸಿ, ವರ್ಷವಿಡೀ ನೀರಿರುವಂತೆ ಮಾಡಬಲ್ಲವೇ? ಈ ವಿಷಯದ ಬಗ್ಗೆ ವ್ಯಾಪಕ ಚರ್ಚೆ ಪ್ರಾರಂಭವಾದದ್ದು 2017ರಲ್ಲಿ. ಸದ್ಗುರು ಜಗ್ಗಿ ವಾಸುದೇವ್ ಅವರು, ನಮ್ಮ ದೇಶದ ನದಿಗಳ ದಂಡೆಯ 20,000 ಕಿ.ಮೀ.ಗಳ ಉದ್ದಕ್ಕೂ, 16 ವಿವಿಧ ಪ್ರಭೇದಗಳ ಮರಗಿಡಗಳನ್ನು ಬೆಳೆಸುವ ಯೋಜನೆಯ ವಿವರಗಳನ್ನು ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದ ನಂತರ.

ಮರಗಿಡಗಳ ಬೇರುಗಳು ಮಣ್ಣಿನಲ್ಲಿ ಸೃಷ್ಟಿಸುವ ರಂಧ್ರಗಳು ಹಾಗೂ ಸೂಕ್ಷ್ಮ ಜಲಮಾರ್ಗಗಳ ಮೂಲಕ ಮಳೆಯ ನೀರು ನೆಲದೊಳಗೆ ಇಳಿದು, ಅಂತರ್ಜಲವಾಗಿ, ನಿಧಾನವಾಗಿ ಚಲಿಸಿ, ಕಡೆಗೊಮ್ಮೆ ನದಿತೊರೆಗಳಿಗೆ ಸೇರುತ್ತದೆಂಬುದು ತಿಳಿದ ವಿಷಯ. ಆದರೆ ದಂಡೆಯ ಮೇಲೆ ಮರಗಿಡಗಳ ಸಂಖ್ಯೆ, ದಟ್ಟಣೆ ಹೆಚ್ಚಾದರೆ ನದಿಗೆ ಸೇರುವ ನೀರಿನ ಪ್ರಮಾಣ ಹೆಚ್ಚುತ್ತದೆಂಬುದಕ್ಕೆ ಯಾವ ವೈಜ್ಞಾನಿಕ ಆಧಾರವೂ ಇಲ್ಲವೆಂಬುದು ಬೆಂಗಳೂರಿನ 'ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಆ್ಯಂಡ್ ಎನ್ವೈರನ್‌ಮೆಂಟ್' ಸಂಸ್ಥೆಯ ವಿಜ್ಞಾನಿಗಳ ಅಭಿಪ್ರಾಯ.

ಅರಣ್ಯೀಕರಣದಿಂದ ನಮಗೆ ದೊರೆಯುವ ನೀರಿನ ಪ್ರಮಾಣ ಹೆಚ್ಚುವುದೆಂಬುದು ಸಾಮಾನ್ಯ ನಂಬಿಕೆ. ಆದರೆ ಲಭ್ಯವಾಗುವ ನೀರಿನ ಪ್ರಮಾಣವನ್ನು ನಿರ್ಧರಿಸುವ ನಿರ್ಣಾಯಕ ಅಂಶವೆಂದರೆ ಆವಿಬಾಷ್ಪ ವಿಸರ್ಜನೆ (ಎವಾಪೋಟ್ರಾನ್ಸ್‌ಪಿರೇಶನ್). ಆವೀಕರಣದಲ್ಲಿ ಜಲ ಆಕರಗಳಿಂದ ಮತ್ತು ಮಣ್ಣಿನಿಂದ ನೀರು ಆವಿಯಾಗುತ್ತದೆ. ಬಾಷ್ಪ ವಿಸರ್ಜನೆಯಲ್ಲಿ ಸಸ್ಯಗಳಿಂದ, ಅವುಗಳಲ್ಲಿರುವ ಪತ್ರರಂಧ್ರಗಳಿಂದ ನೀರು ಆವಿಯಾಗುತ್ತದೆ. ಶುಷ್ಕ ಪ್ರದೇಶದಲ್ಲಿ ಅರಣ್ಯೀಕರಣವನ್ನು ಕೈಗೊಂಡಾಗ ಅಥವಾ ತ್ವರಿತಗತಿಯಲ್ಲಿ ಬೆಳೆಯುವ, ನೆಲದಾಳಕ್ಕೆ ಬೇರುಗಳನ್ನಿಳಿಸುವ ಪ್ರಭೇದಗಳನ್ನು ಬಳಸಿದಾಗ, ಅವು ನೆಲದಿಂದಲೇ ಹೆಚ್ಚಿನ ಪ್ರಮಾಣದ ನೀರನ್ನು ಸೆಳೆದುಕೊಂಡು ಅಂತರ್ಜಲದ ಮಟ್ಟವನ್ನು ತಗ್ಗಿಸಿ, ನದಿ-ತೊರೆಗಳನ್ನು ಒಣಗಿಸಿರುವ ಅನೇಕ ನಿದರ್ಶನಗಳಿವೆ.

ಪ್ರಪಂಚದ ವಿವಿಧ ಭೌಗೋಳಿಕ, ವಾಯುಗುಣ ಪ್ರದೇಶಗಳಲ್ಲಿ ನಡೆದಿರುವ ಅಧ್ಯಯನಗಳಿಂದ ಶೇ 70ರಷ್ಟು ಪ್ರಕರಣಗಳಲ್ಲಿ ನದಿಯ ದಡದಲ್ಲಿ ಅರಣ್ಯೀಕರಣದಿಂದ ಮರಗಳ ಸಂಖ್ಯೆ ಹೆಚ್ಚಿದಷ್ಟೂ ನದಿಯ ನೀರಿನ ಪ್ರಮಾಣ ಕಡಿಮೆಯಾಗುವುದು ದಾಖಲಾಗಿದೆ. ಈ ವಾದವನ್ನು ಸಮರ್ಥಿಸುವ ಪರಿಸರ ತಜ್ಞ ಅ.ನ.ಯಲ್ಲಪ್ಪ ರೆಡ್ಡಿ, 'ಮರಗಿಡಗಳು, ಹುಲ್ಲು ಮತ್ತು ಪೊದೆ ಹೊದರುಗಳ ಸಂಯೋಜನೆಯನ್ನು ಸ್ಥಳೀಯ ವಾಯುಗುಣ, ಮಣ್ಣಿನ ಗುಣಲಕ್ಷಣಗಳಿಗೆ ಹೊಂದುವಂತೆ ಎಚ್ಚರದಿಂದ ಆಯ್ಕೆ ಮಾಡಿ, ಸೂಕ್ತ ದಟ್ಟಣೆಯಲ್ಲಿ ಬೆಳೆಸಿದರೆ ಮಾತ್ರ ಅರಣ್ಯೀಕರಣ ಮತ್ತು ನದಿಗಳಲ್ಲಿ ನೀರಿನ ಲಭ್ಯತೆಯ ನಡುವಿನ ಸೂಕ್ಷ್ಮ ಹಾಗೂ ಸಂಕೀರ್ಣ ಸಂಬಂಧವನ್ನು ಕಾಪಾಡುವುದು ಸಾಧ್ಯ' ಎನ್ನುತ್ತಾರೆ. ನದಿಗಳ ದಂಡೆಯ ಉದ್ದಕ್ಕೂ ಬೆಳೆಸುವ ಮರಗಿಡಗಳಿಂದ ಸ್ಥಳೀಯ ಮಳೆಯ ಸ್ವರೂಪದಲ್ಲಿ ಬದಲಾವಣೆ ಬರುತ್ತದೆ ಎಂಬ ನಿರೀಕ್ಷೆ ವೈಜ್ಞಾನಿಕವಲ್ಲ ಎಂಬುದು ವಿಜ್ಞಾನಿಗಳ ಅಭಿಮತ.

ಬೃಹತ್ ಪ್ರಮಾಣದ ಅರಣ್ಯೀಕರಣವೊಂದರಿಂದಲೇ ಪ್ರಮುಖ ನದಿಗಳಲ್ಲಿ ವರ್ಷವಿಡೀ ನೀರಿನ ಹರಿವನ್ನು ಕಾಯ್ದುಕೊಳ್ಳುವುದು ಅಸಾಧ್ಯ. ನಮ್ಮ ಕಾವೇರಿಯನ್ನೇ ನೋಡಿ. ಕರ್ನಾಟಕ, ತಮಿಳುನಾಡಿನ ಒಟ್ಟು ಸುಮಾರು 800 ಕಿ.ಮೀ.ಗಳ ಕಾವೇರಿಯ ಪಥದಲ್ಲಿ 96 ಅಣೆಕಟ್ಟೆಗಳು, 10 ಬ್ಯಾರೇಜ್‌ಗಳು, 15 ಜಲವಿದ್ಯುತ್ ಸ್ಥಾವರಗಳು, 54 ಜಲಾಶಯಗಳಿವೆ. 9,000 ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳಿವೆ. ಈ ಎಲ್ಲವೂ ನೀರನ್ನು ಹಿಡಿದಿಟ್ಟು, ನೀರಿನ ಪ್ರಮಾಣವನ್ನು ಇಳಿಸುತ್ತವೆ. ಪಶ್ಚಿಮ ಘಟ್ಟಗಳ ಗುಡ್ಡಗಾಡು ಪ್ರದೇಶಗಳಲ್ಲಿ ನಡೆಯುತ್ತಿರುವ ತ್ವರಿತಗತಿಯ ನಗರೀಕರಣ, ಜಲಾನಯನ ಪ್ರದೇಶದಲ್ಲಿ ಮಾಯವಾಗುತ್ತಿರುವ ಹಸಿರು ಹೊದಿಕೆ, ನದೀಪಾತ್ರವನ್ನು ಹಾಳುಗೆಡವುತ್ತಿರುವ ಮರಳು ಗಣಿಗಾರಿಕೆ ಮುಂತಾದವು ಕೂಡ ಬೇಸಿಗೆಯಲ್ಲಿ ನದಿಯ ಅನೇಕ ಭಾಗಗಳನ್ನು ಸಂಪೂರ್ಣವಾಗಿ ಒಣಗಿಸುತ್ತಿವೆ. ಬಂಗಾಳ ಕೊಲ್ಲಿಯ ಲವಣಯುಕ್ತ ನೀರು ಕಾವೇರಿ ನದಿಯೊಳಗೆ 17 ಕಿ.ಮೀ.ಗಳವರೆಗೂ ಹರಿಯುವುದು ಸಾಮಾನ್ಯವಾಗಿದೆ.

ಬಹುತೇಕ ಎಲ್ಲ ನದಿಗಳ ಕಥೆಯೂ ಇದೇ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳದೆ, ವರ್ಷವಿಡೀ ನದಿಯಲ್ಲಿ ನೀರು ಹರಿಸಲು ಕೇವಲ ಅರಣ್ಯೀಕರಣದಂತಹ ಯೋಜನೆಗಳನ್ನು ಕೈಗೊಳ್ಳುವುದರಿಂದ ಯಾವ ಹೆಚ್ಚಿನ ಪ್ರಯೋಜನವೂ ಇಲ್ಲವೆಂಬುದು ಪರಿಸರ ವಿಜ್ಞಾನಿಗಳು, ಸಂಘಟನೆಗಳ ಖಚಿತ ನಿಲುವು.

## ಚುರುಮುರಿ

### ಕನ್ನಡಕದ ಕರಾಮತ್ತು

• ಸುಮಂಗಲಾ

**ಬೆಕ್ಕಣ್ಣ** ಕಣ್ಣಿಗೊಂದು ಕನ್ನಡಕ ಸಿಕ್ಕಿಸಿಕೊಂಡು, 'ಇಡೀ ಭರತಖಂಡದಲ್ಲಿ ನಮ್ಮ ಕರುನಾಡೇ ಈಗ ಎಲ್ಲಾದ್ರಾಗೆ ಮುಂದೈತಿ. ಕಾಂಗಿಗಳ ಕಾಲದಾಗೆ ಶೇ 10 ಇದ್ದಿದ್ದು ಕಮಲಕ್ಕನ ಕಾಲದಲ್ಲಿ ಶೇ 40ಕ್ಕೆ ಏರೈತಿ' ಎಂದು ಬಲು ಖುಷಿಯಿಂದ ವದರುತ್ತಿತ್ತು.

'ಮಂಗ್ಯಾನಂಥವ್ನೆ... ತೆಲಿ ಎಲ್ಲಿಟ್ಟಿದ್ದಿ? ಶೇ 40ಕ್ಕೆ ಏರಿದ್ದು ಕಮಿಷನ್. ಕಾಮಗಾರಿ ಗುತ್ತಿಗೆ ಮಾತ್ರವಲ್ಲ, ಗೋಶಾಲೆಗೆ ಮೇವು ಸರಬರಾಜು ಮಾಡೋವ್ರ ಹತ್ರಾನೂ ಕಮಿಷನ್ ಕೇಳ್ತಾರಂತೆ' ಎಂದು ಬೈದೆ.

'ಕಮಿಷನ್ ತಗಂಡ್ರೇನಾತು, ಸಬ್ ಕಾ ವಿಕಾಸ್ ಮಾಡ್ತಾರಲ್ಲ! ಶಾಸಕರು, ಸಚಿವರು ಕಂತ್ರಾಟುದಾರರಿಂದ ತಗಂಡ ಕಮಿಷನ್ ರಾಜ್ಯದ ಅಭಿವೃದ್ಧಿಗೇ ಬಳಸ್ತಾರ' ವಿತಂಡವಾದ ಮುಂದುವರಿಸಿದ ಬೆಕ್ಕಣ್ಣ ತನ್ನ ಕನ್ನಡಕ ತೆಗೆದು ನನಗೆ ಕೊಟ್ಟಿತು.

'ಈ ಕೇಸರಿ ಫ್ರೇಮ್ ಕನ್ನಡಕದಾಗೆ ನೋಡಿದ್ರೆ ಕಮಲಕ್ಕನ ಮನಿಯವರು ಮಾಡೂದೆಲ್ಲ ಸರಿಯಾಗೈತಿ ಅಂತ ಕಾಣತೈತಿ. ನಮ್ಮ ಮೋದಿಮಾಮ ಹೇಳಿದ ಅಚ್ಛೇ ದಿನ್ ಇದ್ರಾಗೆ ಮಸ್ತ್ ಕಾಣತೈತಿ' ಎಂದು ವಕ್ರನಗು ಬೀರಿತು.

'ಅವೇನಲೇ?' ಎಂದು ಪಕ್ಕದಲ್ಲಿದ್ದ ಇನ್ನೂ ನಾಕಾರು ಕನ್ನಡಕಗಳತ್ತ ಕೈತೋರಿದೆ.

'ಎಲ್ಲಾ ಬ್ಯಾರೆಬ್ಯಾರೆ ಫ್ರೇಮ್ ಕನ್ನಡಕ. ಕಾಂಗಿಗಳ ಸೆಕ್ಯುಲರ್ ಫ್ರೇಮಿನ ಈ ಕನ್ನಡಕ ಹಾಕ್ಯಂಡರೆ ಅವರ ಕಾಲದ ಕಾರುಬಾರು ಎಲ್ಲಾ ಬರೋಬ್ಬರಿ ಐತಂತ ಕಾಣಿಸತೈತಿ, ಅವಾಗಿನ ಭ್ರಷ್ಟಾಚಾರ ಈ ಕನ್ನಡಕದಾಗೆ ಅಗೋಚರವಾಗತೈತಿ. ಇದು ಕುಮಾರಣ್ಣನ ಕನ್ನಡಕ. ಇದನ್ನು ಹಾಕ್ಯಂಡರೆ ಎರಡು ಸಲ ಮುಖ್ಯಮಂತ್ರಿಯಾದ್ರೂ ಎಲ್ಲಾರೂ ಬೆನ್ನಿಗೆ ಚೂರಿ ಹಾಕಿದ್ರು ಅಂತ ಕಣ್ಣೀರು ದಳದಳ ಇಳೀತೈತೆ. ಕುಂತಲ್ಲಿ ನಿಂತಲ್ಲಿ ಕಾಂಗಿಗಳದೇ ತಪ್ಪು, ಕಮಲಕ್ಕನೇ ಸ್ವಲ್ಪ ಓಕೆ ಅಂತ ಕಾಣತೈತಿ' ಬೆಕ್ಕಣ್ಣ ಪ್ರತಿಯೊಂದು ಕನ್ನಡಕದ ಕರಾಮತ್ತನ್ನೂ ವಿವರಿಸಿತು.

'ನಮಗೀಗ ಬೇಕಾಗಿರದು ಇವಲ್ಲಲೇ, ಗಾಂಧಿ ಫ್ರೇಮಿನ ಕನ್ನಡಕ, ಮತ್ತ ಅಂಬೇಡ್ಕರ್ ಕನ್ನಡಕ ಬೇಕು' ಎಂದು ನಾನೆಂದರೆ 'ಅವ್ ಬರೀ ಗ್ವಾಡೆ ಮೇಲಿರೋ ಫೋಟೋದಾಗಷ್ಟೇ. ಅಂಗಡಿವಳಗ ಈ ಕನ್ನಡಕಗಳೇ ಸಿಗವು' ಎಂದು ಖೊಳ್ಳನೆ ನಕ್ಕಿತು!

## ಸಂಗತ

# ಎಳೆತನ ದಕ್ಕಲಿ, ರಜೆ ಆಸ್ವಾದಿಸಲಿ

### ನಾವು ವರ್ಷವಿಡೀ ಮಕ್ಕಳನ್ನು ತರಗತಿಯಲ್ಲಿ ಬಂಧಿಸುವುದಲ್ಲದೆ ಸಿಗುವ ರಜೆಯಲ್ಲೂ ಅವರನ್ನು ಕಾಡುವುದೇಕೆ?

• ಸದಾಶಿವ್ ಸೊರಟೂರು

**ಬಿಸಿಲು** ಸುರಿಯುತ್ತಿದೆ. ಶಾಲೆಗಳ ಬಾಗಿಲುಗಳು ಮುಚ್ಚಿವೆ. ಪರೀಕ್ಷೆಗಳನ್ನು ಮುಗಿಸಿ ಬಂದ ಮಕ್ಕಳು ನಿಟ್ಟುಸಿರುಬಿಟ್ಟಿವೆ. ತುಸು ನೆಮ್ಮದಿಯಿಂದ ಕೈ ಕಾಲನ್ನು ಚಾಚಿ ಮನೆ ತುಂಬಾ ಓಡಾಡುತ್ತಿವೆ. ಒಂದು ತಿಂಗಳ ರಜೆ ಅವರ ಖಾತೆಗೆ ಜಮೆಯಾಗಿದೆ. ನಾವು ಬ್ಯಾಂಕ್ ಖಾತೆಯಲ್ಲಿನ ಹಣ ನೋಡಿ ಖುಷಿಪಡುವಂತೆ ಮಗು ತನ್ನ ರಜೆ ನೆನೆದು ಒಳಗೊಳಗೇ ಸಂಭ್ರಮಿಸುತ್ತಿದೆ. ಆದರೆ ಪೋಷಕರ ವಕ್ರದೃಷ್ಟಿ ಮತ್ತೆ ಈಗ ಮಗುವಿನ ರಜೆಯ ಮೇಲೂ ಬಿದ್ದಿದೆ.

ನೌಕರಿಯ ಕಾರಣಕ್ಕೆ ದೂರದ ನಗರದಲ್ಲಿರುವ ಗೆಳೆಯನಿಗೆ ಮೊನ್ನೆಯಷ್ಟೆ ಫೋನ್ ಮಾಡಿದೆ. 'ನಿಮ್ಮ ಅಮ್ಮ ಹೇಳಿದ್ರು, ಮಗೂನ ಕರ್ಕೊಂಡು ಊರಿಗೆ ಬರ್ಬೇಕಂತೆ ನೋಡು. ಮೊಮ್ಮಗನನ್ನು ನೋಡಿ ತುಂಬಾ ದಿನ ಆಯ್ತಂತೆ. ರಜೆಯಲ್ಲಾದ್ರೂ ಬಂದು ಹೋಗಿ ಅಂತ ಹೇಳ್ತಿದಾರೆ' ಅಂದೆ. 'ರಜೆ, ಯಾವ ರಜೆ? ಮಗೂಗೆ ಸಮ್ಮರ್ ಕ್ಯಾಂಪಿದೆ. ನಿನ್ನೆಯಷ್ಟೇ 20 ಸಾವಿರ ಕೊಟ್ಟು ಅಡ್ಮಿಷನ್ ತಗೊಂಡಿದ್ದೀನಿ. ಮಗೂನ ಭವಿಷ್ಯ ಮುಖ್ಯ. ಖುಷಿ ಮುಖ್ಯ. ಅಮ್ಮನಿಗೆ ಹೇಳು ಒಂದು ದಿನದ ಮಟ್ಟಿಗೆ ಬಂದು ಹೋಗ್ತೀವಿ ಅಂತ' ಅಂದು ಫೋನಿಟ್ಟ.

ಮಗುವಿನ ಭವಿಷ್ಯದ ಖುಷಿ ಬೇಸಿಗೆ ಶಿಬಿರದಲ್ಲಿದೆ ಅನ್ನುವ ಅವನ ಅಪಾರ ಜ್ಞಾನಕ್ಕೆ ಬೆರಗಾದೆ. ರಜೆ ಇರುವುದೇ ಮಗುವನ್ನು ಶಿಬಿರಕ್ಕೆ ನೂಕುವ ಇಲ್ಲವೇ ಮುಂದಿನ ವರ್ಷದ ಇಡೀ ಕಲಿಕೆಯನ್ನು ಒಂದೇ ತಿಂಗಳಲ್ಲಿ ಕಲಿಸುತ್ತೇವೆ ಅನ್ನುವ ಮನೆಪಾಠಕ್ಕೆ ತಳ್ಳುವ ಗೀಳದು. ವಿಪರೀತ ಜಾಹೀರಾತುಗಳೊಂದಿಗೆ ಪೋಷಕರಿಗೆ ಮೋಡಿ ಮಾಡಿರುವ ರಜೆ ಕಾಲದ ಶಿಬಿರಗಳು ಉಂಟು ಮಾಡುವ ಪರಿಣಾಮಗಳು ಏನೇ ಇರಬಹುದು. ಆದರೆ ಮಗು ಎಂಬುದು ಯಂತ್ರವಲ್ಲ. ರಜೆ ಇರುವುದೇ ಮಗುವಿನ ಮನಸ್ಸಿನ ಚೇತರಿಕೆಗೆ. ರಜೆ ಎಂಬುದು ಬಿಡುಗಡೆಯೇ ವಿನಾ ಬಂಧನವಲ್ಲ. ನೀವು ಮತ್ತದೇ ಶಿಬಿರದೊಳಗೆ ಬಂಧಿಸುತ್ತೀರೆಂದರೆ ಮಗುವಿನ ಮನಸ್ಸು ಏನಾಗಬೇಡ?!

ಒಂದು ಮಗುವಿಗೆ ಸಿಗಲೇಬೇಕಾದ 'ಬಾಲ್ಯತನ' ಅದಕ್ಕೆ ದಕ್ಕಬೇಕು. ಅದು ಮಗುವಿನ ಹಕ್ಕು. ಸ್ಪೋಕನ್ ಇಂಗ್ಲಿಷ್, ಒಂದು ದಿನದ ಟ್ರಕ್ಕಿಂಗ್, ಆನೆ ಚಿತ್ರ ಬಿಡಿಸಿ, ಉಸಿರನ್ನು ದೀರ್ಘವಾಗಿ ಎಳೆದುಕೊಳ್ಳಿ, ಹಳಸಲು ಉಪನ್ಯಾಸಗಳು, ಗಂಟೆ ಲೆಕ್ಕದ ಭಾಷಣಗಳು ಇವ್ಯಾವೂ ಮಗುವಿನ ಬಾಲ್ಯವನ್ನು ಚೆಂದಗೊಳಿಸುವುದಿಲ್ಲ. ಅವೆಲ್ಲಾ ಮಗುವಿಗೆ ಶಾಲಾ ತರಗತಿಯಲ್ಲೇ ಸಿಗುವಾಗ ಮತ್ತ್ಯಾಕೆ ಶಿಬಿರದ ಹಂಗು?

ಮಕ್ಕಳನ್ನು ಹಳ್ಳಿಗೊಯ್ಯಿರಿ. ನಿಮ್ಮ ಮಕ್ಕಳು ಅವರ ಅಜ್ಜ ಅಜ್ಜಿಯರ ತೊಡೆಯ ಮೇಲೆ ತಮ್ಮ ರಜೆ ಕಳೆಯಲಿ. ಅವರು ಹೇಳುವ ಕಥೆ ಕೇಳಿಸಿಕೊಳ್ಳಲಿ. ಮಗುವಿಗೆ ಮಣ್ಣಿನಲ್ಲಿ ಆಡುವುದಕ್ಕೆ ಬಿಡಿ, ಆ ಮಣ್ಣಿನ ಸೊಬಗಿನ ಸವಿಗಂಪನ್ನು ಮಗು ಆಘ್ರಾಣಿಸಲಿ. ಅಲ್ಲಿಯ ಮಕ್ಕಳೊಂದಿಗೆ ಬೆರೆಯುವುದಕ್ಕೆ ಅವಕಾಶ ಮಾಡಿಕೊಡಿ. ಬಿಸಿಲಿನಲ್ಲಿ ಬೆವರಲಿ, ಹಳ್ಳಿಯ ಆಟಗಳನ್ನಾಡಲಿ. ಆಟವೆಂದರೆ ಕೇವಲ ಕ್ರಿಕೆಟ್ ಅಥವಾ ವಿಡಿಯೊ ಗೇಮ್ ಅಲ್ಲ ಎಂಬುದು ಖಾತರಿಯಾಗಲಿ.

ಹೊಲ ಗದ್ದೆಗಳ ಕಡೆ ಕರೆದೊಯ್ಯಿರಿ. ಕಟ್ಟಿದ ಇರುವೆಗಳ ಗೂಡು, ಅವುಗಳ ಬದುಕಿನ ಕೌತುಕ, ಮೊಳಕೆ ಒಡೆದ ಬೀಜ, ಆಗ ತಾನೇ ಚಿಗುರಿದ ಎಲೆಗಳು, ಹಾರುವ ದುಂಬಿಗಳು, ಹಾಡುವ ಪಕ್ಷಿಗಳು, ಹರಿಯುವ ನದಿ, ತುಂಬಿದ ಕೆರೆ, ಬೆಳೆದು ನಿಂತ ಪೈರು, ರೈತನ ಬಾಳು, ದನ ಕರುಗಳು ಮೇಯುವ ಕಾವಲು ಇವೆಲ್ಲಾ ಅವರಿಗೆ ದಕ್ಕಲಿ.

ರೈತನ ಕಷ್ಟದ ಬದುಕನ್ನು ಪರಿಚಯಿಸಿ, ಬರಿದಾದ ಕೆರೆಯನ್ನು ತೋರಿಸಿ, ಒಣಗಿದ ಬೆಳೆಯನ್ನು ತೋರಿಸಿ, ನೀರಿಲ್ಲದೆ ಪರಿತಪಿಸುವ ಪಶು ಪಕ್ಷಿಗಳನ್ನು ಕಣ್ಮುಂದಿರಿಸಿ. ಪ್ರಕೃತಿಯೊಂದಿಗೆ ಬೆರೆತು ಅದನ್ನೇ ದೇವರೆಂದು ಪೂಜಿಸುವ ಹಳ್ಳಿಯ ಜನರ ಪ್ರಕೃತಿಪರ ಕಾಳಜಿ ಮಗುವಿಗೆ ತಾಗಲಿ. ಇವೆಲ್ಲ ನಿಮ್ಮ ಬೇಸಿಗೆ ಶಿಬಿರದಲ್ಲಿ ಸಿಗುತ್ತವೆಯೇ ಎಂದು ಒಮ್ಮೆ ಕೇಳಿಕೊಳ್ಳಿ.



ಸಾಧ್ಯವಾದರೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಒಂದು ಪ್ರವಾಸ ಹೊರಡಿ. ಭವ್ಯ ದೇವಾಲಯಗಳು, ಭಯ ಹುಟ್ಟಿಸುವ ಕಾಡುಗಳು, ಗಂಭೀರವಾಗಿ ಬದುಕುವ ಕಾಡುಪ್ರಾಣಿಗಳನ್ನು ನೋಡಲಿ. ಹರಿಯುವ ಝರಿಯಲ್ಲಿ ತೇಲಲಿ. ಕೋಗಿಲೆ ಪುಸ್ತಕದಲ್ಲಿ ಕೂಗುವುದಿಲ್ಲ ಎಂಬುದು ಗೊತ್ತಾಗಲಿ. ತರಗತಿಯಾಚೆ ಕಲಿಯುವುದು ಎಷ್ಟಿದೆ ಎಂಬುದು ಅರಿವಾಗಲಿ. ಪುಸ್ತಕ ಓದುವ ರುಚಿ ಹತ್ತಿಸಿ.

ಆಕಾಶದಲ್ಲಿ ಹಾರುವ ಹಕ್ಕಿಯ ರಮ್ಯತೆಯ ಬಗ್ಗೆ, ಸೂರ್ಯನ ರಶ್ಮಿಯಲ್ಲಿ ಹಾರುವ ದುಂಬಿಗಳ ಝೇಂಕಾರದ ಬಗ್ಗೆ ಮತ್ತು ಹಸಿರು ಬೆಟ್ಟದಲ್ಲಿ ನಗುವ ಹೂವಿನ ಬಗ್ಗೆ ಯೋಚಿಸುವುದಕ್ಕೆ ಸಮಯ ಹೊಂದಿಸಿಕೊಳ್ಳುವುದನ್ನು ಹೇಳಿಕೊಡಿ ಎಂದು ಅಬ್ರಹಾಂ ಲಿಂಕನ್ ತಮ್ಮ ಮಗನ ಶಾಲೆಯ ಶಿಕ್ಷಕರಿಗೆ ಪತ್ರ ಬರೆಯುತ್ತಾರೆ. ಸಾಹಿತಿ ಶಿವರಾಮ ಕಾರಂತರು ತಮ್ಮ ಮಗನನ್ನು ಶಾಲೆಗೆ ಸೇರಿಸದೇ ಇರುವ ನಿರ್ಧಾರಕ್ಕೆ ಬರುತ್ತಾರೆ. ಸಲೀಂ ಅಲಿ ಅವರು ತರಗತಿಗೆ ಚಕ್ಕರ್ ಹಾಕಿ ಹಾರುವ ಹಕ್ಕಿಗಳನ್ನು ಎಣಿಸುತ್ತಾ ಕೂರುತ್ತಾರೆ. ನಮ್ಮ ಜನಪದ ಮಹಿಳೆ 'ಆಡಿ ಬಾ ಎನ ಕಂದ ಅಂಗಾಲ ತೊಳೆದೇನು...' ಎಂದು ಆಡಲು ಆಚೆ ಕಳುಹಿಸುತ್ತಾಳೆ.

ನಾವು ವರ್ಷವಿಡೀ ಮಗುವನ್ನು ತರಗತಿಯಲ್ಲಿ ಬಂಧಿಸಿದ್ದಲ್ಲದೆ ಸಿಗುವ ರಜೆಯಲ್ಲೂ ಕಾಡುತ್ತೇವೆ. ಹೋಗಲಿ ನಮ್ಮ ನಮ್ಮ ಬದುಕಿನ ಉದ್ದೇಶವಾದರೂ ಏನು?

## ವಾಚಕರ ವಾಣಿ

### ಗುತ್ತಿಗೆದಾರರ ಬಾಯಿಂದಲೇ ಬರಲಿ

ಇತ್ತೀಚೆಗೆ ಕೇಳಿಬರುತ್ತಿರುವ ಶೇ 40 ಕಮಿಷನ್ ಬಗ್ಗೆ ರಾಜ್ಯದ ಪ್ರತಿಯೊಬ್ಬರಿಗೂ ಗೊತ್ತಿದೆ. ಗುತ್ತಿಗೆದಾರ ಸಂತೋಷ್ ಪಾಟೀಲ ಸಾವಿನ ನಂತರ ಈ ದಂಧೆಯು ಇಡೀ ದೇಶದಲ್ಲಿ ಸದ್ದು ಮಾಡುತ್ತಿದೆ. ಹೀಗಿರುವಾಗ, ಕಳಪೆ ಕಾಮಗಾರಿಯಿಂದ ಮೂರೇ ತಿಂಗಳಿಗೆ ಕೇವಲ ಒಂದು ಸಣ್ಣ ಮಳೆಗೆ ಬಾಯಿ ತೆಗೆದುಕೊಳ್ಳುವ ರಸ್ತೆಗಳನ್ನು ನಿರ್ಮಿಸಿದ ಬಿಬಿಎಂಪಿ ಗುತ್ತಿಗೆದಾರ ಅಥವಾ ಆತನ ಮೇಲಧಿಕಾರಿಗೆ ಬೈಯುವುದರಲ್ಲಿ ಅರ್ಥವೇ ಇಲ್ಲ ಎನಿಸುತ್ತದೆ. ಗುತ್ತಿಗೆದಾರನಿಗೆ ಹಿಡಿಶಾಪ ಹಾಕುವ ಮುಂಚೆ, ನಾನಾ ರೀತಿಯ ಕಮಿಷನ್ ಕೊಟ್ಟು ಉಳಿದ ಮೊತ್ತದಲ್ಲಿ ಅಷ್ಟೇ ಗುಣಮಟ್ಟ ಕೊಡಲು ಸಾಧ್ಯ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಕಾಸಿಗೆ ತಕ್ಕ ಕಜ್ಜಾಯ ಎಂಬ ಗಾದೆಯು ಇದಕ್ಕೆ ಹೇಳಿ ಮಾಡಿಸಿದಂತಿದೆ ಮತ್ತು ಅದು ಗುತ್ತಿಗೆದಾರರ ಬಾಯಿಂದಲೇ ಬಂದರೆ ಇನ್ನೂ ಚಂದ.

**ರವಿಕಿರಣ್ ಶೇಖರ್,** ಬೆಂಗಳೂರು

### ಅನಾಹುತಕ್ಕೆ ಮುನ್ನ ಎಚ್ಚೆತ್ತುಕೊಳ್ಳಿ

ಪ್ರತಿವರ್ಷ ಮಳೆ ಬರುವ ತಿಂಗಳು ಗೊತ್ತಿರುವುದರಿಂದ, ಬಿತ್ತನೆಗೆ ಅವಶ್ಯವಾಗಿ ಬೇಕಾಗುವ ಬೀಜ ಸಂಗ್ರಹ, ನೀರನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ಹಳ್ಳಿಗರಲ್ಲಿ ಜಾಗೃತಿ ಮೂಡಿಸಬೇಕಿದೆ. ಅದಕ್ಕಿಂತಲೂ ಮುಖ್ಯವಾಗಿ ನಗರಗಳಲ್ಲಿ ರಾಜಕಾಲುವೆಗಳು ಮತ್ತು ಮೋರಿಗಳಲ್ಲಿನ ಕಸವನ್ನು ಎತ್ತುವ, ಶಿಥಿಲಾವಸ್ಥೆಯಲ್ಲಿರುವ ಮರಗಳನ್ನು ಗುರುತಿಸಿ ತೆರವು ಮಾಡುವ ಕೆಲಸಗಳೂ ಆಗಬೇಕಿದೆ. ಕೆಲವು ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿ ಅನಾಹುತ ಸಂಭವಿಸುವ ಮೊದಲು ಬಿಬಿಎಂಪಿ ಎಚ್ಚೆತ್ತುಕೊಳ್ಳಬೇಕು. ತುಂಬಾ ಮಳೆ ಬಂದಾಗ ಕೆಲ ಮನೆಗಳವರು ನಿದ್ದೆರಹಿತ ದಿನಗಳನ್ನು ಕಳೆಯಬೇಕಾಗುತ್ತದೆ.

ಮಳೆ ಒಂದು ಯುದ್ಧದ ರೀತಿಯಂತೆ, ಬಿಬಿಎಂಪಿಯವರು ಸೈನಿಕರಂತೆ. ಎಂತಹ ಪರಿಸ್ಥಿತಿಯನ್ನೂ ಎದುರಿಸಲು ಅವರು ಮಾನಸಿಕವಾಗಿ ಸಿದ್ಧರಾಗಿರಬೇಕು. ಹಣದ ಕೊರತೆಯಿದೆ, ಸಿಬ್ಬಂದಿಯ ಕೊರತೆ ಇದೆ ಎಂದೆಲ್ಲ ಕುಂಟುನೆಪ ಹೇಳುವುದನ್ನು ಬಿಡಬೇಕು.

**ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ,** ಬೆಂಗಳೂರು

### ಜಾರೋ ಕಾರಣ

ಇಂದಿನ ರಾಜಕಾರಣ
ಹೇಗಿದೆ ಅಂದರೆ,
ನೀವ್ಯಾಕೆ ಮಣ್ಣು
ತಿಂದಿರಿ ಅಂದರೆ,
ನೀವು ಮರಳು
ತಿಂದಿರಲಿಲ್ಲವೇ ಅಂತಾರೆ.

**ಮಲ್ಲಿಕಾರ್ಜುನ,** ಸುರಧೇನುಪುರ

### ಅದಕ್ಕೇ ಅಲ್ಲವೆ ಬಿಜೆಪಿಗೆ ಅಧಿಕಾರ ನೀಡಿದ್ದು?!

'ಭ್ರಷ್ಟಾಚಾರದ ಪರಂಪರೆಯನ್ನು ಪ್ರಾರಂಭಿಸಿದ್ದೇ ಕಾಂಗ್ರೆಸ್' ಎಂದಿದ್ದಾರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಪ್ರ.ವಾ., ಏ. 16). ಸರಿ, ಹಾಗೆಂದು ಆ ಭ್ರಷ್ಟಾಚಾರವು ಬಿಜೆಪಿ ನೇತೃತ್ವದ ಸರ್ಕಾರದಲ್ಲೂ ಮುಂದುವರಿಯಬಾರದಲ್ಲ! ಅಷ್ಟೇ ಅಲ್ಲದೆ ಈಗ ಬಿಜೆಪಿ ನೇತೃತ್ವದ ಸರ್ಕಾರದಲ್ಲೂ ಕೇಳಿಬರುತ್ತಿರುವ ಭ್ರಷ್ಟಾಚಾರಕ್ಕೂ ಇದು ಸಮರ್ಥನೆ ಆಗಬಾರದಲ್ಲ! ಕಾಂಗ್ರೆಸ್ ಹಾಗೆ ದುರಾಡಳಿತ ನೀಡಿದ್ದರಿಂದಲೇ ಅಲ್ಲವೇ ಮತದಾರರು ಆ ಪಕ್ಷವನ್ನು ತಿರಸ್ಕರಿಸಿ ಬಿಜೆಪಿಗೆ ಅಧಿಕಾರ ನೀಡಿದ್ದು? ಭ್ರಷ್ಟಾಚಾರದ ಆಪಾದನೆ ಕೇಳಿಬಂದಾಗ ಮುಖ್ಯಮಂತ್ರಿ ಅದರ ಮೂಲ ಹುಡುಕುತ್ತಾ ಹೋಗಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಬಾರದು. ಒಂದು ವೇಳೆ ಹಾಗೆ ಮಾಡಿದರೆ ಆಗ ಕಾಂಗ್ರೆಸ್‌ಗೂ ಬಿಜೆಪಿಗೂ ವ್ಯತ್ಯಾಸವೆಲ್ಲಿ ಉಳಿಯುತ್ತದೆ?

**ಹುರುಕಡ್ಲಿಶಿವಕುಮಾರ,** ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

### ವೈದ್ಯರ ಸಂಖ್ಯೆ ಹೆಚ್ಚಿದರಷ್ಟೇ ಸಾಲದು

ಮುಂದಿನ 10 ವರ್ಷಗಳಲ್ಲಿ ದಾಖಲೆಯ ಸಂಖ್ಯೆಯಲ್ಲಿ ವೈದ್ಯರ ಹೆಚ್ಚಳವಾಗಲಿದೆ ಎಂದು ಗುಜರಾತಿನ ಆಸ್ಪತ್ರೆಯೊಂದರ ಉದ್ಘಾಟನೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿರುವುದು ಆಶಾಭಾವನೆ ಮೂಡಿಸಿದೆ. ಇಂದು ಭಾರತದಲ್ಲಿ ಜನಸಂಖ್ಯೆಗೆ ತಕ್ಕಷ್ಟು ವೈದ್ಯರಿಲ್ಲ. ಈ ಕೊರತೆಯನ್ನು ನೀಗಿಸಲು ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಸ್ಥಾಪಿಸುವ ಸರ್ಕಾರದ ನೀತಿಯು ಸಮಂಜಸವಾಗಿದೆ. ಆದರೆ ಆರೋಗ್ಯ ಕ್ಷೇತ್ರದಲ್ಲಿ ನಾವು ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟಿದೆ. ಮೂಲ ಸೌಕರ್ಯ ಹಾಗೂ ಸಿಬ್ಬಂದಿಯ ಕೊರತೆ, ಗುಣಮಟ್ಟದ ಚಿಕಿತ್ಸೆಯ ಅಭಾವದಂತಹ ಕಾರಣಗಳಿಂದಾಗಿ ಸಾರ್ವಜನಿಕ ಆರೋಗ್ಯ ಸೇವೆಯ ಬಳಕೆ ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಜನರ ಸರಾಸರಿ ಆದಾಯದಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಮೊತ್ತವು ಆರೋಗ್ಯ ಸಂಬಂಧಿ ವೆಚ್ಚಕ್ಕೆ ವ್ಯಯವಾಗುತ್ತಿದೆ. ಈ ಸಂಬಂಧದ ದುಬಾರಿ ಖರ್ಚಿನಿಂದ ಹಲವರು ಬಡತನಕ್ಕೆ ದೂಡಲ್ಪಟ್ಟಿದ್ದಾರೆ. ಆರೋಗ್ಯ ವಿಮೆ ಸೌಲಭ್ಯ ಹೊಂದಿರುವವರು ಅತ್ಯಲ್ಪ ಮಂದಿ. ಹೀಗಾಗಿ ವೈದ್ಯರ ಸಂಖ್ಯೆ ಹೆಚ್ಚಳ ಮಾತ್ರವಲ್ಲದೆ ಇನ್ನೂ ಬಹಳಷ್ಟು ಸುಧಾರಣಾ ಕ್ರಮಗಳ ಅವಶ್ಯಕತೆ ಇದೆ.

**ಎ.ಜೆ.ಜಾವೀದ್,** ಹಾಸನ

### ಬದಲಾಗಲಿ ಉತ್ತರ ಪತ್ರಿಕೆಯ ಸ್ವರೂಪ

ಲಿಖಿತ ಪರೀಕ್ಷೆಗಳಲ್ಲಿ ಬಳಸಲಾಗುವ ಉತ್ತರ ಪತ್ರಿಕೆಗಳ ಮೂಲ ಸ್ವರೂಪ ಸಾಮಾನ್ಯವಾಗಿ ಒಂದೇ ರೀತಿ ಇರುತ್ತದೆ. ಮುಖಪುಟದಲ್ಲಿ ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲ ವಿವರಗಳು ಇರುತ್ತವೆ. ಜೊತೆಗೆ ಅದೇ ಪುಟದಲ್ಲಿ ಪ್ರತೀ ಪ್ರಶ್ನೆಗೆ ಪಡೆದ ಅಂಕಗಳನ್ನು ಅನುಕ್ರಮವಾಗಿ ನಮೂದಿಸಲು ಅನುಕೂಲವಾಗುವಂತೆ ಚೌಕಗಳನ್ನು ಮಾಡಿರುತ್ತಾರೆ. ಉತ್ತರ ಪತ್ರಿಕೆಯ ಪ್ರತೀ ಪುಟದಲ್ಲಿಂದ ಪಡೆದ ಅಂಕಗಳನ್ನು ಈ ಮುಖಪುಟದಲ್ಲಿ ನಮೂದಿಸುವುದು ಅನನುಕೂಲಕರವಾಗಿದೆ. ಪ್ರತೀ ಸಲ ಪುಟಗಳನ್ನು ತಿರುವಿ ತಿರುವಿ ಬರೆಯುವುದರಿಂದ ಸಮಯ ವ್ಯರ್ಥವಾಗುತ್ತದೆ. ಇದರ ಬದಲಿಗೆ ಉತ್ತರ ಪತ್ರಿಕೆಯ ಮುಖಪುಟದ ವಿನ್ಯಾಸವನ್ನು ಬದಲಿಸುವುದು ಸೂಕ್ತ.

ಮುಖಪುಟದ ಅಳತೆಯನ್ನು ಅರ್ಧದಷ್ಟು ಹೆಚ್ಚಿಸಬೇಕು. ಈ ಹೆಚ್ಚುವರಿ ಹಾಳೆಯ ಒಳಭಾಗದಲ್ಲಿ ಪ್ರತೀ ಪುಟದಲ್ಲಿ ಪಡೆದ ಅಂಕಗಳನ್ನು ನಮೂದಿಸುವಂತೆ ಆಗಬೇಕು. ಹೆಚ್ಚುವರಿ ಹಾಳೆಯನ್ನು ಒಳಭಾಗದಲ್ಲಿ ಮಡಿಸಬೇಕು. ಮೌಲ್ಯಮಾಪಕರಿಗೆ ಅನುಕೂಲವಾಗುವಂತೆ ಉತ್ತರ ಪತ್ರಿಕೆಗಳನ್ನು ಮುದ್ರಿಸುವುದರಿಂದ ಮೌಲ್ಯಮಾಪನ ಕಾರ್ಯ ಬಹಳ ವೇಗವಾಗಿ ಆಗಲು ಸಾಧ್ಯವಾಗುತ್ತದೆ.

**ಎಸ್.ಆರ್.ಬಿರಾದಾರ್,** ವಿಜಯಪುರ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿ ಭಾಗ–1

# ಆರ್‌ಬಿಐನಲ್ಲಿ ಹಸ್ತಕ್ಷೇಪ ಸರ್ಕಾರದ ನಿರಂತರ ಯತ್ನ

• ಸೋಮೇಶ್ ಝಾ

ಶ್ರೀಮಂತ ದೇಶಗಳಿಗೆ ಅನುಕೂಲವಾಗುವ ರೀತಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿ ದರ ನಿಗದಿ ಮಾಡುತ್ತಿದೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಹಣಕಾಸು ಸಚಿವಾಲಯದ ಹಿರಿಯ ಅಧಿಕಾರಿಗಳು, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದ ಒಂದು ವರ್ಷದ ಬಳಿಕ ಒತ್ತಾಯಿಸಿದ್ದರು. ರಿಪೋರ್ಟರ್ಸ್ ಕಲೆಕ್ಟಿವ್, ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದುಕೊಂಡ ದಾಖಲೆಗಳಿಂದ ಈ ಅಂಶವು ತಿಳಿದು ಬಂದಿದೆ.

ಬಡ್ಡಿದರವನ್ನು ಇಳಿಸುವ ಬದಲಿಗೆ ಸರಕುಗಳ ದರ ಏರಿಕೆಯನ್ನು ನಿಯಂತ್ರಿಸಲು ಆರ್‌ಬಿಐ ನಿರ್ಧರಿಸಿದ ಬಳಿಕ, ಹಣಕಾಸು ಕಾರ್ಯದರ್ಶಿ ರಾಜೀವ್ ಮಹರ್ಷಿ ಹೀಗೆ ಹೇಳಿದ್ದರು.

ಸರ್ಕಾರ ಮತ್ತು ಆರ್‌ಬಿಐ ಭಿನ್ನ ನಿಲುವು ಹೊಂದಿರುವುದು ಅಸಾಮಾನ್ಯ ಏನಲ್ಲ. ಆದರೆ, ಅಭಿವೃದ್ಧಿ ಹೊಂದಿದ ದೇಶಗಳ ‘ಬಿಳಿ ವ್ಯಕ್ತಿ’ಗಳಿಗಾಗಿ ಆರ್‌ಬಿಐ ಕೆಲಸ ಮಾಡುತ್ತಿದೆ. ಕೇಂದ್ರೀಯ ಬ್ಯಾಂಕ್‌ನ ನಿರ್ಧಾರಗಳ ಹಿಂದಿನ ‘ನಿಜವಾದ ಉದ್ದೇಶ’ದ ಬಗ್ಗೆ ತನಿಖೆ ಆಗಬೇಕು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ ಎಂಬುದು ಬಹಿರಂಗವಾಗಿರುವುದು ಇದೇ ಮೊದಲು.

2015ರಲ್ಲಿ ರಘುರಾಮ್ ರಾಜನ್ ಅವರು ಆರ್‌ಬಿಐ ಗವರ್ನರ್ ಆಗಿದ್ದರು. ರಘುರಾಮ್ ಅವರ ಉತ್ತರಾಧಿಕಾರಿಯಾಗಿ ಉರ್ಜಿತ್ ಪಟೇಲ್ ಅವರನ್ನು ಬಿಜೆಪಿ ಸರ್ಕಾರ ಆಯ್ಕೆ ಮಾಡಿತು. ಆದರೆ, ಉರ್ಜಿತ್ ನೇತೃತ್ವದ ಆರ್‌ಬಿಐ ಕೂಡ ಸರ್ಕಾರ ಬಯಸಿದ ಪ್ರಮಾಣದಲ್ಲಿ ಬಡ್ಡಿ ದರವನ್ನು ಕಡಿತ ಮಾಡಲಿಲ್ಲ. ಹಾಗಾಗಿ, ಹೊಸದಾಗಿ ರಚಿತವಾಗಿದ್ದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯನ್ನು ಹಣಕಾಸು ಸಚಿವಾಲಯವು ಕರೆಯಿತು. ಬಡ್ಡಿದರ ಕಡಿತ ಮಾಡುವಂತೆ ಒತ್ತಡ ಹೇರುವುದು ಸಭೆಯ ಉದ್ದೇಶ ಎಂದು ದಾಖಲೆಗಳು ಹೇಳುತ್ತಿವೆ. ಈ ಸಭೆಯು ನಡೆಯಲೇ ಇಲ್ಲ. ಏಕೆಂದರೆ, ಸಮಿತಿಯ ಸದಸ್ಯರು ಸಭೆಗೆ ಬರಲು ಒಪ್ಪಲಿಲ್ಲ. ಈ ವಿಚಾರವು 2017ರಲ್ಲಿ ವ್ಯಾಪಕವಾಗಿ ವರದಿಯಾಗಿತ್ತು.

ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆಗೆ 2016ರಲ್ಲಿಯೇ ಸರ್ಕಾರ ತಿದ್ದುಪಡಿ ತಂದಿತ್ತು. ಆರ್‌ಬಿಐನ ಪ್ರಾಥಮಿಕ ಕೆಲಸವಾದ ದರ ನಿಯಂತ್ರಣ ಮತ್ತು ಹಣದುಬ್ಬರಕ್ಕೆ ಕಾರಣವಾದರೂ ಅಭಿವೃದ್ಧಿಗೆ ಒತ್ತು ಕೊಡುವ ಸರ್ಕಾರದ ರಾಜಕೀಯ ಪ್ರೇರಣೆಗಳು ಒಂದರ ಮೇಲೊಂದು ಹಸ್ತಕ್ಷೇಪ ಮಾಡುವುದನ್ನು ತಡೆಯುವುದು ಇದರ ಉದ್ದೇಶವಾಗಿತ್ತು. ಹಾಗಿದ್ದರೂ ಮೋದಿ ನೇತೃತ್ವದ ಸರ್ಕಾರವು ಕೇಂದ್ರೀಯ ಬ್ಯಾಂಕ್‌ನ ಮೇಲೆ ಪ್ರಭಾವ ಬೀರುವ ಯತ್ನವನ್ನು ಮಾಡಿದೆ.

ಸರ್ಕಾರದ ಪ್ರಯತ್ನವನ್ನು ಹಿಮ್ಮೆಟ್ಟಿಸಲು ಉರ್ಜಿತ್ ಯತ್ನಿಸಿದ್ದರು. ಸಾರ್ವಜನಿಕರು ಮತ್ತು ಸಂಸತ್ತಿನ ಮುಂದೆ ಹೊಸ ಆರ್ಥಿಕ ಚೌಕಟ್ಟಿನ ‘ಬದ್ಧತೆ ಮತ್ತು ವಿಶ್ವಾಸಾರ್ಹತೆ’ಯನ್ನು ರಕ್ಷಿಸುವುದಕ್ಕಾಗಿ ಆರ್‌ಬಿಐ ಮೇಲೆ ಪ್ರಭಾವ ಬೀರುವುದನ್ನು ನಿಲ್ಲಿಸಬೇಕು ಎಂದು ಸರ್ಕಾರಕ್ಕೆ ಅವರು ಪತ್ರ ಬರೆದಿದ್ದರು.

ಭಿನ್ನಮತ ಬೆಳೆಯುತ್ತಲೇ ಹೋಯಿತು. ಉರ್ಜಿತ್ ಅವರು 2018ರ ಡಿಸೆಂಬರ್ 10ರಂದು ರಾಜೀನಾಮೆ ಕೊಟ್ಟರು. ಹಣಕಾಸು ಸಚಿವಾಲಯದ ಉನ್ನತ ಹುದ್ದೆಯಲ್ಲಿದ್ದ ಶಕ್ತಿಕಾಂತ ದಾಸ್ ಅವರನ್ನು ಉರ್ಜಿತ್ ಸ್ಥಾನಕ್ಕೆ ಸರ್ಕಾರ ನೇಮಿಸಿತು. ಆರ್‌ಬಿಐನ ದರ ನಿಗದಿ ಹೊಣೆಗಾರಿಕೆಯಲ್ಲಿ ಸರ್ಕಾರದ ಪ್ರಭಾವ ಹೆಚ್ಚಳವನ್ನು ದಾಸ್ ಸಮರ್ಥಿಸಿಕೊಂಡಿದ್ದಾರೆ ಎಂಬುದನ್ನು ಅಧಿಕೃತ ದಾಖಲೆಗಳು ಹೇಳುತ್ತವೆ.

**ಭಿನ್ನ ಪಾತ್ರಗಳು:** ತಾನು ಬ್ಯಾಂಕುಗಳಿಗೆ ನೀಡುವ ಸಾಲದ ಬಡ್ಡಿ ದರದ ಮೂಲಕ ಅರ್ಥ ವ್ಯವಸ್ಥೆಯಲ್ಲಿ ಇರುವ ಹಣದ ಮೊತ್ತ ಮತ್ತು ಸಾಲದ ಲಭ್ಯತೆಯನ್ನು ನಿಯಂತ್ರಿಸುವುದು ಆರ್‌ಬಿಐನ ಮುಖ್ಯ ಪಾತ್ರಗಳಲ್ಲಿ ಒಂದು. ಬಡ್ಡಿದರ ಕಡಿಮೆ ಇದ್ದರೆ ಅಲ್ಪಾವಧಿಯಲ್ಲಿ ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಆದರೆ, ಅದು ಹಣದುಬ್ಬರಕ್ಕೆ ಕಾರಣ ಆಗಬಹುದು. ನಿಯಂತ್ರಣವಿಲ್ಲದ ಹಣದುಬ್ಬರವು ಬಡಜನರ ಕೈಯಲ್ಲಿರುವ ಹಣದ ಮೌಲ್ಯವನ್ನು ಕುಗ್ಗಿಸುತ್ತದೆ. ಅಗೋಚರ ತೆರಿಗೆಯಂತಿರುವ ಇದು ಬಡವರು ಮತ್ತು ಕಡಿಮೆ ಆದಾಯದ ಜನರ ಮೇಲೆ ಪರಿಣಾಮ ಬೀರುತ್ತದೆ.

ಹಣಕಾಸು ನೀತಿಯನ್ನು ಸರ್ಕಾರದ ನಿಯಂತ್ರಣದಿಂದ ಹೊರಗೆ ಇರಿಸಲಾಗುತ್ತದೆ. ಏಕೆಂದರೆ, ಜನರನ್ನು ಓಲೈಸುವ ಮತ್ತು ಅರ್ಥಹೀನ ಯೋಜನೆಗಳಿಗಾಗಿ ತಮ್ಮ ಸಾಮರ್ಥ್ಯವನ್ನು ಮೀರಿ ರಾಜಕಾರಣಿಗಳು ಖರ್ಚು ಮಾಡುವ ಸಾಧ್ಯತೆ ಇರುವುದರಿಂದ ಹೀಗೆ ಮಾಡಲಾಗುತ್ತದೆ.

ಹಣದುಬ್ಬರ ಮತ್ತು ಬಡ್ಡಿದರ ನಿಗದಿಯು ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್ ಮತ್ತು ಸರ್ಕಾರಗಳ ನಡುವೆ ತಿಕ್ಕಾಟಕ್ಕೆ ಕಾರಣವಾಗಿದ್ದು ಇದೆ. 2014ರಲ್ಲಿ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಭಾರತದಲ್ಲಿ ಇದು ವಿಕಾರ ರೂಪ ಪಡೆದುಕೊಂಡಿತು. ಆ ಸಂದರ್ಭದಲ್ಲಿ, ಹಣದುಬ್ಬರ ತೀವ್ರವಾಗಿ ಏರಿಕೆಯಾಗಿದ್ದ ದೇಶಗಳಲ್ಲಿ ಭಾರತವೂ ಒಂದಾಗಿತ್ತು.

ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸು ವುದಕ್ಕಾಗಿ ಪಾರದರ್ಶಕ ಮತ್ತು ಉತ್ತರದಾಯಿಯಾದ ಹಣಕಾಸು ನೀತಿ ವ್ಯವಸ್ಥೆ ಜಾರಿಗೆ ತರುವುದಾಗಿ ಆಗಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಘೋಷಿಸಿದ್ದರು. ಆವರೆಗೆ ಬಡ್ಡಿದರವನ್ನು ನಿಗದಿ ಮಾಡುವುದು ಆರ್‌ಬಿಐ ಗವರ್ನರ್ ಹೊಣೆಯಾಗಿತ್ತು. ಈ ಪ್ರಕ್ರಿಯೆಯಲ್ಲಿ ಹಣದುಬ್ಬರವನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯ ಇರಲಿಲ್ಲ. ಜೇಟ್ಲಿ ಘೋಷಣೆಯು ಹಳೆಯ ನೀತಿಯನ್ನು ಬದಿಗಿಟ್ಟಿತು.

ಮಹರ್ಷಿ ಮತ್ತು ಆರ್‌ಬಿಐನ ಆಗಿನ ಗವರ್ನರ್ ರಘುರಾಮ್ ನಡುವೆ ಎಂಪಿಸಿ ರಚನೆಗಾಗಿ 2015ರ ಫೆಬ್ರುವರಿಯಲ್ಲಿ ಒಪ್ಪಂದ ಏರ್ಪಟ್ಟಿತು. ಇದೇ ಮೊದಲ ಬಾರಿಗೆ ಹಣದುಬ್ಬರ ನಿಯಂತ್ರಣದ ಹೊಣೆಯನ್ನು ಆರ್‌ಬಿಐಗೆ ನೀಡಲಾಯಿತು. 2016ರ ಜನವರಿ ಹೊತ್ತಿಗೆ ಹಣದುಬ್ಬರ ದರವನ್ನು ಶೇ 6ಕ್ಕೆ ಮತ್ತು ನಂತರದ ವರ್ಷಗಳಲ್ಲಿ ಶೇ 4ಕ್ಕೆ ಇಳಿಸುವುದು ಹಾಗೂ ಮುಂದೆ ಶೇ 2ರಿಂದ ಶೇ 6ರ ಒಳಗೆ ಇರುವಂತೆ ನೋಡಿಕೊಳ್ಳುವ ಹೊಣೆಯನ್ನು ವಹಿಸಲಾಯಿತು. ಈ ಗುರಿ ಮುಟ್ಟಲು ಆರ್‌ಬಿಐ ವಿಫಲವಾದರೆ, ಸರ್ಕಾರಕ್ಕೆ ವಿವರಣೆ ನೀಡಬೇಕು ಎಂಬುದು ಒಪ್ಪಂದದ ಸಾರವಾಗಿತ್ತು.

## ಒತ್ತಡ ತಂತ್ರ

ಉರ್ಜಿತ್ ಪಟೇಲ್ ಅವರು ಸರ್ಕಾರದ ಒತ್ತಡಕ್ಕೆ ಬಗ್ಗಲಿಲ್ಲ. ಹೀಗಾಗಿ, ಬಡ್ಡಿದರ ನಿಗದಿಪಡಿಸುವ ಆರ್‌ಬಿಐನ ಸ್ವತಂತ್ರ ಘಟಕವಾದ ಹಣಕಾಸು ನೀತಿ ಸಮಿತಿ (ಎಂಪಿಸಿ) ಮೇಲೆ ಪ್ರಭಾವ ಬೀರಲು ಹಣಕಾಸು ಸಚಿವಾಲಯವು ಯತ್ನಿಸಿತು. ಅಂದಿನ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ ಸುಬ್ರಮಣ್ಯನ್ ಹಾಗೂ ಅಂದಿನ ಪ್ರಧಾನ ಆರ್ಥಿಕ ಸಲಹೆಗಾರ ಸಂಜೀವ್ ಸನ್ಯಾಲ್ ಅವರು ಆರ್‌ಬಿಐನ ನಾಮನಿರ್ದೇಶಿತ ಮೂವರು ಸದಸ್ಯರ ಜೊತೆ ಸಭೆ ನಡೆಸಬೇಕು ಎಂಬುದಾಗಿ ಜೇಟ್ಲಿ ಹಾಗೂ ಅಂದಿನ ಹಣಕಾಸು ಕಾರ್ಯದರ್ಶಿ ಶಕ್ತಿಕಾಂತ್ ದಾಸ್ ನಡುವಿನ ಸಭೆಯಲ್ಲಿ ನಿರ್ಧರಿಸಲಾಗಿತ್ತು.




ಎಂಪಿಸಿ ಸದಸ್ಯರ ಜೊತೆ ಸಭೆ ನಡೆಸುವ ಕುರಿತಂತೆ ಅಂದಿನ ಹಣಕಾಸು ಕಾರ್ಯದರ್ಶಿ ಶಕ್ತಿಕಾಂತ್ ದಾಸ್ ಅವರು ಬರೆದಿದ್ದ ಆಂತರಿಕ ಟಿಪ್ಪಣಿ

ಗವರ್ನರ್ ಸೇರಿದಂತೆ ಆರ್‌ಬಿಐನ ಮೂವರು ಸದಸ್ಯರು ಹಾಗೂ ನಾಮನಿರ್ದೇಶಿತವಾದ ಮೂವರು ತಜ್ಞರು ಸಮಿತಿಯ ಸದಸ್ಯರಾಗಿರುತ್ತಾರೆ. ಸರ್ಕಾರವು ಬರಹದ ಮೂಲಕ ಮಾತ್ರ ತನ್ನ ಅಭಿಪ್ರಾಯವನ್ನು ಸಮಿತಿಯ ಮುಂದೆ ಇರಿಸಬಹುದು. ಸಮಿತಿಯ ಸದಸ್ಯರನ್ನು ಸರ್ಕಾರದ ಅಧಿಕಾರಿಗಳು ಭೇಟಿಯಾಗುವಂತಿಲ್ಲ, ಅವರ ಮೇಲೆ ಯಾವ ರೀತಿಯಲ್ಲೂ ಪ್ರಭಾವ ಬೀರುವಂತಿಲ್ಲ.

ಈ ನಿಯಮವನ್ನು ಉಲ್ಲಂಘಿಸಿ, 2017ರ ಮೇ 17ರಂದು ಹಣಕಾಸು ಸಚಿವಾಲಯವು ಪ್ರತಿಯೊಬ್ಬ ಎಂಪಿಸಿ ಸದಸ್ಯರಿಗೆ ಪತ್ರ ಬರೆದಿತ್ತು. ಹಣದುಬ್ಬರ, ಆರ್ಥಿಕ ಬೆಳವಣಿಗೆ ಮೊದಲಾದ ವಿಚಾರಗಳ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ತಿಳಿಸಲು ಎಂಪಿಸಿ ಸದಸ್ಯರ ಜೊತೆ ಕಾಲಕಾಲಕ್ಕೆ ಸಂಪರ್ಕ ಸಾಧಿಸಲಿದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ಸಮಿತಿಯ ಸಭೆಗೂ ಮುನ್ನ, ಅಂದರೆ, 2017ರ ಜೂನ್ 1ರಂದು ಸುಬ್ರಮಣ್ಯನ್ ಅವರು ಆರ್‌ಬಿಐ ಹೊರಗಿನ ಮೂವರು ತಜ್ಞ ಸದಸ್ಯರನ್ನು ಭೇಟಿಗೆ ಬರುವಂತೆ ಕರೆದಿದ್ದರು.

ಉರ್ಜಿತ್ ಅವರಿಗೆ ಬರೆದ ಪ್ರತ್ಯೇಕ ಪತ್ರದಲ್ಲಿ, ಎಂಪಿಸಿ ಸಭೆಯ ಕುರಿತು ಆರ್‌ಬಿಐ ಅಧಿಕಾರಿಗಳ ಜೊತೆ ಮಾತುಕತೆ ನಡೆಸುವಂತೆ ಹಣಕಾಸು ಸಚಿವಾಲಯ ನಿರ್ಧಾರ ತೆಗೆದುಕೊಂಡಿದೆ ಎಂಬ ಮಾಹಿತಿಯನ್ನು ನೀಡಲಾಗಿತ್ತು. ದೇಶದ ಆರ್ಥಿಕ ಸ್ಥಿತಿಗತಿ ಹಾಗೂ ಜಾಗತಿಕ ಆರ್ಥಿಕ ಬೆಳವಣಿಗೆಗಳ ಬಗ್ಗೆ ಮುಖ್ಯ ಆರ್ಥಿಕ ಸಲಹೆಗಾರರು ಚರ್ಚೆ ನಡೆಸಲಿದ್ದಾರೆ ಎಂದು ಮತ್ತೊಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಸ್ವತಂತ್ರ ಹಣಕಾಸು ನೀತಿ ಸಮಿತಿ ಸ್ಥಾಪಿಸುವ ಆರ್‌ಬಿಐ ಕಾಯ್ದೆಯ ಆಶಯಕ್ಕೆ ಇದು ವಿರುದ್ಧವಾಗಿದೆ ಎಂಬುದನ್ನು ಉರ್ಜಿತ್ ಒತ್ತಿ ಹೇಳಿದ್ದರು. ಒಕ್ಕೂಟ ಸರ್ಕಾರವು ತನ್ನ ಅಭಿಪ್ರಾಯವನ್ನು ಬರಹದ ಮೂಲಕ ತಿಳಿಸಬಹುದು. ಬೇರಾವ ವಿಧದಲ್ಲಿ ಅಭಿಪ್ರಾಯ ತಿಳಿಸಿದರೂ ಅದು ಕಾನೂನಿನ ಉಲ್ಲಂಘನೆಯಾಗುತ್ತದೆ ಎಂಬುದನ್ನು ಜೇಟ್ಲಿಗೆ ನೆನಪಿಸಿದ್ದರು.

‘ಹಣಕಾಸು ಸಚಿವಾಲಯ ಹಾಗೂ ಎಂಪಿಸಿ ಸದಸ್ಯರ ನಡುವಿನ ಮಾತುಕತೆಯನ್ನು ಆರ್‌ಬಿಐ ಕಾಯ್ದೆಯ ಉಲ್ಲಂಘನೆ ಎಂದು ವ್ಯಾಖ್ಯಾನಿಸಬಾರದು. ಅಂತಿಮವಾಗಿ ದೇಶದ ಆರ್ಥಿಕತೆಯ ನಿರ್ವಹಣೆಯ ಹೊಣೆಗಾರಿಕೆಯು ಹಣಕಾಸು ಸಚಿವಾಲಯದ್ದಾಗಿರುತ್ತದೆ’ ಎಂದು ಶಕ್ತಿಕಾಂತ್ ದಾಸ್ ಅವರು 2017ರ ಮೇ 29ರಂದು ಬರೆದಿದ್ದ ಆಂತರಿಕ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದರು. ಹಣಕಾಸು ಸಚಿವಾಲಯವು ಆರ್ಥಿಕತೆ ಕುರಿತು ನಡೆಸುವ ವಿಶ್ಲೇಷಣೆಯನ್ನು ಎಂಪಿಸಿ ಸದಸ್ಯರಿಗೆ ಕಳುಹಿಸುವುದಕ್ಕೆ ದಾಸ್ 2017ರಲ್ಲಿ ಒಪ್ಪಿಗೆ ನೀಡಿದ್ದರು. ಸರ್ಕಾರದ ನಿಲುವನ್ನೇ ಪ್ರತಿಪಾದಿಸುತ್ತಿದ್ದ ದಾಸ್ ಅವರನ್ನು, ಉರ್ಜಿತ್ ಪಟೇಲ್ ರಾಜೀನಾಮೆ ನೀಡಿದ 24 ಗಂಟೆಗಳ ಒಳಗಾಗಿ ಆರ್‌ಬಿಐ ಗವರ್ನರ್ ಹುದ್ದೆಗೆ ನೇಮಿಸಲಾಯಿತು.



ಶಕ್ತಿಕಾಂತ್ ದಾಸ್

## ‘ವಿದೇಶದ ಶ್ರೀಮಂತರಿಗೆ ಸಹಾಯಧನ’

ಹಣದುಬ್ಬರದ ಕಾರಣದಿಂದಾಗಿ, 2014ರಲ್ಲಿ ರೆಪೊ ದರವನ್ನು (ಬ್ಯಾಂಕುಗಳಿಗೆ ಆರ್‌ಬಿಐ ನೀಡುವ ಸಾಲದ ಮೇಲಿನ ಬಡ್ಡಿದರ) ಶೇ 8ರ ದರದಲ್ಲಿಯೇ ರಘುರಾಮ್ ಉಳಿಸಿಕೊಂಡಿದ್ದರು. 2015ರಲ್ಲಿ ಹಣದುಬ್ಬರದ ಒತ್ತಡ ಕುಗ್ಗಿತು. ಹೀಗಾಗಿ, ರೆಪೊ ದರವನ್ನು ಶೇ 7.25ಕ್ಕೆ ಇಳಿಸಲಾಯಿತು. ಈ ಇಳಿಕೆಯು ಸರ್ಕಾರಕ್ಕೆ ತೃಪ್ತಿ ತಂದಿರಲಿಲ್ಲ. ಜೇಟ್ಲಿ ಮತ್ತು ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ ಸುಬ್ರಮಣ್ಯನ್ ಅವರು ಆರ್‌ಬಿಐಯನ್ನು ಪದೇ ಪದೇ ಟೀಕಿಸುತ್ತಲೇ ಇದ್ದರು. ಸಾಲದ ದರವು ಬಹಳ ಹೆಚ್ಚು ಎಂಬುದು ಅವರ ಆಕ್ಷೇಪವಾಗಿತ್ತು.

ಪರದೆಯ ಹಿಂದೆ, ಭಾರಿ ಒತ್ತಡ ಹೇರಲಾಗುತ್ತಿದೆ ಎಂಬುದರ ಸುಳಿವನ್ನು ಈ ಬಹಿರಂಗ ಟೀಕೆಯು ನೀಡಿತು ಎಂಬುದನ್ನು ದಾಖಲೆಗಳು ಹೇಳುತ್ತವೆ.

2015ರ ಆಗಸ್ಟ್ 6ರಂದು, ಆರ್‌ಬಿಐ ದರ ನಿಗದಿ ನಿರ್ಧಾರ ಪ್ರಕಟಿಸಿ ಎರಡು ದಿನಗಳ ಬಳಿಕ, ಮಹರ್ಷಿ ಅವರು ಆಂತರಿಕ ಟಿಪ್ಪಣಿಯೊಂದರಲ್ಲಿ ಬಡ್ಡಿ ದರವನ್ನು ಶೇ 5.75ಕ್ಕೆ ಇಳಿಸಬೇಕು ಎಂದಿದ್ದರು. ಭಾರತದ ಉದ್ಯಮ ಮತ್ತು ಜನರನ್ನು ಬಲಿಕೊಟ್ಟು ವಿದೇಶದ ಶ್ರೀಮಂತ ಉದ್ಯಮಗಳಿಗೆ ಆರ್‌ಬಿಐ ನೆರವು ನೀಡುತ್ತಿದೆ. ಭಾರತದ ಅತಿಯಾದ ಬಡ್ಡಿದರದ ‘ಫಲಾನುಭವಿಗಳು’ ಶ್ರೀಮಂತ ದೇಶಗಳು ಮಾತ್ರ ಎಂದು ಟಿಪ್ಪಣಿಯಲ್ಲಿ ಮಹರ್ಷಿ ಆರೋಪಿಸಿದ್ದರು.

ಶ್ರೀಮಂತ ದೇಶಗಳಲ್ಲಿ ಬಡ್ಡಿದರವು ಭಾರತಕ್ಕಿಂತ ಕಡಿಮೆ ಇರುತ್ತದೆ. ಹಾಗಾಗಿ, ಅಲ್ಲಿನ ಹೂಡಿಕೆದಾರರು ತಮ್ಮ ಹಣವನ್ನು ಭಾರತದ ಹಣಕಾಸು ಸಂಸ್ಥೆಗಳಲ್ಲಿ ತಾತ್ಕಾಲಿಕವಾಗಿ ಇರಿಸಿ ಲಾಭ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ತನಿಖೆ ಆಗಬೇಕು ಎಂದು ಮಹರ್ಷಿ ಒತ್ತಾಯಿಸಿದ್ದರು. ಈ ಒತ್ತಾಯದ ಮೇಲೆ ‘ಚರ್ಚೆ ಅಗತ್ಯವಿದೆ’ ಎಂಬ ಟಿಪ್ಪಣಿಯನ್ನು ಆಗ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ಬರೆದಿದ್ದರು.

ರಘುರಾಮ್ ನಿರ್ಗಮನವಾಗಿ ಉರ್ಜಿತ್ ಅವರು ಗವರ್ನರ್ ಹುದ್ದೆಗೇರಿದ ಬಳಿಕ 2016ರ ಸೆಪ್ಟೆಂಬರ್‌ನಲ್ಲಿ ಎಂಪಿಸಿ ಜಾರಿಗೆ ಬಂತು. ತಿಂಗಳ ಬಳಿಕ ನಡೆದ ಎಂಪಿಸಿ ಸಭೆಯಲ್ಲಿ ಬಡ್ಡಿದರವನ್ನು ಶೇ 0.25ರಷ್ಟು ಕಡಿತ ಮಾಡಲಾಯಿತು. ನೋಟು ರದ್ದತಿಯ ನಿರ್ಧಾರಕ್ಕೆ, ಆರ್‌ಬಿಐ ಆಡಳಿತ ಮಂಡಳಿಯು ಉರ್ಜಿತ್ ಅಧ್ಯಕ್ಷತೆಯಲ್ಲಿ ನವೆಂಬರ್‌ನಲ್ಲಿ ನಡೆಸಿದ ಸಭೆಯು ಅನುಮೋದನೆ ನೀಡಿತು.

‘ದೇಶದ ಅತ್ಯಂತ ದೊಡ್ಡ ಆರ್ಥಿಕ ದುರಂತಕ್ಕೆ ಮೋದಿ ಅವರು ಆರ್‌ಬಿಐನಿಂದ ಬಲವಂತವಾಗಿ ಅನುಮೋದನೆ ಪಡೆದುಕೊಳ್ಳಲು ಉರ್ಜಿತ್ ಕಾರಣರಾದರು. ಈ ಮೂಲಕ, ಕೇಂದ್ರೀಯ ಬ್ಯಾಂಕ್‌ನ ಸ್ವಾಯತ್ತೆಗೆ ಧಕ್ಕೆ ಮಾಡಲಾಯಿತು’ ಎಂದು ಕೆಲವು ಅರ್ಥಶಾಸ್ತ್ರಜ್ಞರು ಟೀಕಿಸಿದ್ದಾರೆ.

2017ರ ಫೆಬ್ರುವರಿಯಲ್ಲಿ ನಡೆದ ಸಭೆಯಲ್ಲಿ ಎಂಪಿಸಿ ನಿಲುವು ಬದಲಾಯಿತು. ಹೊಂದಾಣಿಕೆಯ ನಿಲುವಿನ ಬದಲು ತಟಸ್ಥ ನಿಲುವಿಗೆ ಎಂಪಿಸಿ ಹೊರಳಿಕೊಂಡಿತು. ದರ ಕಡಿತಕ್ಕೆ ಇನ್ನು ಮುಂದೆ ಸಿದ್ಧವಿಲ್ಲ ಎಂಬ ಸಂದೇಶವನ್ನು ಹಣಕಾಸು ಮಾರುಕಟ್ಟೆಗೆ ಈ ನಿಲುವು ಸಾರಿತು.



ರಘುರಾಮ್ ರಾಜನ್

(ರಿಪೋರ್ಟರ್ಸ್ ಕಲೆಕ್ಟಿವ್‌ನ ಈ ವರದಿಯ ಇಂಗ್ಲಿಷ್ ಅವತರಣಿಕೆಯು ‘ಅಲ್ ಜಝೀರಾ’ದಲ್ಲಿ ಪ್ರಕಟವಾಗಿದೆ)

## ‘ಹಣಕಾಸು ನೀತಿ’ಯ ಹಾದಿ

**2014 ಜುಲೈ**
ಆಧುನಿಕ ನೀತಿ ಚೌಕಟ್ಟು ರೂಪಿಸುವುದಾಗಿ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಘೋಷಣೆ

**2015 ಫೆ.**
ಆರ್‌ಬಿಐ ಹಾಗೂ ಸರ್ಕಾರದ ನಡುವೆ ಒಪ್ಪಂದಕ್ಕೆ ಸಹಿ

**2015 ಫೆ.**
ಹಣಕಾಸು ನೀತಿ ಸಮಿತಿ ಸ್ಥಾಪಿಸುವ ಉದ್ದೇಶದಿಂದ ಕಾಯ್ದೆಗೆ ತಿದ್ದುಪಡಿ ತರಲು ಹಣಕಾಸು ಕಾರ್ಯದರ್ಶಿ ರಾಜೀವ್ ಮಹರ್ಷಿ ನಿರ್ಧಾರ

**2015 ಆ.**
ಆರ್‌ಬಿಐ ಶ್ರೀಮಂತ ದೇಶಗಳಿಗೆ ಅನುಕೂಲ ಮಾಡುತ್ತಿದೆ ಎಂದು ಆರೋಪಿಸಿ ರಾಜೀವ್ ಮಹರ್ಷಿ ಅವರಿಂದ ಆಂತರಿಕ ಟಿಪ್ಪಣಿ ಬರಹ

**2016 ಸೆ.**
ರಘುರಾಮ್ ರಾಜನ್ ಅವರ ಅವಧಿ ಪೂರ್ಣಗೊಂಡಿದ್ದರಿಂದ, ಆರ್‌ಬಿಐ ಗವರ್ನರ್ ಆಗಿ ಉರ್ಜಿತ್ ಪಟೇಲ್ ನೇಮಕ

**2016 ಅ.**
ಪಟೇಲ್ ಅಧಿಕಾರ ವಹಿಸಿಕೊಂಡ ಬಳಿಕದ ಮೊದಲ ಎಂಪಿಸಿ ಸಭೆಯಲ್ಲಿ ಶೇ 0.25ರಷ್ಟು ಬಡ್ಡಿದರ ಇಳಿಕೆ

**2016 ನ.**
ನೋಟು ರದ್ದತಿ ಮಾಡುವ ಸರ್ಕಾರದ ಶಿಫಾರಸಿಗೆ ಆರ್‌ಬಿಐ ಒಪ್ಪಿಗೆ

**2016 ಡಿ.**
ಹಣಕಾಸು ನೀತಿ ನಿಲುವಿನಲ್ಲಿ ಬದಲಾವಣೆ ತಂದ ಎಂಪಿಸಿ; ಹೊಂದಾಣಿಕೆ ಬದಲು ತಟಸ್ಥ ನಿಲುವು ಘೋಷಣೆ

**2017 ಏ.**
ಅರುಣ್ ಜೇಟ್ಲಿ ಹಾಗೂ ಅಂದಿನ ಹಣಕಾಸು ಕಾರ್ಯದರ್ಶಿ ಶಕ್ತಿಕಾಂತ್ ದಾಸ್ ಸಭೆ; ಎಂಪಿಸಿ ಸದಸ್ಯರಿಗೆ ಸಭೆಗೆ ಬರುವಂತೆ ಸೂಚಿಸುವ ಬಗ್ಗೆ ಚರ್ಚೆ

**2017 ಮೇ**
ಎಂಪಿಸಿ ಸದಸ್ಯರ ನಡುವೆ ಸಂವಹನ ವ್ಯವಸ್ಥೆಯೊಂದನ್ನು ರೂಪಿಸುವ ಉದ್ದೇಶವನ್ನು ಆರ್‌ಬಿಐಗೆ ತಿಳಿಸಿದ ಹಣಕಾಸು ಸಚಿವಾಲಯ

**2017 ಮೇ**
ಇದನ್ನು ಬಲವಾಗಿ ವಿರೋಧಿಸಿ ಜೇಟ್ಲಿಗೆ ಪತ್ರ ಬರೆದ ಉರ್ಜಿತ್ ಪಟೇಲ್; ಸಭೆ ನಡೆಸುವ ಕೋರಿಕೆಯನ್ನು ಆಂತರಿಕ ಟಿಪ್ಪಣಿಯಲ್ಲಿ ಸಮರ್ಥಿಸಿಕೊಂಡ ಶಕ್ತಿಕಾಂತ್ ದಾಸ್

**2017 ಜೂನ್**
ಬಡ್ಡಿದರ ಯಥಾಸ್ಥಿತಿ ಘೋಷಿಸಿದ ಆರ್‌ಬಿಐ; ಸಭೆ ನಡೆಸುವ ಹಣಕಾಸು ಸಚಿವಾಲಯದ ಕೋರಿಕೆಯನ್ನು ತಿರಸ್ಕರಿಸಿದ ವಿಚಾರವನ್ನು ಮಾಧ್ಯಮಗಳಿಗೆ ತಿಳಿಸಿದ ಉರ್ಜಿತ್

**2018 ಡಿ.**
ವೈಯಕ್ತಿಕ ಕಾರಣ ನೀಡಿ ಉರ್ಜಿತ್ ಪಟೇಲ್ ರಾಜೀನಾಮೆ; ತೆರವಾದ ಗವರ್ನರ್ ಸ್ಥಾನಕ್ಕೆ ಶಕ್ತಿಕಾಂತ್ ದಾಸ್ ನೇಮಕ

## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 97

### ವಿಶ್ವಕರ್ಮನಿಂದ ಲಿಂಗನಿರ್ಮಾಣ

ಶಿವಮಹಾಪುರಾಣದಲ್ಲಿ ಎರಡನೆ ಸಂಹಿತೆಯಾದ ರುದ್ರಸಂಹಿತೆಯಲ್ಲಿ ಮೊದಲ ಖಂಡವಾದ ಸೃಷ್ಟಿಖಂಡದಲ್ಲಿ ಪೂಜಾವಿಧಿವರ್ಣನದಲ್ಲಿಯ ಸಾರಾಸಾರ ವಿಚಾರವರ್ಣನ ಎಂಬ ಹನ್ನೆರಡನೆ ಅಧ್ಯಾಯವಿದೆ. ಇದರಲ್ಲಿ ನಾರದ-ಬ್ರಹ್ಮರ ಸಂವಾದದಲ್ಲಿ ನಾರದ ತನ್ನ ತಂದೆಯಾದ ಬ್ರಹ್ಮನಲ್ಲಿ ಶಿವನನ್ನು ಕುರಿತು ವಿಸ್ತಾರವಾಗಿ ತಿಳಿಸುವಂತೆ ಕೋರುತ್ತಾನೆ.

ಆಗ ಬ್ರಹ್ಮ ‘ವತ್ಸ ನಾರದ, ಹಿಂದೊಮ್ಮೆ ನಾನು ಎಲ್ಲ ದೇವತೆಗಳನ್ನೂ ಋಷಿಗಳನ್ನೂ ಕರೆದು, ಯಾರು ನಿತ್ಯಸುಖವನ್ನು ಮತ್ತು ಸಿದ್ಧಿಯನ್ನು ಪಡೆಯಲು ಇಚ್ಛಿಸುವಿರೋ, ಅವರೆಲ್ಲರೂ ನನ್ನೊಡನೆ ಕ್ಷೀರಸಮುದ್ರದ ತೀರಕ್ಕೆ ಬನ್ನಿ ಎಂದೆ.

‘ತನ್ನ ಮುಂದೆ ನಿಂತ ಬ್ರಹ್ಮಾದಿದೇವತೆಗಳನ್ನು ಕಂಡು, ಶಿವನ ಪಾದಕಮಲ ಗಳನ್ನು ನೆನೆಯುತ್ತಾ ವಿಷ್ಣುವು ‘ಎಲೈ ಬ್ರಹ್ಮಾದಿ ದೇವತೆಗಳಿರಾ, ನೀವಿಲ್ಲಿಗೆ ಬಂದ ಕಾರಣವೇನು? ಈಗ ಯಾವ ಕೆಲಸ ನನ್ನಿಂದಾಗಬೇಕಾಗಿದೆ?’ ಎಂದು ಕೇಳಿದ. ಇದಕ್ಕೆ ಬ್ರಹ್ಮ ‘ನಮ್ಮೆಲ್ಲರ ದುಃಖಗಳನ್ನು ಪರಿಹರಿಸಿಕೊಳ್ಳಲು ಯಾರನ್ನು ಸೇವಿಸಬೇಕು? ಅದನ್ನು ತಿಳಿಸಬೇಕು’ ಎಂದೆ.

ಭಕ್ತವತ್ಸಲನಾದ ಆ ವಿಷ್ಣು ಭಗವಂತನು ‘ಎಲೈ ಬ್ರಹ್ಮನೇ, ನಾನಾ ವಿಧವಾದ ಕೆಲಸಗಳಲ್ಲಿ ತೊಡಗಿರುವ ಈ ದೇವತೆಗಳೆಲ್ಲರ ದುಃಖಗಳನ್ನು ನಾಶಮಾಡುವ ಶಂಕರನನ್ನು ಸದಾ ಸೇವಿಸಬೇಕು. ಸುಖವಾಗಿರಬೇಕೆನ್ನುವವರು ಶಿವನ ಪೂಜೆಯನ್ನು ಬಿಡಬಾರದು. ದೇವದೇವನೂ, ಲಿಂಗವೇ ಶರೀರವಾಗಿ ಉಳ್ಳವನೂ ಆದ ಆ ಶಿವನನ್ನು ಮರೆತ ತಾರನ ಮಕ್ಕಳೆಲ್ಲರೂ ತಮ್ಮ ಬಂಧುಗಳೊಡನೆ ನಾಶವಾದರು. ಮಾಯೆಯಿಂದ ಮೋಹಿತರಾಗಿ ಅವರು ಯಾವಾಗ ಶಿವನನ್ನು ಮರೆತು ಬಿಟ್ಟರೋ, ಆಗ ಅವರೆಲ್ಲರೂ ನನ್ನಿಂದ ಮೋಹಿತರಾಗಿ ಧ್ವಂಸರಾಗಿಹೋದರು. ಆದುದರಿಂದ ಆ ಲಿಂಗಾಕೃತಿಯನ್ನು ತಳೆದ ದೇವ ಶ್ರೇಷ್ಠವಾದ ಆ ಶಿವನನ್ನು ಶ್ರದ್ಧೆಯಿಂದ ಯಾವಾಗಲೂ ಸೇವಿಸುತ್ತಿರಬೇಕು.

‘ಎಲೈ ಬ್ರಹ್ಮನೇ, ಶಿವನ ಲಿಂಗವನ್ನು ಪೂಜಿಸುವುದರಿಂದಲೇ ಅಲ್ಲವೇ ದೇವತೆಗಳೂ ದೈತ್ಯರೂ ನಾನೂ ನೀನೂ, ಎಲ್ಲರೂ ಸಾಧುವರೇಣ್ಯರೆನಿಸಿಕೊಂಡಿರುವುದು? ಎಲ್ಲ ಕೋರಿಕೆಗಳನ್ನೂ ಪಡೆಯಬೇಕೆನ್ನುವ ಪ್ರತಿಯೊಬ್ಬ ದೇವತೆಯೂ, ಒಂದಲ್ಲ ಒಂದು ಕಾರಣದಿಂದ ಪ್ರತಿನಿತ್ಯವೂ ಶಿವಲಿಂಗವನ್ನು ಪೂಜಿಸಲೇಬೇಕು. ಮುಹೂರ್ತ ಮಾತ್ರವಾಗಲಿ, ಕ್ಷಣಕಾಲವಾಗಲಿ ಶಿವನನ್ನು ಪೂಜಿಸದಿದ್ದರೆ ಅದಕ್ಕಿಂತಲೂ ಬೇರೆ ಹಾನಿಯಿಲ್ಲ. ಅದೇ ಮಹಾಛಿದ್ರವು. ಅದೇ ಅವಿವೇಕವು. ಅದೇ ಬುದ್ಧಿಮಾಂದ್ಯವೆಂದು ತಿಳಿ. ಐಹಿಕ ಭೋಗಭಾಗ್ಯಗಳನ್ನು, ಮುಕ್ತಿಯನ್ನ ಬಯಸುವವರು, ನಿತ್ಯವೂ ಭಕ್ತಿಯೊಡಗೂಡಿ ಶಿವಲಿಂಗ ವನ್ನು ಪೂಜಿಸಬೇಕು. ಅವರಿಗೆ ಎಲ್ಲ ಸಿದ್ಧಿಗಳೂ ಕೈಗೂಡುವವು. ಅವರಿಗೆ ಪಾಪಗಳ ಸಂಪರ್ಕವೇ ಇರುವುದಿಲ್ಲ’ ಎಂದು ವಿವರಿಸುತ್ತಾನೆ ವಿಷ್ಣು.

ಹರಿಯ ಮಾತನ್ನು ಕೇಳಿದ ದೇವತೆಗಳೆಲ್ಲರೂ ಆತನಿಗೆ ನಮಸ್ಕರಿಸಿ, ಮನುಷ್ಯರಾದಿಯಾಗಿ ನಾವೆಲ್ಲಾ ಬಯಸಿದುದೆಲ್ಲವನ್ನೂ ಪಡೆಯಲು ಅನುಕೂಲ ವಾಗುವಂತೆ ಲಿಂಗಗಳನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಆಗ ವಿಷ್ಣುವೂ ವಿಶ್ವಕರ್ಮನನ್ನು ಕರೆದು, ‘ಶಂಭುವಿನ ಶುಭಕರವಾದ ಲಿಂಗಗಳನ್ನು ನಿರ್ಮಿಸಿ ಕೊಡು’ ಎಂದ. ವಿಶ್ವಕರ್ಮನು ವಿಷ್ಣುವಿನ ಅಪ್ಪಣೆಯಂತೆ ಅವರವರ ಅಂತಸ್ತಿಗೆ ತಕ್ಕಂತೆ ಲಿಂಗಗಳನ್ನು ಮಾಡಿ ಕೊಟ್ಟ. ಇಂದ್ರನು ಕೆಂಪಿನಿಂದ ಮಾಡಿದ ಲಿಂಗವನ್ನು ಪಡೆದರೆ, ಕುಬೇರನು ಚಿನ್ನದ ಲಿಂಗವನ್ನೂ, ಯಮಧರ್ಮನು ಹಳದಿ ಕಲ್ಲಿನ ಲಿಂಗವನ್ನೂ (ಗೋಮೇಧಿಕ), ವರುಣನು ನೀಲಮಣಿಯ ಲಿಂಗವನ್ನೂ, ವಿಷ್ಣುವು ಇಂದ್ರನೀಲಮಣಿ ಲಿಂಗವನ್ನೂ, ಬ್ರಹ್ಮನು ಚಿನ್ನದ ಲಿಂಗವನ್ನೂ ಪಡೆದರು. ವಿಶ್ವದೇವತೆಗಳು ಬೆಳ್ಳಿಯ ಲಿಂಗವನ್ನೂ, ವಸುಗಳೆಂಬುವರು ಹಿತ್ತಾಳೆಯ ಲಿಂಗವನ್ನೂ, ಅಶ್ವಿನೀ ದೇವತೆಗಳು ಮಣ್ಣಿನ ಲಿಂಗವನ್ನು ಪಡೆದರು. ಲಕ್ಷ್ಮಿಯು ಸ್ಫಟಿಕದ ಲಿಂಗವನ್ನೂ, ದ್ವಾದಶಾದಿತ್ಯರು ತಾಮ್ರದ ಲಿಂಗವನ್ನೂ, ಚಂದ್ರನು ಮುತ್ತಿನ ಲಿಂಗವನ್ನೂ, ಅಗ್ನಿಯು ವಜ್ರದ ಲಿಂಗವನ್ನೂ ಪಡೆದರು. ಸಜ್ಜನರು ಮತ್ತವರ ಪತ್ನಿಯರು ಮಣ್ಣಿನ ಲಿಂಗವನ್ನೂ, ಮಯನು ಶ್ರೀಗಂಧದ ಲಿಂಗವನ್ನೂ, ನಾಗರಾಜನು ಹವಳದ ಲಿಂಗವನ್ನೂ ಸ್ವೀಕರಿಸಿದ.

ಪಾರ್ವತಿಯು ಬೆಣ್ಣೆಯ ಲಿಂಗವನ್ನೂ, ಯೋಗಿಯು ಭಸ್ಮದಿಂದ ಮಾಡಿದ ಲಿಂಗವನ್ನೂ, ಯಕ್ಷರು ಮೊಸರಿನ ಲಿಂಗವನ್ನೂ, ಛಾಯೆಯು ಹಿಟ್ಟಿನ ಲಿಂಗವನ್ನೂ, ವಾಗ್ದೇವಿಯು ರತ್ನಮಯವಾದ ಲಿಂಗವನ್ನೂ, ಬಾಣಾಸುರನು ಪಾದರಸದ ಲಿಂಗವನ್ನೂ, ಇತರರು ಮಣ್ಣಿನ ಲಿಂಗವನ್ನೂ ಪಡೆದರು ಎಂದು ಬ್ರಹ್ಮ ತಿಳಿಸಿದ.

## ಗುಂಡಣ್ಣ

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಲೋಕನಾಟಕ

**ಕೈಕೇಯಿವೊಲು ಮಾತೆ, ಸತ್ಯಭಾಮೆವೊಲು ಸತಿ |**
**ಸಾಕಿ ಸಂತಸವೆರೆಯೆ ಸಂಸಾರ ಲೀಲೆ ||**
**ಬೇಕು ಮತ್ಸರ ಮಮತೆ ಮೋಹಂಗಳಾವೇಶ |**
**ಲೋಕನಾಟಕಕಾಗಿ – ಮಂಕುತಿಮ್ಮ || 608 ||**

**ಪದ-ಅರ್ಥ:** ಕೈಕೇಯಿವೊಲು = ಕೈಕೇಯಿಯ ಹಾಗೆ, ಸಂತಸವೆರೆಯೆ = ಸಂತಸವ + ಎರೆಯೆ, ಮೋಹಂಗಳಾವೇಶ = ಮೋಹಂಗಳ(ಮೋಹಗಳ) + ಆವೇಶ,

**ವಾಚ್ಯಾರ್ಥ:** ಕೈಕೇಯಿಯಂತಹ ತಾಯಿ, ಸತ್ಯಭಾಮೆಯಂತಹ ಹೆಂಡತಿ ಸಂತೋಷ ನೀಡಿ ಸಾಕುವುದೆ ಸಂಸಾರಲೀಲೆ. ಇದಕ್ಕೆ ಮತ್ಸರ, ಮಮತೆ, ಮೋಹಗಳ ಆವೇಶ ಬೇಕು. ಇದೆಲ್ಲ ಬೇಕಾಗುವುದು ಲೋಕನಾಟಕಕ್ಕೆ.

**ವಿವರಣೆ:** ನ್ಯಾಶನಲ್ ಜಿಯೋಗ್ರಾಫಿಕ್ಸ್ ಒಂದು ವಿಡಿಯೊವನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ಒಂದು ಕಾಡುಕೋಣ, ಕಾಡೆಮ್ಮೆ ಮತ್ತು ಒಂದು ಕರು ಕಾಡಿನಲ್ಲಿ ಮೇಯುತ್ತಿವೆ. ದೂರದಲ್ಲಿ ಅವಿತು ಕುಳಿತ ಆರು ಸಿಂಹಗಳು ಇವುಗಳನ್ನು ಗಮನಿಸುತ್ತ, ಹತ್ತಿರಕ್ಕೆ ಬಂದಾಗ ಹಾರಿ, ಬೆನ್ನತ್ತಿ, ಕರುವನ್ನು ಹಿಡಿಯುತ್ತವೆ. ಕರು ಕೆರೆಯಲ್ಲಿ ನೀರಲ್ಲಿ ಬೀಳುತ್ತದೆ. ಒಂದು ಸಿಂಹ ಅದನ್ನು ಹಲ್ಲಿನಿಂದ ಕಚ್ಚಿ ಎಳೆದರೆ, ಇನ್ನೊಂದೆಡೆಗೆ, ಮೊಸಳೆಯೊಂದು ಅದನ್ನು ಸೆಳೆಯುತ್ತದೆ. ಕೊನೆಗೆ ಆರೂ ಸಿಂಹಗಳು ಸೇರಿ ಅದನ್ನು ದಂಡೆಗೆ ಎಳೆದು ಕರುವಿನ ಮೇಲೆ ದಾಳಿ ಮಾಡಲು ಬರುತ್ತವೆ. ಆಗ ಕಾಡೆಮ್ಮೆ ತನ್ನ ಪರಿವಾರದ ಹತ್ತಿಪ್ಪತ್ತು ಎಮ್ಮೆ ಕೋಣಗಳನ್ನು ಕರೆತಂದು ಸಿಂಹಗಳನ್ನು ಮುತ್ತುತ್ತದೆ. ಹೇಗಾದರೂ ತನ್ನ ಮಗುವನ್ನು ಉಳಿಸಿಕೊಳ್ಳಬೇಕೆಂಬ ಹಾತೊರೆತ ಕಾಡೆಮ್ಮೆಗೆ. ತನ್ನ ಜೀವದ ಹಂಗನ್ನು ತೊರೆದು ಮುನ್ನುಗ್ಗಿ ತನ್ನ ಕರುವಿನ ಮೇಲೆ ಎರಗ ಬಯಸುವ ಸಿಂಹದ ಹೊಟ್ಟೆಗೆ ತನ್ನ ಕೊಂಬನ್ನು ತೂರಿಸಿ ಗಾಳಿಗೆ ಹಾರಿಸಿಬಿಡುತ್ತದೆ. ಕೊನೆಗೆ ತನ್ನ ಮಗುವನ್ನು ಬಿಡಿಸಿಕೊಂಡು ಹೋಗುತ್ತದೆ. ಇದು ತಾಯಿಯ ಪ್ರೀತಿ.

ಕೈಕೇಯಿಯದೂ ಅಂತಹದೇ ಪ್ರೀತಿಯಲ್ಲವೆ, ತನ್ನ ಮಗ ಭರತನ ಬಗ್ಗೆ? ಆಕೆಗೆ ರಾಮನ ಬಗ್ಗೆ ಕೋಪವಿಲ್ಲ, ಆದರೆ ತನ್ನ ಮಗ ಭರತನಿಗೆ ಒಳ್ಳೆಯದಾಗಬೇಕು, ಅವನು ರಾಜನಾಗಬೇಕು ಎಂಬ ಬಲವತ್ತರವಾದ ಅಪೇಕ್ಷೆ. ಅದು ತಪ್ಪಲ್ಲ. ಸತ್ಯಭಾಮೆಯ ಪ್ರೇಮ ಉತ್ಕಟವಾದದ್ದು. ಕೃಷ್ಣನ ಸಂಪೂರ್ಣವಾದ ಪ್ರೀತಿ ತನಗೇ ದಕ್ಕಬೇಕೆಂಬ ಅಪೇಕ್ಷೆ. ಅದಕ್ಕೆ ಉಳಿದವರೊಡನೆ ಅಸಹನೆ, ಮೋಹದ ಆವೇಶ ಕಂಡಿತು. ಬೇರೆಯವರಿಗೆ ಅದು ಮತ್ಸರವಾಗಿ ತೋರಿತು.

ನಮ್ಮ ಇಂದಿನ ಬದುಕಿನಲ್ಲೂ ಅದೇ ತಾಯಿಯ ಪ್ರೇಮ, ಹೆಂಡತಿಯ ಮೋಹದಾಪೇಕ್ಷೆಗಳು ಇದ್ದೇ ಇವೆ. ಅವು ಇರಲೇಬೇಕು. ಅತ್ತೆ-ಸೊಸೆಯರ ನಡುವಿನ ತಕರಾರಿಗೆ ಮುಖ್ಯ ಕಾರಣವೇ ಇವು. ಇಪ್ಪತ್ತೈದು ವರ್ಷಗಳ ಮಗನಾಗಿ, ‘ಅಮ್ಮ ಅದನ್ನು ಮಾಡಲೇ, ಇದನ್ನು ಕೊಳ್ಳಲೇ?’ ಎಂದು ಕೇಳುತ್ತ ಅಮ್ಮನ ಹಿಂದೆಯೇ ಓಡಾಡುತ್ತಿದ್ದ ಹುಡುಗ, ಮದುವೆಯಾದ ಮೇಲೆ ಹೆಂಡತಿಯ ಸೆರಗು ಹಿಡಿದುಕೊಂಡು ಆಕೆ ಹೇಳಿದಂತೆ ಕೇಳಿದಾಗ ಅಮ್ಮನಿಗೆ ಆಘಾತ. ಆಕೆಗೆ ಈಗ ಸೊಸೆಯ ಮೇಲೆ ಮತ್ಸರ. ತನ್ನದಾದದ್ದನ್ನು ಸೆಳೆದುಕೊಂಡು ಹೋದಳಲ್ಲ ಈ ಮಾಯಾವಿ ಎಂದು ಕೋಪ. ಗಂಡ ಪೂರಾ ತನ್ನವನಾಗಬೇಕು, ಮಗುವಿನ ತರಹ ಬರೀ ಅಮ್ಮನ ಸುತ್ತ ತಿರುಗಬಾರದು ಎಂದು ಹೆಂಡತಿ ಅನನ್ಯವಾದ ಮೋಹದ ಬಾಣವನ್ನು ಬಿಡುತ್ತಾಳೆ. ಇಬ್ಬರೂ, ಅವರವರ ದೃಷ್ಟಿಯಿಂದ ಸರಿ, ಇದೇ ತಾನೇ ಸಂಸಾರ ನಾಟಕ?

ಕಗ್ಗ ಇದನ್ನು ಕೊನೆಯ ಸಾಲಿನಲ್ಲಿ ಅಧ್ಯಾತ್ಮಕ್ಕೇರಿಸಿ ಬಿಡುತ್ತದೆ. ಇದು ಕೇವಲ ಒಂದು ಮನೆಯಲ್ಲಿ ನಡೆಯುವ ನಾಟಕವಲ್ಲ, ಇದು ಲೋಕನಾಟಕ. ಇಡೀ ಪ್ರಪಂಚದಲ್ಲಿ ಎಲ್ಲರೂ ತ್ಯಾಗಿಗಳೇ ಆಗಿದ್ದರೆ, ಎಲ್ಲರೂ ಮೋಹರಹಿತರಾಗಿದ್ದರೆ ಪ್ರಪಂಚ ಸುಂದರವಾದ ನಾಟಕವಾಗುತ್ತಿತ್ತು? ಬ್ರಹ್ಮನ ಲೀಲೆ ಆಕರ್ಷಕವಾಗುತ್ತಿತ್ತೇ? ಈ ಲೋಕನಾಟಕ ಆಕರ್ಷಕವಾಗಲು ಮೋಹ, ಮತ್ಸರ, ಮಮತೆಗಳು ಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಏಪ್ರಿಲ್ 18, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ:** ಚೈತ್ರ ಕೃಷ್ಣ ದ್ವಿತೀಯ ಗಂ. 19-24 ನಕ್ಷತ್ರ: ವಿಶಾಖ ಗಂ. 27-39 ಯೋಗ: ಸಿದ್ಧಿ ಗಂ. 20-23, ಕರಣ: ತೈತಿಲ ಗಂ. 08-45, ಮೇಷ ಮಾಸದ 04 ನೇ ದಿನ. ರಾಹುಕಾಲ: ಬೆಳಿಗ್ಗೆ 07:30 – 09:00 ಸೂರ್ಯೋದಯ : 06-19 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 16 ರಂಜಾನ್ ಅದೃಷ್ಟ ಸಂಖ್ಯೆ: 5, 11

**ಮೇಷ:** ಈ ದಿನದ ಪ್ರಮುಖ ಕೆಲಸಗಳು ಅನಾಯಾಸವಾಗಿ ಪೂರ್ಣಗೊಳ್ಳುವವು. ಸ್ನೇಹಿತರು ನಿಮ್ಮ ಯೋಜನೆಗಳನ್ನು ಬೆಂಬಲಿಸಲಿದ್ದಾರೆ. ದೂರದ ಸಂಬಂಧಿಕರೊಬ್ಬರ ಆಗಮನದಿಂದ ಮನೆಯಲ್ಲಿ ಸಡಗರ.

**ವೃಷಭ:** ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯುವ ಸಂಭವವಿರುವುದರ ಫಲವಾಗಿ ಸಂಶಯ ನಿವಾರಣೆಯಾಗುವುದರ ಜೊತೆಗೆ ಜ್ಞಾನಾರ್ಜನೆಯಾಗುವುದು. ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ.

**ಮಿಥುನ:** ದೈವಬಲ ಒದಗುವುದರಿಂದ ನಿಮ್ಮ ಪ್ರಯತ್ನ ಕಾರ್ಯಗಳೆಲ್ಲ ಹೆಚ್ಚಿನ ಶುಭಫಲಗಳನ್ನೇ ನೀಡಲಿದೆ. ಷೇರು ವ್ಯವಹಾರ, ಸಿನಿಮಾ ತಯಾರಿಕೆಯಂತಹ ಕಾರ್ಯವು ಲಾಭ ತರಲಿದೆ. ಕ್ರೀಡಾಕ್ಷೇತ್ರದಲ್ಲಿ ಹೆಸರು ಮಾಡುವ ಅವಕಾಶವಿದೆ.

**ಕರ್ಕಾಟಕ:** ನೀವು ಕಷ್ಟಪಟ್ಟು ದುಡಿಯುವ ಸ್ವಭಾವದವರು. ಆದ್ದರಿಂದ ವ್ಯವಹಾರದಲ್ಲಿ, ಜೀವನದಲ್ಲಿ ಕೊರತೆ ಕಾಣುವುದಿಲ್ಲ. ರಕ್ತದೊತ್ತಡವು ನಿಯಂತ್ರಣಕ್ಕೆ ಬರುವುದು. ಸರ್ಕಾರಿ ಉದ್ಯೋಗಸ್ಥರಿಗೆ ವರ್ಗಾವಣೆ ಸಂಭವ.

**ಸಿಂಹ:** ವಾಸ್ತುಶಿಲ್ಪ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ. ನಿಮ್ಮ ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಈ ದಿನವನ್ನು ಪ್ರಾರಂಭಿಸಿ, ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು.

**ಕನ್ಯಾ:** ನೂತನ ವಾಹನ ಕೊಳ್ಳುವ ಆಲೋಚನೆ ಬರುವುದು. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊರುವ ಸಂದರ್ಭ ಬಂದಲ್ಲಿ, ಹಿಂದೆ ಸರಿಯುವುದು ಉತ್ತಮ. ಅಸಭ್ಯವಾಗಿ ವರ್ತಿಸದೆ, ಗೌರವಾನ್ವಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಿ.

**ತುಲಾ:** ನಿಮ್ಮ ನಡೆಯು ನಿಮ್ಮ ಮೇಲಧಿಕಾರಿ ಅಥವಾ ಪಾಲುದಾರರಿಗೆ ಇಷ್ಟವಾಗುವ ರೀತಿಯಲ್ಲಿ ಇರುವುದು ಉತ್ತಮ. ಈ ದಿನ ಉದ್ಯೋಗಾವಕಾಶದ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿರುತ್ತದೆ.

**ವೃಶ್ಚಿಕ:** ಲೇವಾದೇವಿ ವ್ಯವಹಾರಗಳು ತೃಪ್ತಿಕರವಾಗಿರುವುದು. ಜಮೀನು ಖರೀದಿ ಬಗ್ಗೆ ಯೋಚನೆ ಬರುವುದು ಹಾಗೂ ಅದು ಯೋಚನೆಯಾಗಿಯೇ ಉಳಿಯುವುದು. ನೀರಾವರಿ ಬೆಳೆಗಳು ಲಾಭ ತರಲಿದೆ.

**ಧನು:** ಆಫೀಸಿನ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ಆತುರ ತೋರುವುದು ಸರಿಯಲ್ಲ. ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಬರುವುದು. ಅನಿವಾರ್ಯವಾಗಿ ದೂರದ ಊರಿಗೆ ಪ್ರಯಾಣ ಸಾಧ್ಯತೆ.

**ಮಕರ:** ಜೀವನಶೈಲಿಯಲ್ಲಿ ಬದಲಾವಣೆಯನ್ನು ಬಯಸಿದರೆ ಕಾಯುವುದು ಅವಶ್ಯವಾಗುತ್ತದೆ. ರಸ್ತೆ ಕಾಮಗಾರಿ ಟೆಂಡರ್‌ನಂತಹ ಉದ್ಯೋಗ ನಡೆಸುವವರಿಗೆ ಸರ್ಕಾರದಿಂದ ಗುತ್ತಿಗೆಯು ಪ್ರಾಪ್ತಿಯಾಗಬಹುದು.

**ಕುಂಭ:** ಅಧಿಕಾರ ಹೋಗುವ ಪರಿಸ್ಥಿತಿ. ಸಿವಿಲ್ ಎಂಜಿನಿಯರ್‌ಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ಮನೆಯ ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು.

**ಮೀನ:** ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿಯ ಪರಿಸರ ಮೂಡಲಿದೆ. ಅನಗತ್ಯ ಮಾತುಗಳಿಂದ ದೂರವಿರಿ. ವಾಹನ ಮಾರಾಟದ ಯೋಚನೆಯಲ್ಲಿರುವವರು ಸದ್ಯದ ಮಟ್ಟಿಗೆ ಕೈ ಬಿಡುವುದು ಉತ್ತಮ.

## ಪದಬಂಧ 4931

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಹಾಜರು ಇದ್ದರೂ ಅನುಪಸ್ಥಿತಿ! (5)
3.ಉಸಿರಾಡಲು ಕಷ್ಟವಾದ ಸ್ಥಿತಿ (3)
5.ಮೈಗೆ ಸುಗಂಧ ಲೇಪಿಸಿಕೊಳ್ಳುವುದು (4)
8.ತಪ್ಪಾಗಿ ಭಾವಿಸುವಿಕೆ (5)
11.ಹಣಕ್ಕಾಗಿಯೇ ಈ ಗೊಂದಲ! (4)
13.ಈತ ಜಿಪುಣನೇ ಬಿಡಿ! (3)
14.ನೈಜವಾದ ಮೈಗುಣ (5)

**ಮೇಲಿಂದ ಕೆಳಕ್ಕೆ**
1.ತಪ್ಪು ಜಾಗಕ್ಕೆ ಹೋಗುವುದು (4)
2.ಜಗದಲ್ಲಿರುವ ಶೂರ ಕಾಣುತ್ತಿರುವನೇ? (3)
4.ಸಭೆ ನಡೆಯುತ್ತಿರುವ ಜಾಗ (4)
6.ಎಣಿಕೆಯನ್ನು ಹೀಗೆನ್ನಿ (3)
7.ಕಣದ ಹತ್ತಿರ ಧರಿಸಿದ ಕಡಗ (3)
8.ವರನು ಹಿಡಿದಿರುವ ಲೋಹ (3)
9.ಕಂದಾಯವನ್ನು ವಸೂಲು ಮಾಡುವುದು (4)
10.ಅಕ್ಷರಗಳ ಗುಂಪನ್ನು ಮೊದಲಿಟ್ಟು ಅಧಿಕಾರ ಕಳೆದುಕೊಳ್ಳುವಿಕೆ (4)
12.ಕೊನೆಗೆ ದೇಹ ನೋಡಿದಾಗಲೇ ಈ ಅನುಮಾನ! (3)



### 4930ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಉಪಾಖ್ಯಾನ 3.ಕೋಲಾಹಲ
5.ಗುಡಾಣ 6.ತಿರಿಪು
8.ಪುಲ್ಲಿಂಗ 9.ಅಂಕ
10.ಲಾಯ 11.ನಮಿಸು
12.ಸುಗಮ 14.ಚರಟಾ
16.ಗ್ರಹಚಾರ 17.ನಾರಿಕೇಳ

**ಮೇಲಿಂದ ಕೆಳಕ್ಕೆ:**
1.ಉನ್ನತಿ 2.ನಗು
3.ಕೋಣ 4.ಲವಂಗ
7.ಪುಷ್ಟೀಕರಿಸು 8.ಪುಸಲಾಯಿಸು
11.ನಖಾಗ್ರ 13.ಮರುಳ
14.ಚರ 15.ಟಾನಾ

## ಸುಡೊಕು 5317

| | | | | | | | | |
|---|---|---|---|---|---|---|---|---|
| | | | | 6 | 8 | 1 | | 3 |
| 9 | | 6 | | | | | 7 | |
| | 8 | | 7 | | | 2 | | 6 |
| 6 | | 1 | | 5 | | 7 | | 9 |
| | 7 | | 8 | 9 | 6 | | | |
| 8 | | | | 7 | | 5 | | 2 |
| 3 | | 9 | | 1 | | | 2 | |
| | | | 6 | | 7 | 9 | | 4 |
| 7 | | 8 | | 2 | | | 1 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5316 ಸುಡೊಕು

| | | | | | | | | |
|---|---|---|---|---|---|---|---|---|
| 1 | 5 | 9 | 3 | 2 | 7 | 6 | 8 | 4 |
| 4 | 6 | 7 | 1 | 8 | 9 | 3 | 5 | 2 |
| 3 | 8 | 2 | 6 | 4 | 5 | 9 | 1 | 7 |
| 2 | 9 | 3 | 5 | 1 | 4 | 7 | 6 | 8 |
| 6 | 7 | 4 | 9 | 3 | 8 | 5 | 2 | 1 |
| 5 | 1 | 8 | 7 | 6 | 2 | 4 | 9 | 3 |
| 8 | 2 | 5 | 4 | 9 | 3 | 1 | 7 | 6 |
| 7 | 3 | 1 | 2 | 5 | 6 | 8 | 4 | 9 |
| 9 | 4 | 6 | 8 | 7 | 1 | 2 | 3 | 5 |

### ದೇಶದ ಇ.ವಿ. ಮಾರುಕಟ್ಟೆಯಲ್ಲಿ ಮೊದಲ ಸ್ಥಾನಕ್ಕೆ ಏರುವ ಗುರಿ

# 2025ಕ್ಕೆ ಮೊದಲ ಇ.ವಿ: ಮಾರುತಿ ಸಿಇಒ

**ನವದೆಹಲಿ (ಪಿಟಿಐ):** ಮಾರುತಿ ಸುಜುಕಿ ಕಂಪನಿಯು ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಹಲವು ಮಾದರಿಗಳನ್ನು ಭಾರತದಲ್ಲಿ ಬಿಡುಗಡೆ ಮಾಡಲಿದ್ದು, ಆ ಮೂಲಕ ದೇಶದಲ್ಲಿ ಇ.ವಿ. ಮಾರುಕಟ್ಟೆಯಲ್ಲಿ ಮೊದಲ ಸ್ಥಾನಕ್ಕೆ ಬರುವ ಯೋಜನೆ ಹೊಂದಿದೆ ಎಂದು ಕಂಪನಿಯ ಹೊಸ ಸಿಇಒ ಹಿಸಾಶಿ ಟೇಕುಚಿ ತಿಳಿಸಿದ್ದಾರೆ.

ಕಂಪನಿಯು ಸದ್ಯ ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ಸ್ಪರ್ಧೆಯಲ್ಲಿ ಇಲ್ಲ. ಹೀಗಿದ್ದರೂ ಹಲವು ಮಾದರಿಗಳನ್ನು ಬಿಡುಗಡೆ ಮಾಡುವ ಮೂಲಕ ನಂಬರ್ 1 ಸ್ಥಾನಕ್ಕೆ ಏರಲಿದೆ ಎಂದು ಅವರು ಹೇಳಿದ್ದಾರೆ.

ಕಂಪನಿಯು 2025ರಲ್ಲಿ ತನ್ನ ಮೊದಲ ಇ.ವಿ. ಮಾದರಿ ಬಿಡುಗಡೆ ಮಾಡುವ ಆಲೋಚನೆಯಲ್ಲಿದೆ. ದೇಶದಲ್ಲಿ ಬೇಡಿಕೆ ಹೆಚ್ಚಾಗುತ್ತಿದ್ದಂತೆಯೇ ಸ್ಥಳೀಯ ಘಟಕಗಳಲ್ಲಿಯೇ ತಯಾರಿಕೆ ಆರಂಭಿಸುವ ಯೋಜನೆಯನ್ನೂ ಹೊಂದಿದೆ. ಮೊದಲ ವಿದ್ಯುತ್ ಚಾಲಿತ ವಾಹನವನ್ನು ಸುಜುಕಿ ಮೋಟರ್‌ನ ಗುಜರಾತ್ ಘಟಕದಿಂದ ಹೊರತರಲಾಗುವುದು ಎಂದು ತಿಳಿಸಿದ್ದಾರೆ.

> **ವಿದ್ಯುತ್ ಚಾಲಿತ ವಾಹನ ಅತ್ಯಂತ ದುಬಾರಿ ಆಗಿದ್ದು, ಸದ್ಯ ಇರುವ ತಂತ್ರಜ್ಞಾನದಿಂದ ಅದನ್ನು ಕೈಗೆಟಕುವಂತೆ ಮಾಡುವುದು ಕಷ್ಟ**
> **ಹಿಸಾಶಿ ಟೇಕುಚಿ,** ಮಾರುತಿ ಸುಜುಕಿ ಸಿಇಒ

‘ನಮ್ಮ ಪ್ರತಿಸ್ಪರ್ಧಿಗಳಿಗೆ ಹೋಲಿಸಿದರೆ ಭಾರತದ ಮಾರುಕಟ್ಟೆಯಲ್ಲಿ ವಿದ್ಯುತ್ ಚಾಲಿತ ವಾಹನ ಪರಿಚಯಿಸುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಆದರೆ, ಮಾರುಕಟ್ಟೆ ಬೇಡಿಕೆಯು ಈಗಲೂ ಸೀಮಿತವಾಗಿದೆ. ಮಾರಾಟ ಸಹ ಅತ್ಯಂತ ಕಡಿಮೆ ಇದೆ’ ಎಂದಿದ್ದಾರೆ.

‘ಇ.ವಿ. ಕುರಿತಾಗಿ ನಾವು ಏನನ್ನೂ ಮಾಡಿಲ್ಲ ಎಂದಲ್ಲ. ನಮ್ಮ ಹಾಲಿ ಮಾದರಿಗಳಲ್ಲಿ ಬ್ಯಾಟರಿ ಮತ್ತು ಮೋಟರ್ ಅಳವಡಿಸಿ ಪರೀಕ್ಷೆ ನಡೆಸಲಾಗುತ್ತಿದೆ. ಭಾರತದ ಪರಿಸ್ಥಿತಿಗೆ ಸರಿಹೊಂದುವಂತಹ ಇ.ವಿ. ಸಿದ್ಧಪಡಿಸುವುದು ಬಹಳ ಕಷ್ಟ. ಹೀಗಾಗಿ ಒಂದು ವರ್ಷಕ್ಕೂ ಹೆಚ್ಚಿನ ಸಮಯದಿಂದ ಈ ಕುರಿತು ಪರೀಕ್ಷೆ ನಡೆಸಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

2030ರ ವೇಳೆಗೆ ದೇಶದಲ್ಲಿ ಖಾಸಗಿ ಕಾರು ಮಾರಾಟದಲ್ಲಿ ಶೇ 30ರಷ್ಟು ಇ.ವಿ. ಇರುವಂತೆ ಮಾಡುವ ಪ್ರಯತ್ನದಲ್ಲಿ ಕೇಂದ್ರ ಸರ್ಕಾರ ಇದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಟಿ.ಎಂ.ರಂಗೇಗೌಡರು
ಮಂಡಿ ಮರ್ಚೆಂಟ್ ಹಾಗೂ ಅಧ್ಯಕ್ಷರು: ಜೆಡಿಎಸ್ ಗೋವಿಂದರಾಜನಗರ ವಿ.ಕ್ಷೇತ್ರ, ಬೆಂ.
ಶ್ರೀಯುತರು ದಿನಾಂಕ: 08-04-2022 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾರ ವೈಕುಂಠ ಸಮಾರಾಧನೆಯನ್ನು ದಿನಾಂಕ: 18-04-2022ನೇ ಸೋಮವಾರ ಬೆಳಿಗ್ಗೆ 9.30 ರಿಂದ 10.30 ಗಂಟೆಗೆ ಕಾಮಾಕ್ಷಿಪಾಳ್ಯದ ರಂಗನಾಥಪುರದಲ್ಲಿರುವ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ವಿಸೂ: ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಆರ್.ಪ್ರಕಾಶ್ ಮತ್ತು ಶ್ರೀಮತಿ ಕೆ. ಅರುಣ ಮತ್ತು ಮಕ್ಕಳು ಜಿ.ಕೃಷ್ಣಪ್ಪ ಮತ್ತು ಕುಟುಂಬವರ್ಗ, ಶ್ರೀ ಆರ್.ಅನುರಾಧ ಮತ್ತು ಆರ್.ಚಂದ್ರಮೋಹನ್ ಮತ್ತು ಮಕ್ಕಳು, ಶ್ರೀಮತಿ/ಶ್ರೀ ಆರ್.ಪ್ರಭಾ ಮತ್ತು ಡಾ॥ ಎಂ.ಎಸ್.ಗಿರೀಶ್, ಶ್ರೀಮತಿ ಆರ್.ರಾಜೇಶ್ವರಿ ಮತ್ತು ಶ್ರೀ ಟಿ.ಆರ್.ತುಳಸೀರಾಮ್ ಮತ್ತು ಮಕ್ಕಳು, ಬಿ.ಕೃಷ್ಣಪ್ಪ ಮತ್ತು ಕುಟುಂಬವರ್ಗ, ಕೆ.ರಂಗಣ್ಣ, ಕಾಮಾಕ್ಷಿಪಾಳ್ಯ, ಆತ್ಮೀಯ ಅಣ್ಣ-ತಮ್ಮಂದಿರು ಹಾಗೂ ಗ್ರಾಮಸ್ಥರು ತಗ್ಗಿಕುಪ್ಪೆ, ಮಾಗಡಿ ತಾ॥ ಹಾಗೂ ಅಪಾರ ಬಂಧು-ಬಳಗದವರು.

## ಸಂಕ್ಷಿಪ್ತ ಸುದ್ದಿ

### ಪಾಕ್ ವಾಯುದಾಳಿ: ಅಫ್ಗನ್‌ನಲ್ಲಿ 47 ಮಂದಿ ಸಾವು

**ಕಾಬೂಲ್ (ಎಎಫ್‌ಪಿ):** ಅಫ್ಘಾನಿಸ್ತಾನದ ಪೂರ್ವದ ಖೋಸ್ಟ್ ಮತ್ತು ಕುನಾರ್ ಪ್ರಾಂತ್ಯಗಳಲ್ಲಿ ಪಾಕಿಸ್ತಾನದ ವಾಯು ಪಡೆಯು ನಡೆಸಿರುವ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ ಭಾನುವಾರ 47ಕ್ಕೆ ಏರಿಕೆಯಾಗಿದೆ ಎಂದು ತಾಲಿಬಾನ್ ಅಧಿಕಾರಿಗಳು ತಿಳಿಸಿದ್ದಾರೆ.

ಖೋಸ್ಟ್ ಪ್ರಾಂತ್ಯದ ಡ್ಯುರಾಂಡ್ ಲೈನ್ ಬಳಿ ಪಾಕ್‌ಪಡೆಗಳು ಶನಿವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 41 ನಾಗರಿಕರು ಸಾವನ್ನಪ್ಪಿದ್ದಾರೆ. 22 ಮಂದಿ ಗಾಯಗೊಂಡಿದ್ದಾರೆ ಎಂದು ಖೋಸ್ಟ್‌ನಲ್ಲಿರುವ ಮಾಹಿತಿ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಶಬೀರ್ ಅಹ್ಮದ್ ಉಸ್ಮಾನಿ ತಿಳಿಸಿದರು.

ಕುನಾರ್ ಪ್ರಾಂತ್ಯದಲ್ಲಿ ಆರು ಮಂದಿ ಮೃತಪಟ್ಟಿರುವುದಾಗಿ ಅಫ್ಗನ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

### 24ರಂದು ಅಭಿವೃದ್ಧಿ ಯೋಜನೆಗೆ ಮೋದಿ ಚಾಲನೆ

**ಶ್ರೀನಗರ:** ಪ್ರಧಾನಿ ನರೇಂದ್ರ ಮೋದಿ ಅವರು ಏ. 24ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ತಮ್ಮ ಅವಧಿಯಲ್ಲಿ ಕೈಗೊಂಡ ಹಲವು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಸುಮಾರು ₹ 70 ಸಾವಿರ ಕೋಟಿ ಮೌಲ್ಯದ ಕೈಗಾರಿಕಾ ಹೂಡಿಕೆ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

2019ರ ಆಗಸ್ಟ್‌ನಲ್ಲಿ ವಿಶೇಷ ಸ್ಥಾನಮಾನ ತೆಗೆದುಹಾಕಿದ ಬಳಿಕ ಮೋದಿ ಅವರು ಇದೇ ಮೊದಲ ಬಾರಿಗೆ ಜಮ್ಮು–ಕಾಶ್ಮೀರಕ್ಕೆ ಭೇಟಿ ನೀಡುತ್ತಿದ್ದಾರೆ.

### ಅಮೆರಿಕಕ್ಕೆ ತೆರಳಿದ ಶ್ರೀಲಂಕಾ ನಿಯೋಗ

**ಕೊಲಂಬೊ:** ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಶ್ರೀಲಂಕಾ, ನೆರವಿಗಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮೊರೆ ಹೋಗಲು ಮುಂದಾಗಿದೆ.

ದೇಶದ ಆರ್ಥಿಕತೆಯನ್ನು ಹಳಿಗೆ ತರುವ ಸಲುವಾಗಿ 400 ಕೋಟಿ ಡಾಲರ್ ನೆರವು ನೀಡುವಂತೆ ಐಎಂಎಫ್‌ಗೆ ಕೋರಲು ಶ್ರೀಲಂಕಾ ನಿರ್ಧರಿಸಿದೆ. ಈ ವಿಷಯದಲ್ಲಿ ಐಎಂಎಫ್‌ನೊಂದಿಗೆ ಮಾತುಕತೆ ನಡೆಸಲು ನೆರವಾಗುವಂತೆ ಕೋರಲು ಶ್ರೀಲಂಕಾ ಸರ್ಕಾರದ ನಿಯೋಗವೊಂದು ಅಮೆರಿಕಕ್ಕೆ ತೆರಳಿದೆ. ನೂತನ ಹಣಕಾಸು ಸಚಿವ ಅಲಿ ಸಬ್ರಿ ನೇತೃತ್ವದ ನಿಯೋಗವು ಏ. 19ರಿಂದ 24ರ ವರೆಗೆ ಐಎಂಎಫ್ ಜೊತೆ ಈ ಸಂಬಂಧ ಮಾತುಕತೆ ನಡೆಸಲಿದೆ.

# ಬೇಗ ನಿವೃತ್ತಿಗೆ ಬೇಕು ‘ಫೈರ್’

**ಹಣಕಾಸು ಸಾಕ್ಷರತೆ**

ರಾಜೇಶ್ ಕುಮಾರ್ ಟಿ.ಆರ್.

**ಉದ್ಯೋಗದಿಂದ** ನಿವೃತ್ತಿ ಎಂದರೆ ಅರವತ್ತು ವರ್ಷ ವಯಸ್ಸಾದಾಗ ಎದುರಾಗುವಂಥದ್ದು ಎನ್ನುವ ಆಲೋಚನೆ ಇತ್ತು. ಆದರೆ ಈಗ ನಿವೃತ್ತಿಯ ಪರಿಕಲ್ಪನೆಯೇ ಬದಲಾಗಿದೆ. ಮೂವತ್ತು, ನಲವತ್ತು ವರ್ಷ ತುಂಬುವಷ್ಟರಲ್ಲಿ ನಿವೃತ್ತಿಗೆ ಸಜ್ಜಾಗಬೇಕು ಎಂದು ಹೊಸ ತಲೆಮಾರಿನವರು ಆಲೋಚನೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ‘ಫೈರ್’ (FIRE) ಹೂಡಿಕೆ ವಿಧಾನ.

‘ಫೈನಾನ್ಷಿಯಲ್ ಇಂಡಿಪೆಂಡೆನ್ಸ್, ರಿಟೈರ್ ಅರ್ಲಿ’ (ಹಣಕಾಸಿನ ಸ್ವಾತಂತ್ರ್ಯ ಮತ್ತು ಬೇಗನೆ ನಿವೃತ್ತಿ) ಎನ್ನುವುದು ‘ಫೈರ್’ ಎನ್ನುವುದರ ವಿಸ್ತೃತ ರೂಪ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆರ್ಥಿಕ ಸ್ವಾವಲಂಬನೆ ಸಾಧಿಸಿ ನೌಕರಿಯಿಂದ ನಿವೃತ್ತಿ ಹೊಂದುವ ಲೆಕ್ಕಾಚಾರವನ್ನು ‘ಫೈರ್’ ಕಲಿಸಿಕೊಡುತ್ತದೆ. ಅಂದಹಾಗೆ, ‘ಫೈರ್’ ಹೂಡಿಕೆ ತಂತ್ರಗಾರಿಕೆಯನ್ನು ನೀವು ಹೇಗೆ ಅಳವಡಿಸಿಕೊಳ್ಳಬಹುದು?

**‘ಫೈರ್’ ಹೂಡಿಕೆ:** ವ್ಯಕ್ತಿ ತನ್ನ ಇಪ್ಪತ್ತನೆಯ ವರ್ಷ ಮತ್ತು ನಲವತ್ತನೆಯ ವರ್ಷದ ನಡುವಿನ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಗಳಿಸುವ ಆದಾಯದಲ್ಲಿ ಶೇಕಡ 50ರಿಂದ ಶೇ 70ರಷ್ಟು ಹಣವನ್ನು ಉಳಿತಾಯ ಮಾಡಿ, ಉತ್ತಮ ಲಾಭಾಂಶ ಕೊಡುವ ಹೂಡಿಕೆಗಳಲ್ಲಿ ತೊಡಗಿಸುವ ಮೂಲಕ ನೌಕರಿಯಿಂದ ಬೇಗನೆ ನಿವೃತ್ತಿ ಪಡೆದುಕೊಳ್ಳಲು ಸಜ್ಜಾಗುವ ಪ್ರಕ್ರಿಯೆಯೇ ‘ಫೈರ್’ ಹೂಡಿಕೆ. ಈ ಹೂಡಿಕೆ ತಂತ್ರಗಾರಿಕೆಯಲ್ಲಿ ಇಪ್ಪತ್ತು, ಮೂವತ್ತು ಮತ್ತು ನಲವತ್ತನೇ ವಯಸ್ಸಿನಲ್ಲಿ ಉಳಿತಾಯ ಮಾಡಿ ಹೂಡಿಕೆ ಮಾಡುವ ಹಣ ನಿವೃತ್ತಿ ನಂತರದ ಬದುಕಿಗೆ ಆಧಾರವಾಗುತ್ತದೆ, ವ್ಯಕ್ತಿಗೆ ಬೇಗ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿಬಿಡುತ್ತದೆ.

ವಿಕ್ಕಿ ರಾಬಿನ್ ಮತ್ತು ಜೋ ಡೋಮಿನಿಗಿಜ್ 1992ರಲ್ಲಿ ಬರೆದಿರುವ ‘ಯುವರ್ ಮನಿ ಆರ್ ಯುವರ್ ಲೈಫ್’ ಎನ್ನುವ ಪುಸ್ತಕದಿಂದ ‘ಫೈರ್’ ಪರಿಕಲ್ಪನೆ ಹುಟ್ಟಿಕೊಂಡಿದೆ. ಜಗತ್ತಿನಾದ್ಯಂತ ಅನೇಕ ಜನ ಈಗ ‘ಫೈನಾನ್ಸಿಯಲ್ ಇಂಡಿಪೆಂಡೆನ್ಸ್, ರಿಟೈರ್ ಅರ್ಲಿ’ ಮಂತ್ರ ಜಪಿಸುತ್ತಿದ್ದಾರೆ. ಈ ಪರಿಕಲ್ಪನೆಯನ್ನು ನಿಮ್ಮ ಜೀವನದಲ್ಲಿ ನಿಜವಾಗಿಸಿಕೊಳ್ಳಬೇಕಾದರೆ ಶೇ 50ರಿಂದ ಶೇ 70ರಷ್ಟು ಹಣವನ್ನು ಉಳಿತಾಯ ಮಾಡಬೇಕು. ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕಬೇಕು. ಜಾಣ್ಮೆಯಿಂದ, ಹೆಚ್ಚು ಲಾಭಾಂಶ ಬರುವ ಕಡೆ ಹೂಡಿಕೆ ಮಾಡಬೇಕು. ಮಕ್ಕಳ ಶಿಕ್ಷಣ, ಮನೆ ಬಾಡಿಗೆ, ಆಹಾರ ವೆಚ್ಚ, ಗೃಹ ಸಾಲ ಇತ್ಯಾದಿ ಜವಾಬ್ದಾರಿಗಳಿಂದಾಗಿ ಅನೇಕರಿಗೆ ಶೇ 50ರಿಂದ ಶೇ 70ರಷ್ಟು ಉಳಿತಾಯ ಸಾಧ್ಯವಾಗದೇ ಇರಬಹುದು. ಆದರೆ, ಅಷ್ಟು ಉಳಿತಾಯ ಮಾಡುವ ದಿಕ್ಕಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಮುನ್ನಡೆಯಬೇಕು ಎನ್ನುವುದಷ್ಟೇ ಇದರ ತಾತ್ಪರ್ಯ.

**‘ಫೈರ್’ ಲೆಕ್ಕಾಚಾರದಲ್ಲಿ ನಿವೃತ್ತಿಗೆ ಎಷ್ಟು ಹಣ ಬೇಕು?:** ನಿವೃತ್ತಿ ಹೊಂದಿದ ಮೊದಲ ವರ್ಷದಲ್ಲಿ ನೀವು ಮಾಡಲಿರುವ ವೆಚ್ಚದ 25 ಪಟ್ಟು ಹೆಚ್ಚು ಹಣ ನಿಮ್ಮಲ್ಲಿರಬೇಕು ಎನ್ನುವುದು ಲೆಕ್ಕಾಚಾರ. ಉದಾಹರಣೆಗೆ, ನಿವೃತ್ತಿ ಹೊಂದಿದ ಮೊದಲ ವರ್ಷ ನೀವು ₹ 10 ಲಕ್ಷ ವೆಚ್ಚ ಮಾಡುತ್ತೀರಿ ಎಂದು ಭಾವಿಸಿ. ಇದರಂತೆ ಅಂದಾಜು ಮಾಡಿದರೆ ನಿವೃತ್ತಿಗೆ ₹ 2.5 ಕೋಟಿ (10 ಲಕ್ಷX25 = 2.5 ಕೋಟಿ) ಬೇಕಾಗುತ್ತದೆ. ಬೇಗನೆ ನಿವೃತ್ತಿ ಹೊಂದುವ ಸಂದರ್ಭದಲ್ಲಿ, ಹೀಗೆಯೇ, ಇಷ್ಟೇ ಹಣ ಇರಬೇಕು ಎಂದಲ್ಲ.

ನಿಮಗೆ ಹೇಗೆ ಸರಿ ಹೊಂದುವುದೋ ಅದಕ್ಕೆ ತಕ್ಕಂತೆ ನಿವೃತ್ತಿಗೆ ಅಗತ್ಯವಿರುವ ಮೊತ್ತದ ಅಂದಾಜಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಹಣದುಬ್ಬರ ಮುಂತಾದ ಅಂಶಗಳನ್ನು ಒಳಗೊಂಡು ನಿವೃತ್ತಿಗೆ ಎಷ್ಟು ಹಣ ಅಗತ್ಯ ಎನ್ನುವುದನ್ನು ಕಂಡುಕೊಳ್ಳಬೇಕಾಗುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ ಬೇಗ ನಿವೃತ್ತಿ ಹೊಂದಲು ₹ 3 ಕೋಟಿಯಿಂದ ₹ 6 ಕೋಟಿ ಒಳ್ಳೆಯ ಮೊತ್ತ ಎಂದು ಪರಿಗಣಿಸಬಹುದು.

**‘ಫೈರ್’ನಲ್ಲಿ ಮೂರು ತತ್ವಗಳು:** ಮಿತವ್ಯಯ, ಪರ್ಯಾಯ ಆದಾಯದ ಮೂಲಗಳನ್ನು ಕಂಡುಕೊಳ್ಳುವುದು ಮತ್ತು ಹೆಚ್ಚು ಲಾಭಾಂಶ ಇರುವ ಕಡೆ ಹೂಡಿಕೆ ಮಾಡುವುದು ‘ಫೈರ್’ ಪರಿಕಲ್ಪನೆಯ ಮೂರು ಮುಖ್ಯ ತತ್ವಗಳು. ಖರ್ಚಿನಲ್ಲಿ ವಿವೇಚನೆ ಬಳಸುವುದು ‘ಫೈರ್’ ತತ್ವದ ಬಹಳ ಮುಖ್ಯ ಅಂಶ. ಹೊಸ ಕಾರು ಖರೀದಿ ಬದಲು ಹಳೆಯ ಕಾರು ತೆಗೆದುಕೊಳ್ಳುವುದು, ಸಾರ್ವಜನಿಕ ಸಾರಿಗೆ ಬಳಸುವುದು, ಸ್ವಂತ ಮನೆ ಕೊಳ್ಳುವ ಬದಲು ಬಾಡಿಗೆ ಮನೆಯಲ್ಲಿ ವಾಸ ಮಾಡುವುದು, ಕ್ರೆಡಿಟ್ ಕಾರ್ಡ್ ಬಳಸದಿರುವುದು, ಹೊರಗಿನ ಆಹಾರ, ಪಾರ್ಟಿ, ಮೋಜು ಮಸ್ತಿಗೆ ಖರ್ಚು ಮಾಡದಿರುವುದು ಹೀಗೆ ಅನೇಕ ಮಿತವ್ಯಯದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

ಒಂದೇ ಆದಾಯದ ಮೂಲ ನೆಚ್ಚಿಕೊಳ್ಳುವ ಬದಲು ಪರ್ಯಾಯ ಆದಾಯದ ಮೂಲಗಳನ್ನು ಕಂಡುಕೊಳ್ಳುವುದು ಕೂಡ ಈ ಸಿದ್ಧಾಂತದ ಮುಖ್ಯ ಅಂಶವಾಗಿದೆ. ಉದಾಹರಣೆಗೆ, ಷೇರು ಹೂಡಿಕೆಯಿಂದ ಲಾಭಾಂಶ ಪಡೆಯುವುದು, ನಿಶ್ಚಿತ ಠೇವಣಿಯಿಂದ ಬಡ್ಡಿ ಪಡೆಯುವುದು, ಬ್ಲಾಗಿಂಗ್ ಮಾಡಿ ಆದಾಯ ಗಳಿಸುವುದು, ಯೂಟ್ಯೂಬ್ ಚಾನಲ್ ಆರಂಭಿಸಿ ಸಂಪಾದಿಸುವುದು, ಪುಸ್ತಕ ಬರೆದು ದುಡ್ಡು ಗಳಿಸುವುದು ಹೀಗೆ ಪ್ರತಿಯೊಬ್ಬರೂ ತಮ್ಮ ಕೌಶಲ ಆಧರಿಸಿ ಬೇರೆ ಬೇರೆ ಆದಾಯದ ಮೂಲಗಳನ್ನು ಕಂಡುಕೊಳ್ಳಬೇಕು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

### ಷೇರುಪೇಟೆಯಲ್ಲಿ ಮತ್ತೆ ಅನಿಶ್ಚಿತತೆಯ ಓಟ

ಸತತ ಎರಡು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿದ್ದು, ಅನಿಶ್ಚಿತತೆಯ ಓಟ ಶುರುವಾಗಿದೆ. ಏಪ್ರಿಲ್ 13ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಇಳಿಕೆ ದಾಖಲಿಸಿವೆ. 58,338 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.06ರಷ್ಟು ಇಳಿದಿದೆ. 17,475 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.13ರಷ್ಟು ತಗ್ಗಿದೆ.

ಜಾಗತಿಕ ವಿದ್ಯಮಾನಗಳ ಜೊತೆಗೆ ಕಂಪನಿಗಳ ತ್ರೈಮಾಸಿಕ ಸಾಧನೆ ವರದಿಯಲ್ಲಿ ಗಮನಾರ್ಹ ಬೆಳವಣಿಗೆ ಕಂಡುಬಾರದಿರುವುದು ಸೇರಿ ಹಲವು ಅಂಶಗಳು ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಎನರ್ಜಿ ಸೂಚ್ಯಂಕ ಹೊರತುಪಡಿಸಿ ಎಲ್ಲ ಸೂಚ್ಯಂಕಗಳು ನಕಾರಾತ್ಮಕ ಫಲಿತಾಂಶ ಕೊಟ್ಟಿವೆ. ನಿಫ್ಟಿ ಐ.ಟಿ. ವಲಯ ಶೇ 2.8ರಷ್ಟು, ಲೋಹ ವಲಯ ಶೇ 1.8ರಷ್ಟು, ಮಿಡ್ ಕ್ಯಾಪ್ ಶೇ 1.1 , ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 0.5ರಷ್ಟು ಇಳಿಕೆಯಾಗಿವೆ.

**ಗಳಿಕೆ–ಇಳಿಕೆ:** ನಿಫ್ಟಿಯಲ್ಲಿ ಅಪೋಲೊ ಹಾಸ್ಪಿಟಲ್ ಶೇ 3ರಷ್ಟು, ಒಎನ್‌ಜಿಸಿ ಶೇ 2ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 1.3ರಷ್ಟು ಏರಿಕೆಯಾಗಿವೆ. ಹಿಂಡಾಲ್ಕೊ ಶೇ 6ರಷ್ಟು, ಟಾಟಾ ಮೋಟರ್ಸ್ ಶೇ 5ರಷ್ಟು, ವಿಪ್ರೊ ಶೇ 4ರಷ್ಟು, ಕೋಲ್ ಇಂಡಿಯಾ ಶೇ 4ರಷ್ಟು ಮತ್ತು ಏಷ್ಯನ್ ಪೇಂಟ್ಸ್ ಶೇ 4ರಷ್ಟು ಇಳಿಕೆಯಾಗಿವೆ.

**ಮುನ್ನೋಟ:** ಈ ವಾರ ಮೈಂಡ್ ಟ್ರೀ, ಎಸಿಸಿ, ಏಂಜಲ್ ಒನ್, ಎಚ್‌ಸಿಎಲ್ ಟೆಕ್, ಐಸಿಐಸಿಐ ಲೋಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿ., ಟಾಟಾ ಕಮ್ಯೂನಿಕೇಷನ್ಸ್, ಐಸಿಐಸಿಐ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಭಾರತೀಯ ರಿಸರ್ವ್ ಬ್ಯಾಂಕ್ ಜೂನ್‌ನಲ್ಲಿ ಬಡ್ಡಿ ದರ ಹೆಚ್ಚಿಸುವ ಅಂದಾಜಿದೆ. ಜಾಗತಿಕವಾಗಿಯೂ ಪ್ರಮುಖ ದೇಶಗಳ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡುತ್ತಿವೆ. ಬಡ್ಡಿ ದರ ಹೆಚ್ಚಳವಾಗದಂತೆ ಷೇರುಪೇಟೆಯಿಂದ ಹಣದ ಹೊರ ಹರಿವು ಹೆಚ್ಚಾಗುತ್ತದೆ. ಉಳಿದಂತೆ ಹಣದುಬ್ಬರದ ಕಾರಣದಿಂದಾಗಿ ಕಂಪನಿಗಳಿಗೆ ವೆಚ್ಚದ ಹೊಡೆತ ಬೀಳುತ್ತಿದ್ದು ಲಾಭಾಂಶದ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಉಂಟಾಗಲಿದೆ ಎನ್ನುವತ್ತ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಜಾಗತಿಕ ಬೆಳವಣಿಗೆಗಳ ಜೊತೆಗೆ ದೇಶಿ ವಿದ್ಯಮಾನಗಳಿಗೆ ಷೇರುಪೇಟೆ ಸೂಚ್ಯಂಕಗಳು ಪ್ರತಿಕ್ರಿಯಿಸಲಿವೆ. ಸದ್ಯದಲ್ಲಿ ಏರಿಳಿತದ ಹಾದಿ ಮುಂದುವರಿಯುವುದರಿಂದ ಹೂಡಿಕೆದಾರರು ಬಹಳ ಎಚ್ಚರಿಕೆಯಿಂದ ನಿರ್ಧಾರಗಳನ್ನು ಕೈಗೊಳ್ಳಬೇಕಿದೆ.

### ಉದ್ಯಮದ ಬಗ್ಗೆ ಜನರಲ್ಲಿ ಹೆಚ್ಚಾದ ತಿಳಿವಳಿಕೆ

# ಎಂಎಫ್: 3 ಕೋಟಿ ಹೊಸ ಖಾತೆ

**ನವದೆಹಲಿ (ಪಿಟಿಐ):** ಮ್ಯೂಚುವಲ್ ಫಂಡ್‌ಗಳ ಬಗ್ಗೆ ಅರಿವು ಹೆಚ್ಚಾಗುತ್ತಿರುವುದು, ವಹಿವಾಟು ನಡೆಸುವುದು ಸುಲಭಗೊಂಡಿರುವುದು ಹಾಗೂ ಷೇರುಪೇಟೆಯ ಏರಿಕೆಯ ಕಾರಣಗಳಿಂದಾಗಿ 2021–22ರಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಗಳಿಗೆ ಸಂಬಂಧಿಸಿದಂತೆ ಹೊಸದಾಗಿ 3.17 ಕೋಟಿ ಖಾತೆಗಳು ಸೇರ್ಪಡೆ ಆಗಿವೆ.

ಉದ್ಯಮದಲ್ಲಿನ ಒಟ್ಟು ಖಾತೆಗಳ ಸಂಖ್ಯೆಯು 2021ರ ಮಾರ್ಚ್‌ನಲ್ಲಿ 9.78 ಕೋಟಿ ಇತ್ತು. 2022ರ ಮಾರ್ಚ್ ಅಂತ್ಯದ ವೇಳೆಗೆ 12.95 ಕೋಟಿಗೆ ಏರಿಕೆ ಆಗಿದೆ. 2020–21ನೇ ಹಣಕಾಸು ವರ್ಷದಲ್ಲಿ ಹೊಸದಾಗಿ

81 ಲಕ್ಷ ಖಾತೆಗಳು ಸೇರ್ಪಡೆ ಆಗಿದ್ದವು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಪ್ರಸಕ್ತ ಹಣಕಾಸು ವರ್ಷವೂ ಭರವಸೆದಾಯಕ ಆಗಿರುವಂತೆ ಕಾಣುತ್ತಿದೆ. ಜನರು ನಿಶ್ಚಿತ ಠೇವಣಿಗಳು ಮತ್ತು ಉಳಿತಾಯ ಖಾತೆಗಳಿಂದಾಚೆಗೆ ಗಮನ ಹರಿಸುವಂತೆ ಆಗಲಿದೆ ಎಂದು ಎಲ್‌ಎಕ್ಸ್‌ಎಂಇ ಸ್ಥಾಪಕಿ ಪ್ರೀತಿ ರಾಠಿ ಗುಪ್ತಾ ಹೇಳಿದ್ದಾರೆ.

ಮಾರುಕಟ್ಟೆ ಪರಿಸ್ಥಿತಿ, ಜಾಗತಿಕ ಬಿಕ್ಕಟ್ಟು, ಹಣದುಬ್ಬರ ದರ, ಹೂಡಿಕೆ ಮತ್ತು ಜನರಿಗೆ ತಿಳಿವಳಿಕೆ ಹೆಚ್ಚಾಗುತ್ತಿರುವುದು ಉದ್ಯಮದ ಮೇಲೆ ಪ್ರಭಾವ ಬೀರಿದೆ ಎಂದೂ ಅವರು ತಿಳಿಸಿದ್ದಾರೆ.

ಬದಲಾಗುತ್ತಿರುವ ಬಡ್ಡಿದರಕ್ಕೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಏರಿಳಿತ ಕಂಡುಬಂದರೆ ಅದರಿಂದ ಸಣ್ಣ ಹೂಡಿಕೆದಾರರು ಆತಂಕಕ್ಕೆ ಒಳಗಾಗುವ ಸಾಧ್ಯತೆ ಇದೆ. ಹೀಗಾದಲ್ಲಿ ಖಾತೆಗಳ ಸಂಖ್ಯೆ ಕಡಿಮೆ ಆಗುವ ಸಂಭವ ಇದೆ ಎಂದು ನಿಯೋ ಕಂಪನಿಯ ಯೋಜನಾ ಮುಖ್ಯಸ್ಥ ಸ್ವಪ್ನಿಲ್ ಭಾಸ್ಕರ್ ಹೇಳಿದ್ದಾರೆ.

# ಜಿಎಸ್‌ಟಿ: ಶೇ 5ರ ತೆರಿಗೆ ಸ್ಲ್ಯಾಬ್ ರದ್ದು?

**ನವದೆಹಲಿ (ಪಿಟಿಐ):** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಶೇಕಡ 5ರ ತೆರಿಗೆ ಸ್ಲ್ಯಾಬ್ ರದ್ದು ಮಾಡುವ ಬಗ್ಗೆ ಮುಂದಿನ ತಿಂಗಳು ನಡೆಯಲಿರುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ.

ಜಿಎಸ್‌ಟಿ ಮೂಲಕ ಸಿಗುವ ವರಮಾನವನ್ನು ಹೆಚ್ಚಿಸಿಕೊಳ್ಳಲು ಹೆಚ್ಚಿನ ರಾಜ್ಯಗಳು ಒಲವು ಹೊಂದಿದ್ದು, ವ್ಯಾಪಕವಾಗಿ ಬಳಕೆಯಾಗುವ ಕೆಲವು ಸರಕುಗಳನ್ನು ಶೇ 3ರ ತೆರಿಗೆ ಸ್ಲ್ಯಾಬ್‌ಗೆ ವರ್ಗಾವಣೆ ಮಾಡುವ ಹಾಗೂ ಇನ್ನುಳಿದ ಸರಕುಗಳನ್ನು ಶೇ 8ರ ತೆರಿಗೆ ಸ್ಲ್ಯಾಬ್‌ಗೆ ವರ್ಗಾವಣೆ ಮಾಡುವ ಬಗ್ಗೆ ಮಂಡಳಿಯು ಪರಿಶೀಲನೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈಗ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ನಾಲ್ಕು ಹಂತಗಳಲ್ಲಿ (ಶೇ 5, 12, 18 ಮತ್ತು 28) ತೆರಿಗೆ ವಿಧಿಸಲಾಗುತ್ತಿದೆ. ಅಲ್ಲದೆ, ಚಿನ್ನ ಮತ್ತು ಚಿನ್ನದ ಆಭರಣಗಳಿಗೆ ಶೇ 3ರಷ್ಟು ತೆರಿಗೆ ಇದೆ. ಬ್ರ್ಯಾಂಡ್ ಇಲ್ಲದ ಹಾಗೂ ಪ್ಯಾಕ್ ಮಾಡಿರದ ಆಹಾರ ವಸ್ತುಗಳಿಗೆ ತೆರಿಗೆ ವಿನಾಯಿತಿ ಇದೆ.

ವರಮಾನ ಹೆಚ್ಚು ಮಾಡಿಕೊಳ್ಳುವ ಉದ್ದೇಶದಿಂದ ಮಂಡಳಿಯು, ವಿನಾಯಿತಿ ಇರುವ ಕೆಲವು ಆಹಾರೇತರ ವಸ್ತುಗಳನ್ನು ಶೇ 3ರ ತೆರಿಗೆ ಸ್ಲ್ಯಾಬ್‌ಗೆ ತರುವ ಬಗ್ಗೆಯೂ ಪರಿಶೀಲಿಸಬಹುದು ಎನ್ನಲಾಗಿದೆ. ಶೇ 5ರ ತೆರಿಗೆ ಸ್ಲ್ಯಾಬ್ ರದ್ದು ಮಾಡಿ, ಅದನ್ನು ಶೇ 7, 8 ಅಥವಾ 9ಕ್ಕೆ ಹೆಚ್ಚಿಸುವ ಬಗ್ಗೆಯೂ ಚರ್ಚೆಯಾಗುವ ನಿರೀಕ್ಷೆ ಇದೆ. ಒಂದು ಲೆಕ್ಕಾಚಾರದ ಪ್ರಕಾರ ಶೇ 5ರ ತೆರಿಗೆ ಸ್ಲ್ಯಾಬ್‌ನಲ್ಲಿನ ಉತ್ಪನ್ನಗಳಿಗೆ ಹೆಚ್ಚುವರಿಯಾಗಿ ಶೇ 1ರಷ್ಟು ತೆರಿಗೆ ವಿಧಿಸಿದರೆ ವಾರ್ಷಿಕವಾಗಿ ಹೆಚ್ಚುವರಿ ₹ 50 ಸಾವಿರ ಕೋಟಿ ವರಮಾನ ಸಿಗಲಿದೆ. ಈ ತೆರಿಗೆ ಸ್ಲ್ಯಾಬ್‌ನಲ್ಲಿ ಮುಖ್ಯವಾಗಿ ಆಹಾರ ವಸ್ತುಗಳು ಇವೆ.

ಈಗ ಶೇ 5ರಷ್ಟು ತೆರಿಗೆ ಇರುವ ಬಹುತೇಕ ವಸ್ತುಗಳಿಗೆ ಶೇ 8ರಷ್ಟು ತೆರಿಗೆ ವಿಧಿಸಲು ಮಂಡಳಿ ತೀರ್ಮಾನಿಸಬಹುದು ಎಂದು ಮೂಲಗಳು ಹೇಳಿವೆ.

### ಎಲ್‌ಐಸಿ; ಎಫ್‌ಇಎಂಎ ನಿಯಮಕ್ಕೆ ತಿದ್ದುಪಡಿ

**ನವದೆಹಲಿ (ಪಿಟಿಐ):** ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಶೇಕಡ 20ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಅನುಕೂಲ ಆಗುವಂತೆ ಕೇಂದ್ರ ಸರ್ಕಾರವು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ (ಎಫ್‌ಇಎಂಎ) ನಿಯಮಗಳಿಗೆ ತಿದ್ದುಪಡಿ ತಂದಿದೆ.

ಎಫ್‌ಇಎಂಎ ತಿದ್ದುಪಡಿಯಿಂದಾಗಿ ವಿದೇಶಿ ನೇರ ಹೂಡಿಕೆದಾರರು ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ (ಆಟೊಮೆಟಿಕ್ ರೂಟ್) ಶೇ 20ರವರೆಗೆ ಎಲ್‌ಐಸಿ ಷೇರುಗಳನ್ನು ಖರೀದಿಸಲು ಅವಕಾಶ ಸಿಗಲಿದೆ.

ಎಫ್‌ಇಎಂಎ ತಿದ್ದುಪಡಿಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ನೀಡಿದ ಬಳಿಕ ಉದ್ಯಮ ಉತ್ತೇಜನ ಮತ್ತು ಆಂತರಿಕ ವ್ಯಾಪಾರ ಇಲಾಖೆಯು (ಡಿಪಿಐಐಟಿ) ಮಾರ್ಚ್ 14ರಂದು ಎಫ್‌ಡಿಐ ನೀತಿಯಲ್ಲಿ ತಿದ್ದುಪಡಿ ತಂದಿದೆ.

ಎಲ್‌ಐಸಿಯ ಐಪಿಒ ಮೂಲಕ ಕೇಂದ್ರ ಸರ್ಕಾರವು ಕಂಪನಿಯಲ್ಲಿ ಹೊಂದಿರುವ ಶೇ 5ರಷ್ಟು ಷೇರುಗಳನ್ನು ಮಾರಾಟ ಮಾಡಿ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಕಂಪನಿಯು ಫೆಬ್ರುವರಿಯಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರ ಸಲ್ಲಿಸಿದ್ದು, ಕಳೆದ ತಿಂಗಳು ಅದಕ್ಕೆ ಒಪ್ಪಿಗೆ ದೊರೆತಿದೆ.

### ಆಯುಷ್ಮಾನ್ ಭಾರತ: 3 ಲಕ್ಷಕ್ಕೂ ಅಧಿಕ ಟೆಲಿ ಸಮಾಲೋಚನೆ

**ನವದೆಹಲಿ (ಪಿಟಿಐ):** ಆಯುಷ್ಮಾನ್ ಭಾರತ–ಆರೋಗ್ಯ ಕೇಂದ್ರಗಳಲ್ಲಿ (ಎಬಿ–ಎಚ್‌ಡಬ್ಲ್ಯುಸಿ) ಶನಿವಾರ ಮೂರು ಲಕ್ಷಕ್ಕೂ ಹೆಚ್ಚು ಟೆಲಿಸಮಾಲೋಚನೆಗಳನ್ನು ನಡೆಸಿ, ಆರೋಗ್ಯ ಕುರಿತು ಸಲಹೆ, ಚಿಕಿತ್ಸೆ ನೀಡಲಾಗಿದೆ.

ಇದು ಒಂದೇ ದಿನ ನಡೆಸಿರುವ ಗರಿಷ್ಠ ಸಂಖ್ಯೆಯ ಟೆಲಿಸಮಾಲೋಚನೆಗಳಾಗಿವೆ. ಈ ಮೊದಲು ಒಂದೇ ದಿನ 1.8 ಲಕ್ಷ ಟೆಲಿಸಮಾಲೋಚನೆಗಳನ್ನು ನೆರವೇರಿಸಲಾಗಿತ್ತು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಆಯುಷ್ಮಾನ್ ಭಾರತ ಆರೋಗ್ಯ ಕೇಂದ್ರಗಳ ನಾಲ್ಕನೇ ವಾರ್ಷಿಕೋತ್ಸವ ಅಂಗವಾಗಿ ‘ಇ–ಸಂಜೀವಿನಿ’ ವೇದಿಕೆ ಮೂಲಕ ಈ ಟೆಲಿಸಮಾಲೋಚನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹435 |
| 12 ಮೊಟ್ಟೆಗೆ | ₹58 |
| ಮೈಸೂರು | |
| 100 ಮೊಟ್ಟೆಗೆ | ₹435 |

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

REQUIRED URGENTLY BABY SITTERS, HOUSE MADE/HOME NURSE Male/ Female, 24/12 Hours Duty. Contact: 6366883838, 7022399993

Wanted

ಮಂಗಳೂರಿನಲ್ಲಿ ಕಂಪೆನಿ ಕೆಲಸಕ್ಕೆ ಮ್ಯಾನೇಜರ್, ಸುಪರ್ ವೈಸರ್, ಅಕೌಂಟ್ಸ್ ಹಾಗೂ ಇನ್ನಿತರ ಹುದ್ದೆಗಳಿಗೆ 22ಜನ ಯುವಕ-ಯುವತಿಯರು ಬೇಕಾಗಿದ್ದಾರೆ. ವೇತನ 12500-18000+ ಊಟ ವಸತಿಯುಚಿತ. 9901040696/ 8867895696

ತಕ್ಷಣ ಬೇಕಾಗಿದ್ದಾರೆ.ಬೆಂಗಳೂರಿನಲ್ಲಿ ಕೆಲಸಕ್ಕೆ.ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ,ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು,ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56ಸಂಪರ್ಕಿಸಿ: 9606523337, 9606384001,

Marketing & Sales

ಹೊಸಬರಿಗೆ ಸುವರ್ಣಾವಕಾಶ. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ ನೂತನ ಕಂಪನಿಯೊಂದಕ್ಕೆ, ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ವಸತಿ ಉಚಿತ. ವಿದ್ಯಾರ್ಹತೆ SSLC ಮೇಲ್ಪಟ್ಟು ವಯಸ್ಸು- 18-36 ವರೆಗೆ. ಸಂಬಳ- 10,000ದಿಂದ 40,000ವರೆಗೆ. ಸಂಪರ್ಕಿಸಿ: 9535911982, 080 - 29903967

ಭವಿಷ್ಯ

Astrology

★॥ಶ್ರೀಕೇದರನಾಥ॥★ ಆರಾಧನೆಯಿಂದ ಆರಾಧನೆಯಿಂದ ಪ್ರೀತಿಪ್ರೇಮ,ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತಪರಿಹಾರ. 9148773459

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು, ಚಿತ್ರದುರ್ಗ.ಸಂಪರ್ಕಿಸಿ: 9008867041

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ಪ್ರವಾಸ

Travel

11.05.2022ರಿಂದ ರೈಲು ಮತ್ತು ಏಸಿ ಬಸ್ಸಿನಲ್ಲಿ 30ದಿನಗಳ ಚಾರ್ಧಾಮ್ ಸಮೇತ ವೈಷ್ಣೋದೇವಿ,ಅಮೃತಸರ್, ಕಾಶಿ,ಗಯಾ,ಹರಿದ್ವಾರ್. 27.05.2022ರಿಂದ ವಿಮಾನ, ಬಸ್ಸಿನಲ್ಲಿ 13ದಿನಗಳ ಚಾರೋಧಾಮ್,ಮಸ್ಸೂರಿ ಗುಪ್ತಕಾಶಿ,ನವದೆಹಲಿ. 25.6.2022ರಿಂದ 19ದಿನಗಳ ಅಮರನಾಥ್,ಕಾಶ್ಮೀರ್, ವೈಷ್ಣೋದೇವಿ ಜ್ವಾಲಾಮುಖಿ. ಏಷ್ಯನ್ ಟ್ರಾವೆಲ್ ಲೈನ್ಸ್ #164/3, ಆರ್.ವಿ.ರಸ್ತೆ (ಮಿನರ್ವ ಬಸ್‌ಸ್ಟಾಪ್ ಎದುರು) ಬೆಂಗಳೂರು4. ಫೋನ್ 08026565085/ 9480182865/ 8105657052.

28.06.2022 14 ದಿನಗಳು ವಿಮಾನ A/C ಬಸ್ಸಿನಲ್ಲಿ ಅಮರನಾಥ್,ದೆಹಲಿ ವೈಷ್ಣೋದೇವಿ,ಕಾಶ್ಮೀರ್ ಕಾಂಗ್ಡಾದೇವಿ ಅಮೃತ್‌ಸರ್ ಇತ್ಯಾದಿ. 02.10.2022 15 ದಿನಗಳು ಚಾರ್‌ಧಾಮ್ ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

ಅಂಡಮಾನ್ ಹವಳದ್ವೀಪ 5ದಿನಗಳು ವಿಮಾನದಲ್ಲಿ ಏಪ್ರಿಲ್, ಮೇ, ಜೂನ್ನಲ್ಲಿ Royal Package. 10/07/2022 13/17 ದಿನಗಳು ದೆಹಲಿ, ಅಮೃತಸರ, ವೈಶ್ಣವದೇವಿ, ಅಮರನಾಥ್ ಕಾಶ್ಮೀರ, ಇತ್ಯಾದಿ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

ದೆಹಲಿ, ಯಮುನೋತ್ರಿ, ಗಂಗೋತ್ರಿ,ಕೇದಾರ್‌ನಾಥ್, ಬದರಿನಾಥ್ 04.05.2022, 22.05.2022, 04.06.2022 ರಿಂದ 18/14 ದಿನಗಳು. ದೆಹಲಿ,ಆಗ್ರಾ.ಮಥುರಾ ಕಾಶಿ, ಗಯಾ, ಬದರಿನಾಥ,ಕೇದಾರ್‌ನಾಥ್ 01.05.2022 ರಿಂದ 18/13ದಿನಗಳು ಸ್ವಯಂಭೂ,ಹಿಮಲಿಂಗ, ಅಮರನಾಥ್, ವೈಷ್ಣೋದೇವಿ ಕಾಶ್ಮೀರ್22.06.2022, 30.06.2022 ರಿಂದ13/17 ದಿನಗಳು ಸಂಪರ್ಕಿಸಿ: 080-26508925, 9980993631. ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಡ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

26.06.2022 ಸೆಪ್ಟಂಬರ್ ಅಕ್ಟೋಬರ್‌ನಲ್ಲಿ 14/20/26 ದಿನಗಳ ಪೂರಿಜಗನ್ನಾಥ್, ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ, ದೆಹಲಿ. ಜುಲೈ ಅಗಸ್ಟ್ ತಿಂಗಳಲ್ಲಿ ಅಮರನಾಥ್ ಮುಕ್ತಿನಾಥ್ 'ಶ್ರೀಸುಧಾ ಟ್ರಾವೆಲ್ಸ್' 080-22429289, 9448119290, 9019301300

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

## ಭುವನೇಶ್ವರ್ ಬೌಲಿಂಗ್ ಮಿಂಚು; ಸನ್‌ರೈಸರ್ಸ್‌ಗೆ ಸತತ ನಾಲ್ಕನೇ ಜಯ: ಪಂಜಾಬ್‌ಗೆ ನಿರಾಸೆ

# ಕೊನೆಯ ಓವರ್‌ನಲ್ಲಿ ಮಲಿಕ್ ಮೋಡಿ

**ನವಿ ಮುಂಬೈ:** ಕಾಶ್ಮೀರದ ಹುಡುಗ ಉಮ್ರಾನ್ ಮಲಿಕ್ ಭಾನುವಾರ ಸಂಜೆ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಸಂಚಲನ ಸೃಷ್ಟಿಸಿದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಮೂರು ವಿಕೆಟ್ ಮತ್ತು ಮೇಡನ್ ಸಾಧನೆ ಮಾಡಿದರು. ಅವರ ಅಮೋಘ ಬೌಲಿಂಗ್ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು 7 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 22 ವರ್ಷದ ಉಮ್ರಾನ್ (4-1-28-4) ಮತ್ತು ಅನುಭವಿ ಭುವನೇಶ್ವರ್ ಕುಮಾರ್ (22ಕ್ಕೆ3) ದಾಳಿಯ ಮುಂದೆ ಪಂಜಾಬ್ ತಂಡವು 20 ಓವರ್‌ಗಳಲ್ಲಿ 151 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಕಿಂಗ್ಸ್ ಬಳಗದ ಲಿಯಾಮ್ ಲಿವಿಂಗ್‌ಸ್ಟೋನ್ (60; 33ಎ) ಅವರ ಏಕಾಂಗಿ ಹೋರಾಟದಿಂದಾಗಿ ತಂಡವು ಗೌರವಯುತ ಮೊತ್ತ ಪೇರಿಸಿತು. ಸನ್‌ರೈಸರ್ಸ್ ತಂಡವು 18.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 152 ರನ್ ಗಳಿಸಿ ಜಯಿಸಿತು.

ಸತತ ನಾಲ್ಕನೇ ಜಯ ಸಾಧಿಸಿದ ಕೇನ್ ವಿಲಿಯಮ್ಸನ್ ಬಳಗವು ಒಟ್ಟು ಎಂಟು ಪಾಯಿಂಟ್ಸ್ ತನ್ನ ಬುಟ್ಟಿಗೆ ಹಾಕಿಕೊಂಡು, ನಾಲ್ಕನೇ ಸ್ಥಾನಕ್ಕೆ ಜಿಗಿಯಿತು.

**ಉಮ್ರಾನ್ ಸಾಧನೆ:** ಪ್ರತಿ ಗಂಟೆಗೆ 150 ಕಿ.ಮೀ ವೇಗದಲ್ಲಿ ಎಸೆತ ಹಾಕುವ ಉಮ್ರಾನ್ ಮಲಿಕ್ ಪಂಜಾಬ್ ತಂಡದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಾಡಿದರು.

20ನೇ ಓವರ್ ಅನ್ನು ಮೇಡನ್ ಮಾಡುವುದರ ಜೊತೆಗೆ ಮೂರು ವಿಕೆಟ್ ಕೂಡ ಗಳಿಸಿದರು. ಇದೇ ಓವರ್‌ನಲ್ಲಿ ಒಂದು ರನ್‌ಔಟ್ ಕೂಡ ಆಗಿದ್ದು ವಿಶೇಷ.

ಐಪಿಎಲ್‌ನಲ್ಲಿ ಈ ಸಾಧನೆ ಮಾಡಿದ ನಾಲ್ಕನೇ ಬೌಲರ್ ಎಂಬ ಹೆಗ್ಗಳಿಕೆಗೆ ಉಮ್ರಾನ್ ಪಾತ್ರರಾದರು. ಅವರು ಎಂಟನೇ ಓವರ್‌ನಲ್ಲಿ ಜಿತೇಶ್ ಶರ್ಮಾ ವಿಕೆಟ್ ಗಳಿಸಿ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ಕೊನೆಯ ಓವರ್‌ನ ಎರಡನೇ ಎಸೆತದಲ್ಲಿ ಒಡೀನ್ ಸ್ಮಿತ್, ನಾಲ್ಕು ಮತ್ತು ಐದನೇ ಎಸೆತದಲ್ಲಿ ಕ್ರಮವಾಗಿ ರಾಹುಲ್ ಚಾಹರ್ ಹಾಗೂ ವೈಭವ್ ಅರೋರಾ ವಿಕೆಟ್ ಉರುಳಿಸಿದರು.

**ಭುವನೇಶ್ವರ್ ಸ್ವಿಂಗ್:** ಪಂಜಾಬ್ ತಂಡದ ನಾಯಕ ಮಯಂಕ್ ಅಗರವಾಲ್ ಗಾಯಗೊಂಡಿದ್ದರಿಂದ ವಿಶ್ರಾಂತಿ ಪಡೆದರು. ಆದ್ದರಿಂದಾಗಿ ನಾಯಕತ್ವದ ವಹಿಸಿದ್ದ ಶಿಖರ್, ಪ್ರಭಸಿಮ್ರನ್ ಸಿಂಗ್ ಜೊತೆಗೆ ಇನಿಂಗ್ಸ್ ಆರಂಭಿಸಿದರು. ಆದರೆ, ಮೂರನೇ ಓವರ್‌ನಲ್ಲಿಯೇ ಅವರ ಆಟಕ್ಕೆ ಭುವನೇಶ್ವರ್ ಕುಮಾರ್ ತಡೆಯೊಡ್ಡಿದರು.

ಇದಾಗಿ ಮೂರು ಓವರ್‌ಗಳ ನಂತರ ಪ್ರಭಸಿಮ್ರನ್ ವಿಕೆಟ್ ಅನ್ನು ಟಿ. ನಟರಾಜನ್ ಗಳಿಸಿದರೆ, ಜಾನಿ ಬೆಸ್ಟೊ ಅವರನ್ನು ಮೈಸೂರು ಹುಡುಗ ಜೆ. ಸುಚಿತ್ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಈ ಹಂತದಲ್ಲಿ ಉತ್ತಮ ಜೊತೆಯಾಟ ಕುದುರಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಶಾರೂಕ್ ಖಾನ್ ಅವರಿಬ್ಬರ ವಿಕೆಟ್‌ಗಳನ್ನೂ ಪಡೆಯುವಲ್ಲಿ ಯಶಸ್ವಿಯಾದ ಭುವನೇಶ್ವರ್ ಪಂಜಾಬ್ ತಂಡವು ದೊಡ್ಡ ಮೊತ್ತ ಗಳಿಸದಂತೆ ತಡೆಯೊಡ್ಡಿದರು.

ಲಿವಿಂಗ್‌ಸ್ಟೋನ್ ಮತ್ತು ಶಾರೂಕ್ ಐದನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ಲಿವಿಂಗ್‌ಸ್ಟೋನ್ 33 ಎಸೆತಗಳಲ್ಲಿ 60 ರನ್‌ಗಳನ್ನು ಗಳಿಸಿದರೆ, ಪಂಜಾಬ್ ತಂಡದ ಉಳಿದೆಲ್ಲ ಬ್ಯಾಟರ್‌ಗಳು ಸೇರಿ 87 ಎಸೆತಗಳಲ್ಲಿ 84 ರನ್ ಸೇರಿಸಿದರು!

ಭುವನೇಶ್ವರ್ ಕುಮಾರ್

ಉಮ್ರಾನ್ ಮಲಿಕ್ –ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ಪಂಜಾಬ್ 151 (20 ಓವರ್)**
ಶಿಖರ್ ಸಿ ಜಾನ್ಸೆನ್ ಬಿ ಭುವನೇಶ್ವರ್ 8 (11ಎ, 4X1), ಪ್ರಭಸಿಮ್ರನ್ ಸಿ ಪೂರನ್ ಬಿ ನಟರಾಜನ್ 14 (11ಎ, 4X2), ಬೆಸ್ಟೊ ಎಲ್‌ಬಿಡಬ್ಲ್ಯು ಬಿ ಸುಚಿತ್ 12 (10ಎ, 4X2), ಲಿವಿಂಗ್‌ಸ್ಟೋನ್ ಸಿ ವಿಲಿಯಮ್ಸನ್ ಬಿ ಭುವನೇಶ್ವರ್ 60 (33ಎ, 4X5, 6X4), ಜಿತೇಶ್ ಸಿ ಮತ್ತು ಬಿ ಉಮ್ರಾನ್ 11 (8ಎ, 4X2), ಶಾರೂಕ್ ಸಿ ವಿಲಿಯಮ್ಸನ್ ಬಿ ಭುವನೇಶ್ವರ್ 26 (28ಎ, 4X1, 6X2), ಒಡೀನ್ ಸಿ ಮತ್ತು ಬಿ ಉಮ್ರಾನ್ 13 (15ಎ, 6X1), ರಬಾಡ ಔಟಾಗದೆ 0 (0ಎ), ರಾಹುಲ್ ಬಿ ಉಮ್ರಾನ್ 0 (2ಎ), ವೈಭವ್ ಬಿ ಉಮ್ರಾನ್ 0 (1ಎ), ಅರ್ಷದೀಪ್ ರನೌಟ್ (ಸುಚಿತ್/ಪೂರನ್) 0 (1ಎ)
**ಇತರೆ** (ವೈಡ್ 7) 7
**ವಿಕೆಟ್ ಪತನ:** 1-10 (ಶಿಖರ್ ಧವನ್, 2.4), 2-33 (ಪ್ರಭಸಿಮ್ರನ್ ಸಿಂಗ್, 4.5), 3-48 (ಜಾನಿ ಬೆಸ್ಟೊ, 6.2), 4-61 (ಜಿತೇಶ್ ಶರ್ಮಾ, 7.6), 5-132 (ಎಂ. ಶಾರೂಕ್ ಖಾನ್, 16.1), 6-151 (ಲಿಯಾಮ್ ಲಿವಿಂಗ್‌ಸ್ಟೋನ್, 18.6), 7-151 (ಒಡೀನ್ ಸ್ಮಿತ್, 19.2), 8-151 (ರಾಹುಲ್ ಚಾಹರ್, 19.4), 9-151 (ವೈಭವ್ ಅರೋರ, 19.5), 10-151 (ಅರ್ಷದೀಪ್ ಸಿಂಗ್, 19.6)
**ಬೌಲಿಂಗ್:** ಭುವನೇಶ್ವರ ಕುಮಾರ್ 4-0-22-3, ಮಾರ್ಕೊ ಜಾನ್ಸೆನ್ 4-0-35-0, ಟಿ.ನಟರಾಜನ್ 4-0-38-1, ಜಗದೀಶ್ ಸುಚಿತ್ 4-0-28-1, ಉಮ್ರಾನ್ ಮಲಿಕ್ 4-1-28-4

**ಸನ್‌ರೈಸರ್ಸ್ ಹೈದರಾಬಾದ್ 3ಕ್ಕೆ 152 (18.5 ಓವರ್)**
ಅಭಿಷೇಕ್ ಸಿ ಶಾರೂಕ್ ಬಿ ರಾಹುಲ್ 31 (25ಎ, 4X3, 6X1), ವಿಲಿಯಮ್ಸನ್ ಸಿ ಶಿಖರ್ ಬಿ ರಬಾಡ 3 (9ಎ), ತ್ರಿಪಾಠಿ ಸಿ ಶಾರೂಕ್ ಬಿ ರಾಹುಲ್ 34 (22ಎ, 4X4, 6X1), ಮರ್ಕರಂ ಔಟಾಗದೆ 41 (27ಎ, 4X4, 6X1), ಪೂರನ್ ಔಟಾಗದೆ 35 (30ಎ, 4X1, 6X1)
**ಇತರೆ** (ಬೈ 1, ವೈಡ್ 7) 8
**ವಿಕೆಟ್ ಪತನ:** 1-14 (ಕೇನ್ ವಿಲಿಯಮ್ಸನ್, 3.1), 2-62 (ರಾಹುಲ್ ತ್ರಿಪಾಠಿ, 8.2), 3-77 (ಅಭಿಷೇಕ್ ಶರ್ಮಾ, 10.3)
**ಬೌಲಿಂಗ್:** ವೈಭವ್ ಅರೋರ 3.5-0-35-0, ಕಗಿಸೊ ರಬಾಡ 4-0-29-1, ಅರ್ಷದೀಪ್ ಸಿಂಗ್ 4-0-32-0, ರಾಹುಲ್ ಚಾಹರ್ 4-0-28-2, ಒಡೀನ್ ಸ್ಮಿತ್ 1-0-8-0, ಲಿಯಾಮ್ ಲಿವಿಂಗ್‌ಸ್ಟೋನ್ 2-0-19-0

**ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 7 ವಿಕೆಟ್ ಜಯ**

**20ನೇ ಓವರ್ ಮೇಡನ್ ಸಾಧಕರು**

| ಆಟಗಾರ | ತಂಡ | ಎದುರಾಳಿ | ಸ್ಥಳ | ವರ್ಷ |
|---|---|---|---|---|
| ಇರ್ಫಾನ್ ಪಠಾಣ್ | ಪಂಜಾಬ್ | ಮುಂಬೈ | ಮೊಹಾಲಿ | 2008 |
| ಲಸಿತ್ ಮಾಲಿಂಗ | ಮುಂಬೈ | ಡೆಕ್ಕನ್ | ಡರ್ಬನ್ | 2009 |
| ಜಯದೇವ್ ಉನದ್ಕತ್ | ರೈಸಿಂಗ್ ಪುಣೆ | ಹೈದರಾಬಾದ್ | ಹೈದರಾಬಾದ್ | 2017 |
| ಉಮ್ರಾನ್ ಮಲಿಕ್ | ಹೈದರಾಬಾದ್ | ಪಂಜಾಬ್ | ಮುಂಬೈ | 2022 |

**ಪಾಯಿಂಟ್ ಪಟ್ಟಿ**

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಟೈ | ಅಂಕ | ರನ್‌ರೇಟ್ |
|---|---|---|---|---|---|---|---|
| ಗುಜರಾತ್ | 6 | 5 | 1 | 0 | 0 | 10 | 0.395 |
| ಲಖನೌ | 6 | 4 | 2 | 0 | 0 | 8 | 0.296 |
| ಬೆಂಗಳೂರು | 6 | 4 | 2 | 0 | 0 | 8 | 0.142 |
| ಹೈದರಾಬಾದ್ | 6 | 4 | 2 | 0 | 0 | 8 | -0.077 |
| ರಾಜಸ್ಥಾನ | 5 | 3 | 2 | 0 | 0 | 6 | 0.389 |
| ಕೋಲ್ಕತ್ತ | 6 | 3 | 3 | 0 | 0 | 6 | 0.223 |
| ಪಂಜಾಬ್ | 6 | 3 | 3 | 0 | 0 | 6 | 0.109 |
| ಡೆಲ್ಲಿ | 5 | 2 | 3 | 0 | 0 | 4 | 0.219 |
| ಚೆನ್ನೈ | 6 | 1 | 5 | 0 | 0 | 2 | -0.638 |
| ಮುಂಬೈ | 6 | 0 | 6 | 0 | 0 | 0 | -1.048 |

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

**ಪರ್ಪಲ್ ಕ್ಯಾಪ್** (ಹೆಚ್ಚು ವಿಕೆಟ್ ಗಳಿಸಿದವರು)

| ಆಟಗಾರ | ತಂಡ | ವಿಕೆಟ್ |
|---|---|---|
| ಯಜುವೇಂದ್ರ | ರಾಜಸ್ಥಾನ | 12 |
| ನಟರಾಜನ್ | ಹೈದರಾಬಾದ್ | 12 |
| ಕುಲದೀಪ್ | ಡೆಲ್ಲಿ | 11 |

**ಆರೆಂಜ್ ಕ್ಯಾಪ್** (ಹೆಚ್ಚು ರನ್ ಗಳಿಸಿದವರು)

| ಆಟಗಾರ | ತಂಡ | ರನ್ |
|---|---|---|
| ಜೋಸ್ ಬಟ್ಲರ್ | ರಾಜಸ್ಥಾನ | 272 |
| ರಾಹುಲ್ | ಲಖನೌ | 235 |
| ಹಾರ್ದಿಕ್ | ಗುಜರಾತ್ | 228 |

# ಮಿಲ್ಲರ್ ಬಲದಲ್ಲಿ ಗೆದ್ದ ಟೈಟನ್ಸ್

## ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಐದನೇ ಸೋಲು

**ಪುಣೆ (ಪಿಟಿಐ):** ಭರ್ಜರಿ ಸಿಕ್ಸರ್‌ಗಳ ಮೂಲಕ ಮಿಂಚಿದ ಡೇವಿಡ್ ಮಿಲ್ಲರ್ ಅವರು ಗುಜರಾತ್ ಟೈಟನ್ಸ್ ತಂಡಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ರೋಚಕ ಜಯ ಗಳಿಸಿಕೊಟ್ಟರು. ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಗುಜರಾತ್ 3 ವಿಕೆಟ್‌ಗಳಿಂದ ಮಣಿಸಿತು.

170 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ 19.5 ಓವರ್‌ಗಳಲ್ಲಿ 7ಕ್ಕೆ 170 ರನ್ ಗಳಿಸಿತು. ತಂಡ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆರನೇ ಓವರ್‌ನಲ್ಲಿ 16ಕ್ಕೆ3 ಎಂಬ ಸ್ಥಿತಿಗೆ ತಲುಪಿತ್ತು. 87 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತ್ತು. ಈ ಸಂದರ್ಭದಲ್ಲಿ ಮಿಲ್ಲರ್ (ಔಟಾಗದೆ 94; 51 ಎಸೆತ, 8 ಬೌಂಡರಿ, 6 ಸಿಕ್ಸರ್) ಮತ್ತು ಹಂಗಾಮಿ ನಾಯಕ ರಶೀದ್ ಖಾನ್ (40; 21 ಎ, 2 ಬೌಂ, 3 ಸಿ) ಸ್ಫೋಟಕ 70 ರನ್‌ಗಳನ್ನು ಸೇರಿಸಿ ಪಂದ್ಯದ ಚಿತ್ರಣವನ್ನೇ ಬದಲಿಸಿದರು. ರಶೀದ್ ಔಟಾದ ನಂತರ ಕೊನೆಯ ಓವರ್‌ಗಳಲ್ಲಿ ಒತ್ತಡ ಮೆಟ್ಟಿನಿಂತ ಮಿಲ್ಲರ್ ಏಕಾಂಗಿಯಾಗಿ ತಂಡವನ್ನು ದಡ ಸೇರಿಸಿದರು.

**ಋತುರಾಜ್, ಅಂಬಟಿ ರಾಯುಡು ಮಿಂಚಿನಾಟ:** ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ಮತ್ತು ಮಧ್ಯಮ ಕ್ರಮಾಂಕದ ಅಂಬಟಿ ರಾಯುಡು ಅವರ ಉತ್ತಮ ಜೊತೆಯಾಟದ ಮೂಲಕ ಚೆನ್ನೈ ಸೂಪರ್ ಕಿಂಗ್ಸ್ 5 ವಿಕೆಟ್‌ಗಳಿಗೆ 169 ರನ್ ಕಲೆ ಹಾಕಿತು.

ತೊಡೆಯಲ್ಲಿ ನೋವು ಕಾಣಿಸಿಕೊಂಡದ್ದರಿಂದ ನಾಯಕ ಹಾರ್ದಿಕ್ ಪಾಂಡ್ಯ ಈ ಪಂದ್ಯದಲ್ಲಿ ಕಣಕ್ಕೆ ಇಳಿಯಲಿಲ್ಲ. ಹೀಗಾಗಿ ಗುಜರಾತ್ ತಂಡವನ್ನು ರಶೀದ್ ಖಾನ್ ಮುನ್ನಡೆಸಿದರು.

ಡೇವಿಡ್ ಮಿಲ್ಲರ್ ಬ್ಯಾಟಿಂಗ್– ಪಿಟಿಐ ಚಿತ್ರ

ಟಾಸ್ ಗೆದ್ದ ಅವರು ಚೆನ್ನೈ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು.

ರಾಬಿನ್ ಉತ್ತಪ್ಪ ಮೂರನೇ ಓವರ್‌ನಲ್ಲಿ ಮೊಹಮ್ಮದ್ ಶಮಿ ಅವರ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆರನೇ ಓವರ್‌ನಲ್ಲಿ ಮೋಯಿನ್ ಅಲಿ ಕೂಡ ಔಟಾದರು. ಆಗ ಜೊತೆಗೂಡಿದ ಋತುರಾಜ್ (73; 48 ಎಸೆತ, 5 ಬೌಂಡರಿ, 5 ಸಿಕ್ಸರ್) ಮತ್ತು ಅಂಬಟಿ ರಾಯುಡು (46; 31 ಎ, 4 ಬೌಂ, 2 ಸಿ) ಮೂರನೇ ವಿಕೆಟ್‌ಗೆ 92 ರನ್ ಸೇರಿಸಿದರು. ಅರ್ಧಶತಕದ ಅಂಚಿನಲ್ಲಿ ಅಂಬಟಿ ರಾಯುಡು ಎಡವಿದರು.

ಋತುರಾಜ್ 17ನೇ ಓವರ್‌ನಲ್ಲಿ ಯಶ್ ದಯಾಳ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಶಿವಂ ದುಬೆ ಮತ್ತು ರವೀಂದ್ರ ಜಡೇಜ ಮಿಂಚಿದರು.

**ಸಂಕ್ಷಿಪ್ತ ಸ್ಕೋರು:** 20 ಓವರ್‌ಗಳಲ್ಲಿ 5ಕ್ಕೆ 169 (ಋತುರಾಜ್ ಗಾಯಕವಾಡ್ 73, ಅಂಬಟಿ ರಾಯುಡು 46, ಶಿವಂ ದುಬೆ 19, ರವೀಂದ್ರ ಜಡೇಜ ಔಟಾಗದೆ 22; ಮೊಹಮ್ಮದ್ ಶಮಿ 20ಕ್ಕೆ1, ಯಶ್ ದಯಾಳ್ 40ಕ್ಕೆ1, ಅಲ್ಜರಿ ಜೋಸೆಫ್ 34ಕ್ಕೆ2); ಗುಜರಾತ್ ಟೈಟನ್ಸ್: 19.5 ಓವರ್‌ಗಳಲ್ಲಿ 7ಕ್ಕೆ 170 (ಡೇವಿಡ್ ಮಿಲ್ಲರ್ ಔಟಾಗದೆ 94, ರಶೀದ್ ಖಾನ್ 40; ಮುಕೇಶ್ ಚೌಧರಿ 18ಕ್ಕೆ1, ಮಹೀಶ್ ತೀಕ್ಷಣ 24ಕ್ಕೆ2, ರವೀಂದ್ರ ಜಡೇಜ 25ಕ್ಕೆ1, ಡ್ವೇನ್ ಬ್ರಾವೊ 23ಕ್ಕೆ3). ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 7 ವಿಕೆಟ್‌ಗಳ ಜಯ.

## ‘ಭಾರತ ತಂಡಕ್ಕೆ ಮರಳುವ ಗುರಿ’

**ಮುಂಬೈ (ಪಿಟಿಐ):** ಭಾರತ ತಂಡದಲ್ಲಿ ಮರಳಿ ಸ್ಥಾನ ಪಡೆಯಲು ಸರ್ವಪ್ರಯತ್ನ ನಡೆಸುತ್ತಿದ್ದೇನೆ. ಅದೇ ತಮ್ಮ ಪರಮ ಗುರಿ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಕೆಟ್‌ಕೀಪರ್ – ಬ್ಯಾಟರ್ ದಿನೇಶ್ ಕಾರ್ತಿಕ್ ಹೇಳಿದ್ದಾರೆ.

ಶನಿವಾರ ರಾತ್ರಿ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಬೆಂಗಳೂರು ತಂಡದ ಗೆಲುವಿನ ರೂವಾರಿಯಾಗಿದ್ದರು. 34 ಎಸೆತಗಳಲ್ಲಿ 66 ರನ್ ಗಳಿಸಿದ್ದರು. ಇದೇ ವರ್ಷ ಅವರು ಆರ್‌ಸಿಬಿಗೆ ಸೇರ್ಪಡೆಯಾಗಿದ್ದಾರೆ. ತಂಡವು ಅವರನ್ನು ₹ 5.5 ಕೋಟಿ ಕೊಟ್ಟು ಖರೀದಿಸಿದೆ. ಮೊದಲ ಪಂದ್ಯದಿಂದಲೂ ಅವರು ಅಮೋಘ ಆಟವಾಡುತ್ತಿದ್ದು, ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಎಬಿ ಡಿವಿಲಿಯರ್ಸ್ ಕೊರತೆಯನ್ನು ಅವರು ತುಂಬಿದ್ದಾರೆ.

ದಿನೇಶ್ ಕಾರ್ತಿಕ್

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ 36 ವರ್ಷದ ದಿನೇಶ್, ‘ನನ್ನ ಗುರಿ ತುಂಬಾ ದೊಡ್ಡದಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಸಾಧಿಸಲು ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡುತ್ತಿರುವೆ. ದೇಶದ ತಂಡಕ್ಕೆ ಮರಳಿ ಸೇರಿಕೊಂಡು ಉತ್ತಮ ಕಾಣಿಕೆ ನೀಡುವ ಆದೆ ಇದೆ’ ಎಂದರು.

## ಮೇ 29ರಂದು ಐಪಿಎಲ್ ಮುಕ್ತಾಯ: ಅದ್ದೂರಿ ಸಮಾರಂಭ

**ನವದೆಹಲಿ (ಪಿಟಿಐ):** ಪ್ರಸ್ತುತ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಸಮಾರೋಪ ಸಮಾರಂಭವನ್ನು ಆಯೋಜಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧರಿಸಿದೆ.

ಕೋವಿಡ್ ಕಾರಣದಿಂದ ಉದ್ಘಾಟನೆ ಸಮಾರಂಭವನ್ನು ಕೈಬಿಡಲಾಗಿತ್ತು. ಆದರೆ ಇದೀಗ ಪರಿಸ್ಥಿತಿ ಸುಧಾರಣೆ ಆಗಿರುವುದರಿಂದ ಮೇ 29ರಂದು ನಡೆಯುವ ಫೈನಲ್ ಪಂದ್ಯದ ಸಂದರ್ಭದಲ್ಲಿ ಮುಕ್ತಾಯ ಸಮಾರಂಭ ಆಯೋಜಿಸಲಿದೆ. ಈ ಕಾರ್ಯಕ್ರಮದ ಸಂಘಟನೆಗಾಗಿ ಬಿಡ್ ಕೂಡ ಆಹ್ವಾನಿಸಿದೆ. ‘ಬಿಡ್ ಸಲ್ಲಿಸಲು ಏಪ್ರಿಲ್ 25 ಕೊನೆಯ ದಿನವಾಗಿದೆ. ಒಂದು ಲಕ್ಷ ರೂಪಾಯಿ ಶುಲ್ಕವನ್ನು ಪಾವತಿಸಿ ಟೆಂಡರ್ ಅರ್ಜಿ ನಮೂನೆಯನ್ನು ಪಡೆಯಬಹುದು’ ಎಂದು ಬಿಸಿಸಿಐ ತಿಳಿಸಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲ ಫೈನಲ್ ಪಂದ್ಯ ನಡೆಯುವ ಸಾಧ್ಯತೆ ಇದೆ.

## ಟೆನಿಸ್: ಉಕ್ರೇನ್ ತಂಡಕ್ಕೆ ಸೋಲು

**ಪ್ಯಾರಿಸ್ (ಎಎಫ್‌ಪಿ):** ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್ ಟೂರ್ನಿಯಲ್ಲಿ ಫೈನಲ್ಸ್ ತಲುಪುವ ಉಕ್ರೇನ್ ತಂಡದ ಆಸೆ ಈಡೇರಲಿಲ್ಲ. ಶನಿವಾರ ನಡೆದ ಪಂದ್ಯದಲ್ಲಿ ಆ ತಂಡವು 2-3ರಿಂದ ಅಮೆರಿಕ ಎದುರು ಸೋತಿತು.

ಎರಡು ಸಿಂಗಲ್ಸ್ ಪಂದ್ಯಗಳಲ್ಲಿ ಉಕ್ರೇನ್‌ನ ಡಯಾನಾ ಯೆಸ್ತರ್‌ಮಸ್ಕಾ 6-7, 5-7ರಿಂದ ಅಲಿಸನ್ ರಿಸ್ಕೆ ಎದುರು, ಕ್ಯಾತರಿನಾ ಜವಾತ್ಸಕಾ 2-6, 1-6ರಿಂದ ಜೆಸ್ಸಿಕಾ ಪೆಗುಲಾ ಎದುರು ಸೋತಿದ್ದರು.ಮೂರನೇ ಪಂದ್ಯದಲ್ಲಿ ಡಯಾನಾ 6-3, 6-4ರಿಂದ ಜೆಸ್ಸಿಕಾ ಅವರನ್ನು ಮಣಿಸಿದರೆ, 4ನೇ ಹಣಾಹಣಿ ಯಲ್ಲಿ ಜವಾತ್ಸಕಾ 6-3, 6-4ರಿಂದ ಶೆಲ್ಬಿ ರೋಜರ್ಸ್ ಎದುರು ಜಯಿಸಿದರು. ಡಬಲ್ಸ್‌ನಲ್ಲಿ ಉಕ್ರೇನ್ ಆಟಗಾರ್ತಿಯರು ಸೋತರು.

## ಗೆಲುವಿನ ಲಯಕ್ಕೆ ಮರಳುವ ತವಕದಲ್ಲಿ ನೈಟ್ ರೈಡರ್ಸ್

# ಕೋಲ್ಕತ್ತಕ್ಕೆ ರಾಯಲ್ಸ್ ಎದುರಾಳಿ

**ಮುಂಬೈ (ಪಿಟಿಐ):** ಸತತ ಎರಡು ಪಂದ್ಯಗಳಲ್ಲಿ ಸೋತಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಸೋಲು–ಗೆಲುವಿನ ಮಿಶ್ರ ಫಲ ಕಂಡಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಮುಖಾಮುಖಿಯಾಗಲಿವೆ.

ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಸನ್‌ರೈಸರ್ಸ್ ತಂಡಗಳ ವಿರುದ್ಧ ಕೋಲ್ಕತ್ತ ಹಿಂದಿನ ಎರಡು ಪಂದ್ಯಗಳಲ್ಲಿ ಕ್ರಮವಾಗಿ 44 ರನ್ ಮತ್ತು 7 ವಿಕೆಟ್‌ಗಳಿಂದ ಸೋತಿದೆ. ಈ ವರೆಗೆ ಆಡಿರುವ ಪಂದ್ಯಗಳಲ್ಲಿ ಪೈಕಿ ಮೂರರಲ್ಲಿ ಗೆದ್ದಿದ್ದು ಮೂರರಲ್ಲಿ ಸೋತಿದೆ. ರಾಯಲ್ಸ್ ಐದು ಪಂದ್ಯಗಳಲ್ಲಿ ಮೂರನ್ನು ಗೆದ್ದುಕೊಂಡಿದೆ.

ಕೋಲ್ಕತ್ತದ ಬ್ಯಾಟರ್‌ಗಳ ಪೈಕಿ ಆ್ಯಂಡ್ರೆ ರಸೆಲ್ ಅವರನ್ನು ಹೊರತುಪಡಿಸಿದರೆ ಉಳಿದ ಯಾರಿಗೂ ಸ್ಥಿರ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ಮತ್ತು ಮಧ್ಯಮ ವೇಗಿಗಳಾದ ಉಮೇಶ್ ಯಾದವ್ ಮತ್ತು ಪ್ಯಾಟ್ ಕಮಿನ್ಸ್ ಅವರಿಗೆ ಸಂಪೂರ್ಣವಾಗಿ ಸಾಮರ್ಥ್ಯ ಹೊರಗೆಡವಲು ಸಾಧ್ಯವಾಗಲಿಲ್ಲ. ನಾಯಕ ಶ್ರೇಯಸ್ ಅಯ್ಯರ್ ಫಾರ್ಮ್‌ನಲ್ಲಿಲ್ಲ ಎಂಬುದು ತಂಡದ ಚಿಂತೆಯನ್ನು ಹೆಚ್ಚಿಸಿದೆ. ನಿತೇಶ್ ರಾಣಾ, ವೆಂಕಟೇಶ್ ಅಯ್ಯರ್ ಮತ್ತು ಸ್ಯಾಮ್ ಬಿಲಿಂಗ್ಸ್ ಅವರಿಗೂ ನಿರೀಕ್ಷೆಗೆ ತಕ್ಕಂತೆ ಆಡಲು ಆಗಲಿಲ್ಲ.

ಆ್ಯಂಡ್ರೆ ರಸೆಲ್ –ಪಿಟಿಐ ಚಿತ್ರ

| ಆಟಗಾರ | ತಂಡ | ಪಂದ್ಯ | ರನ್ | ಗರಿಷ್ಠ | ಬೌಂಡರಿ | ಸಿಕ್ಸರ್ |
|---|---|---|---|---|---|---|
| ಸಂಜು ಸ್ಯಾಮ್ಸನ್ | ರಾಜಸ್ಥಾನ | 5 | 117 | 55 | 6 | 10 |
| ಶ್ರೇಯಸ್ ಅಯ್ಯರ್ | ಕೋಲ್ಕತ್ತ | 6 | 151 | 54 | 18 | 2 |

ರಾಜಸ್ಥಾನ ರಾಯಲ್ಸ್‌ನ ಜೋಸ್ ಬಟ್ಲರ್ ಮತ್ತು ಯಜುವೇಂದ್ರ ಚಾಹಲ್ ಕ್ರಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉತ್ತಮ ಸಾಧನೆ ಮಾಡಿದವರ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾರೆ. ಚಾಹಲ್ 6.80 ಇಕಾನಮಿಯೊಂದಿಗೆ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅವರನ್ನು ಕೋಲ್ಕತ್ತ ಬ್ಯಾಟರ್‌ಗಳು ಹೇಗೆ ಎದುರಿಸುವರು ಎಂಬುದು ಕುತೂಹಲ ಕೆರಳಿಸಿದೆ. ರವಿಚಂದ್ರನ್ ಅಶ್ವಿನ್ ಫಾರ್ಮ್‌ನಲ್ಲಿಲ್ಲದೆ ಇರುವುದು ತಂಡದ ಚಿಂತೆಗೆ ಕಾರಣವಾಗಿದೆ. ಈವರೆಗೆ ಅವರ ಖಾತೆಗೆ ಒಂದು ವಿಕೆಟ್ ಮಾತ್ರ ಸೇರಿದೆ. ನಾಯಕ ಸಂಜು ಸ್ಯಾಮ್ಸನ್ ಮತ್ತು ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರ ಮೇಲೆ ತಂಡ ನಿರೀಕ್ಷೆ ಇರಿಸಿಕೊಂಡಿದೆ.

**ಪಂದ್ಯ ಅರಂಭ:** ರಾತ್ರಿ 7.30
**ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

## ರಾಷ್ಟ್ರೀಯ ಕುಸ್ತಿ: ರಫೀಕ್‌ಗೆ ಚಿನ್ನ

**ದಾವಣಗೆರೆ:** ಧಾರವಾಡದ ಕುಸ್ತಿಪಟು ಮಹಮ್ಮದ್ ರಫೀಕ್ ಹೊಳಿ ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ ಫೆಡರೇಷನ್ ಕಪ್ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಸ್ಪರ್ಧೆಯಲ್ಲಿ ರಫೀಕ್ ಅವರು ಆರ್ಮಿಯ ಎಸ್‌ಎಸ್‌ಸಿಬಿ ತಂಡವನ್ನು ಪ್ರತಿನಿಧಿಸಿದರು. 77 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಹರಿಯಾಣದ ಸೋನು ಅವರನ್ನು 7-3ರಿಂದ ಸೋಲಿಸಿ ಚಿನ್ನ ಗೆದ್ದರು. ದಾವಣಗೆರೆ ಕ್ರೀಡಾ ನಿಲಯದ ಕುಸ್ತಿ ತರಬೇತಿ ಕೇಂದ್ರದ ವಿದ್ಯಾರ್ಥಿ ಮಧುಸೂದನ್ ಅವರು ರಾಜ್ಯವನ್ನು ಪ್ರತಿನಿಧಿಸಿ +97-130 ಕೆ.ಜಿ. ವಿಭಾಗದಲ್ಲಿ ಕಂಚು ಪಡೆದರು. ಶಿವಾನಂದ ಆರ್. ಅವರು ತರಬೇತಿ ನೀಡಿದ್ದರು.

ರಫೀಕ್ ಹೊಳಿ (ಎಡ) ಮತ್ತು ಮಧುಸೂದನ್

## ಹಾಕಿ: ಹರಿಯಾಣ ಚಾಂಪಿಯನ್

**ಭೋಪಾಲ್ (ಪಿಟಿಐ):** ಹರಿಯಾಣ ತಂಡವು 12ನೇ ರಾಷ್ಟ್ರೀಯ ಪುರುಷರ ಸೀನಿಯರ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಭಾನುವಾರ ನಡೆದ ಫೈನಲ್ ಪಂದ್ಯದ ಶೂಟೌಟ್‌ನಲ್ಲಿ ಹರಿಯಾಣ 3-1ರಿಂದ ತಮಿಳುನಾಡು ತಂಡವನ್ನು ಸೋಲಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1-1ರ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್ ಮೊರೆ ಹೋಗಲಾಗಿತ್ತು.

**ಕರ್ನಾಟಕಕ್ಕೆ ಮೂರನೇ ಸ್ಥಾನ:** ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 4-3ರಿಂದ ಮಹಾರಾಷ್ಟ್ರ ವಿರುದ್ಧ ಗೆದ್ದಿತು.

# ಅಂಧರ ಚೆಸ್: ಶಶಿಧರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ರಾಯಚೂರು:** ಮೈಸೂರಿನ ಕೆ.ಎಂ. ಶಶಿಧರ್, ಮಾಣಿಕಪ್ರಭು ಅಂಧರ ಶಾಲೆಯಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯಮಟ್ಟದ ಅಂಧರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದರು.

ಶಶಿಧರ್ ಅವರು ಒಟ್ಟು ಏಳು ಅಂಕಗಳನ್ನು ಗಳಿಸಿ, ಪ್ರಶಸ್ತಿ ವಿಜೇತರಾದರು. ಕಲಬುರಗಿಯ ಕಿರಣಕುಮಾರ್ ಎ.ಸಿಂಪಿ ದ್ವಿತೀಯ ಹಾಗೂ ರಾಯಚೂರಿನ ಬಸಲಿಂಗಪ್ಪ ಮರಡ್ಡಿ ತೃತೀಯ ಬಹುಮಾನ ಗಳಿಸಿದರು. ಬೆಂಗಳೂರಿನ ರಮೇಶ್ ಎ.ಆರ್. ನಾಲ್ಕನೇ ಹಾಗೂ ಮೈಸೂರಿನ ನಾಗರಾಜ ಕೆ.ಎಸ್.ಐದನೇ ಸ್ಥಾನ ಗಳಿಸಿದರು. ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಜ್ಯೋತಿ ಬಿ. ಪ್ರಶಸ್ತಿ ಜಯಿಸಿದರು.

ಕಲಬುರಗಿಯ ಲಕ್ಷ್ಮೀಕಾಂತ ಕೆ.ಎಸ್., ಬೆಂಗಳೂರಿನ ವಿಜಯ ಇ., ಸಾಗರ ಜಿ.ಎಚ್., ಹುಬ್ಬಳ್ಳಿಯ ಮಹೇಶ ಶೀಗಿಹಳ್ಳಿಮಠ, ವಿಜಯಪುರದ ಶಿವಾನಂದ ಕಾಂಬಳೆ, ರಾಯಚೂರಿನ ಕೆಂಚಪ್ಪ, ಬೆಂಗಳೂರಿನ ಶರತ್ ಎಂ., ಪ್ರವೀಣಾ ಪಿ.ಎಚ್., ರಾಯಚೂರಿನ ರಾಮಂಜಿನಯ್ಯ, ಬೆಳಗಾವಿಯ ನಾಗೇಶ ಮಲಕನ್ನವರ, ಹುಬ್ಬಳ್ಳಿಯ ಗಿರೀಶ ಪರವಾಣಿ, ರಾಯಚೂರಿನ ಯಂಕಪ್ಪ ನಾಯಕ, ಮೈಸೂರಿನ ಕೇಶವಮೂರ್ತಿ, ಬೆಂಗಳೂರಿನ ಪ್ರವೀಣ ಡಿ., ಮೈಸೂರಿನ ಲಿಂಗರಾಜು, ಬೆಂಗಳೂರಿನ ಮಂಜುನಾಥ ಟಿ., ಬೆಳಗಾವಿಯ ಸಂತೋಷ ಬಾನಿ, ಪ್ರವೀಣಕುಮಾರ್ ನರಗುಂದ, ರಾಯಚೂರಿನ ವಾಶಿಮ್ ಅಕ್ರಮ್ ಜೋಗಿ ನಂತರದ ಸ್ಥಾನ ಗಳಿಸಿದರು.

## ಟೆನಿಸ್: ಸ್ಟಿಫಾನೊಸ್‌ಗೆ ಪ್ರಶಸ್ತಿ

**ಮಾಂಟೆ ಕಾರ್ಲೊ (ಎಎಫ್‌ಪಿ):** ಗ್ರೀಕ್ ಆಟಗಾರ ಸ್ಟಿಫಾನೊಸ್ ಸಿಟ್ಸಿಪಾಸ್ ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಪ್ರಶಸ್ತಿಯನ್ನು ಉಳಿಸಿಕೊಂಡರು.

ಪ್ರಿನ್ಸಿಪಾಲಿಟಿ ಆಫ್ ಮೊನಾಕೊದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸಿಟ್ಸಿಪಾಸ್ 6-3, 7-6 (7-3) ರಿಂದ ಸ್ಪೇನ್ ದೇಶದ ಅಲೆಜಾಂಡ್ರೊ ಡೇವಿಡೊವಿಚ್ ಫೊಕಿನಾ ವಿರುದ್ಧ ಜಯಿಸಿದರು.

ಒಂದು ಗಂಟೆ 36 ನಿಮಿಷಗಳವರೆಗೆ ನಡೆದ ಹಣಾಹಣಿಯಲ್ಲಿ ಮೂರನೇ ಶ್ರೇಯಾಂಕದ ಸಿಟ್ಸಿಪಾಸ್ 21 ವಿನ್ನರ್‌ಗಳನ್ನು ಸಿಡಿಸಿದರು. 11 ತಪ್ಪುಗಳನ್ನೆಸಗಿದರು. ಮೊದಲ ಸೆಟ್‌ನಲ್ಲಿ ಸ್ವಲ್ಪ ಸರಳವಾಗಿಯೇ ಜಯಿಸಿದ ಅವರು, ಎರಡನೇ ಸೆಟ್‌ನಲ್ಲಿ ಎದುರಾಳಿಯಿಂದ ತೀವ್ರ ಪೈಪೋಟಿ ಎದುರಿಸಿದರು. ಆದರೆ, ಸಿಟ್ಸಿಪಾಸ್ ಈ ಸೆಟ್ ಜಯಿಸುವಲ್ಲಿ ಯಶಸ್ವಿಯಾದರು. ಸತತ ಎರಡನೇ ಬಾರಿ ಮಾಂಟೆ ಕಾರ್ಲೊ ಪ್ರಶಸ್ತಿ ಗೆದ್ದ ಖ್ಯಾತನಾಮರ ಸಾಲಿಗೂ ಅವರು ಸೇರಿದ್ದಾರೆ. ಈ ಹಿಂದೆ ರಫೆಲ್ ನಡಾಲ್, ಜುವಾನ್ ಕಾರ್ಲೋಸ್ ಫೆರೆರೊ, ಥಾಮಸ್ ಮಸ್ಟರ್ ಮತ್ತು ಬೋರ್ನ್ ಬೋರ್ಗ್ ಈ ಸಾಧನೆ ಮಾಡಿದ್ದರು.

ಟ್ರೋಫಿಯೊಂದಿಗೆ ಸ್ಟಿಫಾನೊಸ್ ಸಿಟ್ಸಿಪಾಸ್ –ಎಎಫ್‌ಪಿ ಚಿತ್ರ

## ಸೌತಾಂಪ್ಟನ್ ತಂಡಕ್ಕೆ ರೋಚಕ ಜಯ

**ಸೌತಾಂಪ್ಟನ್ (ರಾಯಿಟರ್ಸ್):** ಮೊದಲಾರ್ಧದ ಕೊನೆಯ ನಿಮಿಷದಲ್ಲಿ ಜಾನ್ ಬೆಡ್ನಾರೆಕ್ ಗಳಿಸಿದ ಗೋಲಿನ ಮೂಲಕ ಸೌತಾಂಪ್ಟನ್ ತಂಡ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ರೋಚಕ ಜಯ ಗಳಿಸಿತು.

ಶನಿವಾರ ರಾತ್ರಿ ಸೇಂಟ್ ಮೇರಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರ್ಸೆನಲ್ 0-1ರಲ್ಲಿ ಸೌತಾಂಪ್ಟನ್‌ಗೆ ಮಣಿಯಿತು. ಇದು ತಂಡದ ಸತತ ಮೂರನೇ ಸೋಲು. ಪಂದ್ಯುದ್ದಕ್ಕೂ ಆರ್ಸೆನಲ್ ಹಿಡಿತ ಸಾಧಿಸಿತ್ತು. ಆದರೂ ಚೆಂಡನ್ನು ಗುರಿ ಮುಟ್ಟಿಸಲು ತಂಡದ ಆಟಗಾರರಿಗೆ ಸಾಧ್ಯವಾಗಲಿಲ್ಲ. ಸೌತಾಂಪ್ಟನ್ ಗೋಲ್‌ಕೀಪರ್ ಫ್ರೇಜರ್ ಫೋರ್ಸ್ಟರ್ ಅವರು ಆರ್ಸೆನಲ್ ಫಾರ್ವರ್ಡ್ ವಿಭಾಗದ ಮುಂದೆ ಗೋಡೆಯಾಗಿ ನಿಂತರು. ಗುರಿಯತ್ತ 23 ಬಾರಿ ಚೆಂಡನ್ನು ಒದ್ದರೂ ಯಶಸ್ಸು ಕಾಣಲು ಆರ್ಸೆನಲ್ ವಿಫಲವಾಯಿತು. 44ನೇ ನಿಮಿಷದಲ್ಲಿ ಜಾನ್ ಬೆಡ್ನಾರೆಕ್ ಚೆಂಡನ್ನು ಗುರಿ ತಲುಪಿಸಿದರು.

# ಫುಟ್‌ಬಾಲ್ ಆಟಗಾರ ವಿನೋದ್ ನಿಧನ

**ಬೆಂಗಳೂರು:** ರಾಜ್ಯ ಸೀನಿಯರ್, ಜೂನಿಯರ್ ಮತ್ತು ಸಬ್‌ಜೂನಿಯರ್ ಫುಟ್‌ಬಾಲ್ ತಂಡಗಳಲ್ಲಿ ಆಡಿದ್ದ ಜೆ.ವಿನೋದ್ ಕುಮಾರ್ (41) ಭಾನುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ಅಶೋಕನಗರ ನಿವಾಸಿಯಾಗಿದ್ದ ಅವರು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಮೂರನೇ ಡಿವಿಷನ್‌ನಲ್ಲಿ ಆಡುವ ತಂಡಗಳಿಗೆ ಕೋಚಿಂಗ್ ಮಾಡುತ್ತಿದ್ದರು. ವಿಬ್‌ಗ್ಯೋರ್ ಶಾಲಾ ಫುಟ್‌ಬಾಲ್ ತಂಡಕ್ಕೂ ಕೋಚ್ ಆಗಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.2005ರಲ್ಲಿ ಜಾರ್ಖಂಡ್‌ನಲ್ಲಿ ನಡೆದಿದ್ದ ಸಬ್ ಜೂನಿಯರ್ ರಾಷ್ಟ್ರೀಯ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಿದ್ದರು. 2006ರಲ್ಲಿ ಸಿಕಂದರಾಬಾದ್‌ನಲ್ಲಿ ನಡೆದ ಸಬ್ ಜೂನಿಯರ್ ಟೂರ್ನಿಯಲ್ಲೂ ಆಡಿದ್ದು ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲೂ ರಾಜ್ಯವನ್ನು ಪ್ರತಿನಿಧಿಸಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

ವಿನೋದ್

ಮೈಕೊ ಎಫ್‌ಸಿ, ಸದರ್ನ್ ಬ್ಲೂಸ್ ಎಫ್‌ಸಿ, ಮಹಾರಾಜ ಸೋಷಿಯಲ್ಸ್ ಎಫ್‌ಸಿ ಮತ್ತು ರೈಲ್ವೆ ತಂಡದಲ್ಲಿ ಆಡಿದ್ದಾರೆ. ಭಾನುವಾರ ವಿಲ್ಸನ್ ಗಾರ್ಡನ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

EXAM DH ಪ್ರಜಾವಾಣಿ MASTERMIND™
ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ, ಬ್ಯಾಂಕ್ ಪಿ.ಓ, ಎಫ್.ಡಿ.ಎ, ಮತ್ತು ಇನ್ನೂ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳ
ನಿಮ್ಮ ಸಿದ್ಧತೆಯಲ್ಲಿ ಮುನ್ನಡೆ ಪಡೆಯಿರಿ
ವೈಶಿಷ್ಟ್ಯಗಳು
ದ್ವಿಭಾಷಿ ಇ–ಪೇಪರ್: ಇಂಗ್ಲಿಷ್ ಮತ್ತು ಕನ್ನಡದಲ್ಲಿ, ವಾರದ 5 ದಿನ ಲಭ್ಯ
ಮಾದರಿ ಪ್ರಶ್ನೆ ಪತ್ರಿಕೆ: ಪರೀಕ್ಷಾ ಸಹಾಯಕ ಟಿಪ್ಸ್, ಅಪ್‌ಡೇಟ್ಸ್, ಅಭ್ಯಾಸ ಪ್ರಶ್ನೆ ಪತ್ರಿಕೆಗಳು
ಬಹು ಆಯ್ಕೆ ಪ್ರಶ್ನೆ: ಪ್ರತಿದಿನ ವಾಸ್ತವಿಕ ಮತ್ತು ಪರಿಕಲ್ಪನೆ ಆಧಾರಿತ ಅಣಕು ಪ್ರಶ್ನೆಗಳು
ವಿಡಿಯೊಗಳು: ಪ್ರಚಲಿತ ವಿದ್ಯಮಾನ ಹಾಗೂ ಮುಖ್ಯ ವಿಷಯಗಳ ವಿವರಣಾತ್ಮಕ ವಿಡಿಯೊಗಳು

ವಿಶೇಷ ಕೊಡುಗೆ* ₹599/- ₹399/- ಒಂದು ವರ್ಷದ ಅವಧಿಗೆ
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ WWW.EXAMMASTERMIND.COMಗೆ ಭೇಟಿ ಕೊಡಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9606966128
*ಷರತ್ತುಗಳು ಅನ್ವಯ

### ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿ: ಡ್ರಾ ಪಂದ್ಯದಲ್ಲಿ ಒಡಿಶಾ ತಂಡ

# ಕರ್ನಾಟಕದ ಸುಧೀರ್ ಕಾಲ್ಚಳಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೊದಲಾರ್ಧದಲ್ಲಿ ಎರಡು ಗೋಲುಗಳ ಮುನ್ನಡೆ ಸಾಧಿಸಿದ್ದರೂ ದ್ವಿತೀಯಾರ್ಧದಲ್ಲಿ ಗೋಲುಗಳನ್ನು ಬಿಟ್ಟುಕೊಟ್ಟ ಕರ್ನಾಟಕ ತಂಡ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಡ್ರಾಗೆ ಸಮಾಧಾನಪಟ್ಟುಕೊಂಡಿತು.

ಕೇರಳದ ಮಲಪ್ಪುರಂನ ಕೋಟಪ್ಪಡಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಅಂತಿಮ ಸುತ್ತಿನ 'ಡಿ' ಗುಂಪಿನ ಪಂದ್ಯವನ್ನು ಕರ್ನಾಟಕ ಮತ್ತು ಒಡಿಶಾ 3–3ರಲ್ಲಿ ಡ್ರಾ ಮಾಡಿಕೊಂಡವು.

15ನೇ ನಿಮಿಷದಲ್ಲಿ ಜಮೀರ್ ಓರಂ ಗಳಿಸಿದ ಗೋಲಿನೊಂದಿಗೆ ಒಡಿಶಾ ಮುನ್ನಡೆ ಗಳಿಸಿತ್ತು. ಆದರೆ 29ನೇ ನಿಮಿಷದಲ್ಲಿ ಸುಧೀರ್ ಕೋಟಿಕೇಲ ಮತ್ತು 34ನೇ ನಿಮಿಷದಲ್ಲಿ ಬಾವು ನಿಶಾದ್ ಚೆಂಡನ್ನು ಗುರಿ ಮುಟ್ಟಿಸಿ ಕರ್ನಾಟಕಕ್ಕೆ ಮುನ್ನಡೆ ಗಳಿಸಿಕೊಟ್ಟರು. ವಿರಾಮದ ನಂತರ ಸುಧೀರ್ ಮತ್ತೆ ಕಾಲ್ಚಳಕ ತೋರಿದರು. 62ನೇ ನಿಮಿಷದಲ್ಲಿ ಗೋಲು ಗಳಿಸಿ ತಂಡದ ಮುನ್ನಡೆಯನ್ನು 3–1ಕ್ಕೆ ಏರಿಸಿದರು.

ಕರ್ನಾಟಕ ಮತ್ತು ಒಡಿಶಾ ತಂಡಗಳ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು –ಎಐಎಫ್‌ಎಫ್ ವೆಬ್‌ಸೈಟ್ ಚಿತ್ರ

ಮೂರೇ ನಿಮಿಷಗಳಲ್ಲಿ ತಿರುಗೇಟು ನೀಡಿದ ಒಡಿಶಾ ತಂಡದ ಬಿಕಾಸ್ ಕುಮಾರ್ ಸಾಹು ಅವರ ಗೋಲಿನ ಮೂಲಕ ಹಿನ್ನಡೆಯನ್ನು ಕುಗ್ಗಿಸಿಕೊಂಡಿತು. ಆದರೂ ಕರ್ನಾಟಕದ ಭರವಸೆ ಉಳಿದಿತ್ತು. ಪಂದ್ಯ ಮುಂದುವರಿದಂತೆ ಆಕ್ರಮಣವನ್ನು ಹೆಚ್ಚಿಸಿದ ಒಡಿಶಾ 76ನೇ ನಿಮಿಷದಲ್ಲಿ ಫಲ ಕಂಡಿತು. ಚಂದ್ರ ಮುರುಡಿ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ಕೊನೆಯ ನಿಮಿಷದಲ್ಲಿ ದೂರದಿಂದ ಚೆಂಡನ್ನು ಒದ್ದ ಅಂಕಿತ್ ಅವರು ಕರ್ನಾಟಕಕ್ಕೆ ಜಯ ತಂದುಕೊಡಲು ಪ್ರಯತ್ನಿಸಿದರು. ಆದರೆ ಒಡಿಶಾ ಗೋಲ್‌ಕೀಪರ್ ಚಿನ್ಮಯ ಶೇಖರ್ ಅಪಾಯವನ್ನು ತಪ್ಪಿಸುವಲ್ಲಿ ಯಶಸ್ವಿಯಾದರು. ಮಂಗಳವಾರ ನಡೆಯಲಿರುವ ಪಂದ್ಯಗಳಲ್ಲಿ ಕರ್ನಾಟಕ ತಂಡ ಗುಜರಾತ್ ವಿರುದ್ಧ ಮತ್ತು ಒಡಿಶಾ ತಂಡ ಮಣಿಪುರವನ್ನು ಎದುರಿಸಲಿದೆ.

## ಫೈನಲ್‌ಗೆ ಎಚ್‌ಬಿಆರ್, ಕೋರಮಂಗಲ

### ರಾಜ್ಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ಎಂ.ಎನ್.ಕೆ. ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ರಾಜ್ಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿವೆ. ಬಾಲಕಿಯರ ವಿಭಾಗದಲ್ಲಿ ಎಂಸಿಎಚ್‌ಎಸ್ ಮತ್ತು ಕೋರಮಂಗಲ ತಂಡಗಳು ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಮೊದಲ ಲೀಗ್ ಪಂದ್ಯದಲ್ಲಿ ಎಚ್‌ಬಿಆರ್ 55–23ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು ಗೆದ್ದಿತು. ವಿಜೇತ ತಂಡದ ಸಂವೇಗ್ 20 ಪಾಯಿಂಟ್ಸ್ ಕಲೆಹಾಕಿದರೆ, ಚತ್ಮುರ್ 14 ಪಾಯಿಂಟ್ಸ್ ಗಳಿಸಿದರು. ಎರಡನೇ ಲೀಗ್‌ನಲ್ಲಿ ಎಚ್‌ಬಿಆರ್ 52–22ರಿಂದ ಭಾರತ್ ಎಸ್‌ಯು ವಿರುದ್ಧ ಗೆದ್ದಿತು.

ಬಾಲಕರ ವಿಭಾಗದ ನಾಲ್ಕರ ಘಟ್ಟದ ಮೊದಲ ಲೀಗ್‌ನಲ್ಲಿ ಎಂ.ಎನ್.ಕೆ. ರಾವ್ 35– 31ರಿಂದ ಭಾರತ್ ಎಸ್‌ಯು ತಂಡವನ್ನು ಸೋಲಿಸಿತು. ಎರಡನೇ ಲೀಗ್‌ನಲ್ಲಿ 43–41ರಿಂದ ಬೆಂಗಳೂರು ಸ್ಪೋರ್ಟಿಂಗ್ ತಂಡವನ್ನು ಮಣಿಸಿತು. ಬಾಲಕಿಯರ ವಿಭಾಗದ ಸೆಮಿಫೈನಲ್ ಮೊದಲ ಲೀಗ್‌ನಲ್ಲಿ ಜಯಶ್ರೀ ಗಳಿಸಿದ ಅಮೋಘ 28 ಪಾಯಿಂಟ್ಸ್ ಬಲದಿಂದ ಕೋರಮಂಗಲ 52–32ರಿಂದ ನ್ಯಾಷನಲ್ಸ್ ಮೈಸೂರು ತಂಡವನ್ನು ಪರಾಭವಗೊಳಿಸಿತು. ಎರಡನೇ ಲೀಗ್‌ನಲ್ಲಿ 62–45ರಿಂದ ಅಪ್ಪಯ್ಯ ಕ್ಲಬ್ ಎದುರು ಗೆದ್ದಿತು. ಈ ಪಂದ್ಯದಲ್ಲಿಯೂ ಮಿಂಚಿದ ಜಯಶ್ರೀ 30 ಪಾಯಿಂಟ್ಸ್ ಗಳಿಸಿದರು. ಸೆಮಿಫೈನಲ್‌ನ ಮೊದಲ ಲೀಗ್‌ನಲ್ಲಿ ಎಂಸಿಎಚ್‌ಎಸ್ 48–34ರಿಂದ ಅಪ್ಪಯ್ಯ ಕ್ಲಬ್ ಎದುರು ಗೆದ್ದಿತು. ವಿಜೇತ ತಂಡದ ಅದಿತಿ 31 ಪಾಯಿಂಟ್ಸ್ ಗಳಿಸಿದರು. ಎರಡನೇ ಲೀಗ್‌ನಲ್ಲಿ ಎಂಸಿಎಚ್‌ಎಸ್ 44–30ರಿಂದ ನ್ಯಾಷನಲ್ ಮೈಸೂರು ತಂಡಕ್ಕೆ ಸೋಲುಣಿಸಿತು.

ಎಚ್‌ಬಿಆರ್ ಬಿ.ಸಿ. ತಂಡದ ಅಭುಯ್ ಶಶಿಧರ್ (ಎಡ) ಮತ್ತು ಬೆಂಗಳೂರು ಸ್ಪೋರ್ಟಿಂಗ್‌ನ ಜಯ ಸಾಯಿ ಕಿರಣ್ ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು– ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

## ನೆಟ್‌ಬಾಲ್: ಹಾಸನ, ಬೆಂಗಳೂರು ತಂಡಗಳಿಗೆ ಪ್ರಶಸ್ತಿ

**ಬೆಂಗಳೂರು:** ಬೆಂಗಳೂರು ನಗರ ಮತ್ತು ಹಾಸನ ತಂಡಗಳು ರಾಜ್ಯ ಮಿನಿ ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿವೆ.

ಕನಕಪುರದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಬಾಲಕರ ಫೈನಲ್‌ನಲ್ಲಿ ಬೆಂಗಳೂರು ನಗರ ತಂಡವು 34–31ರಿಂದ ಹಾಸನ ತಂಡಕ್ಕೆ ಸೋಲುಣಿಸಿತು.

ಸೆಮಿಫೈನಲ್ ಪಂದ್ಯಗಳಲ್ಲಿ ಬೆಂಗಳೂರು ನಗರ 20–12ರಿಂದ ಬೆಳಗಾವಿ ಎದುರು, ಹಾಸನ 27–12ರಿಂದ ಚಾಮರಾಜನಗರ ವಿರುದ್ಧ ಜಯ ಸಾಧಿಸಿದ್ದವು.

ಬಾಲಕಿಯರ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಹಾಸನ 43–18ರಿಂದ ಬೆಂಗಳೂರು ನಗರ ತಂಡಕ್ಕೆ ಸೋಲುಣಿಸಿತು. ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಬೆಂಗಳೂರು ನಗರ 22–16ರಿಂದ ಮೈಸೂರು ತಂಡವನ್ನು, ಹಾಸನ 18–10ರಿಂದ ಚಾಮರಾಜನಗರ ತಂಡವನ್ನು ಮಣಿಸಿದವು.

**ಮಿನಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ತಂಡಗಳು:** ಬಾಲಕರು: ಬೆಂಗಳೂರು ನಗರ, ಹಾಸನ, ಚಾಮರಾಜನಗರ, ಬೆಳಗಾವಿ, ರಾಮನಗರ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ಗ್ರಾಮಾಂತರ.

ಬಾಲಕಿಯರು: ಬೆಂಗಳೂರು ನಗರ, ಹಾಸನ, ಚಾಮರಾಜನಗರ, ಮೈಸೂರು, ದಕ್ಷಿಣ ಕನ್ನಡ, ದಾವಣಗೆರೆ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ.

## ಟಿಟಿ ಆಟಗಾರ ಅಪಘಾತದಲ್ಲಿ ಸಾವು

ವಿಶ್ವ –ಟ್ವಿಟರ್ ಚಿತ್ರ

**ಶಿಲಾಂಗ್ (ಪಿಟಿಐ):** ತಮಿಳುನಾಡಿನ ಯುವ ಟೇಬಲ್ ಟೆನಿಸ್ ಆಟಗಾರ ವಿಶ್ವ ದೀನದಯಾಳನ್ ರಸ್ತೆ ಅಪಘಾತದಲ್ಲಿ ಭಾನುವಾರ ಸಾವಿಗೀಡಾಗಿದ್ದಾರೆ. ಶಿಲಾಂಗ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿತ್ತು.

18 ವರ್ಷದ ವಿಶ್ವ ಅವರು ತಂಡದ ಮೂವರು ಆಟಗಾರರ ಜೊತೆ ಗುವಾಹಟಿಯಿಂದ ಶಿಲಾಂಗ್‌ಗೆ ಕಾರಿನಲ್ಲಿ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಮುಂಭಾಗದಿಂದ ಬಂದ 12 ಚಕ್ರಗಳ ಟ್ರೇಲರ್ ರಸ್ತೆ ವಿಭಜಕಕ್ಕೆ ಗುದ್ದಿ ಕಾರಿಗೆ ಡಿಕ್ಕಿ ಹೊಡೆದಿದೆ. ಕಾರು ಚಾಲಕ ಸ್ಥಳದಲ್ಲೇ ಸಾವಿಗೀಡಾಗಿದ್ದು ವಿಶ್ವ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ರಮೇಶ್ ಸಂತೋಷ್ ಕುಮಾರ್, ಅವಿನಾಶ್ ಪ್ರಸನ್ನಜಿ ಮತ್ತು ಕಿಶೋರ್ ಕುಮಾರ್ ಗಂಭೀರ ಗಾಯಗೊಂಡಿದ್ದಾರೆ ಎಂದು ಭಾರತ ಟೇಬಲ್ ಟೆನಿಸ್ ಫೆಡರೇಷನ್ ತಿಳಿಸಿದೆ.

ರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ವಿಶ್ವ ಅವರು ಅಂತರರಾಷ್ಟ್ರೀಯ ಟೂರ್ನಿಗಳಲ್ಲೂ ಪದಕ ಗಳಿಸಿದ್ದಾರೆ. ಇದೇ 27ರಿಂದ ಆಸ್ಟ್ರಿಯಾದ ಲಿನ್ಜ್‌ನಲ್ಲಿ ನಡೆಯಲಿರುವ ಡಬ್ಲ್ಯುಟಿಟಿ ಯೂತ್ ಕಂಟೆಂಡರ್‌ನಲ್ಲಿ ಅವರು ಪಾಲ್ಗೊಳ್ಳಬೇಕಾಗಿತ್ತು.

## 100 ಮೀ. ಓಟ: ಎಲೈನ್ ಥಾಮ್ಸನ್ ದಾಖಲೆ

**ಕ್ಯಾಲಿಫೋರ್ನಿಯಾ (ರಾಯಿಟರ್ಸ್):** ಐದು ಬಾರಿಯ ಒಲಿಂಪಿಕ್ಸ್ ಚಾಂಪಿಯನ್, ಜಮೈಕಾದ ಎಲೈನ್ ಥಾಮ್ಸನ್ ಹೆರಾ ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಈ ವರ್ಷದ ದಾಖಲೆ ಬರೆದರು.

ಕ್ಯಾಲಿಫೋರ್ನಿಯಾದ ವಾಲ್‌ನಟ್‌ನಲ್ಲಿ ನಡೆದ ಗೋಲ್ಡನ್ ಗೇಮ್ಸ್‌ನ ಸೆಮಿಫೈನಲ್‌ನಲ್ಲಿ ಅವರು 10.89 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಈ ಸಾಧನೆ ಮಾಡಿದರು. ಆದರೆ ಫೈನಲ್‌ನಲ್ಲಿ ಓಡಲು ಅವರು ನಿರಾಕರಿಸಿದರು. ಅದಕ್ಕೆ ಯಾವುದೇ ಕಾರಣವನ್ನೂ ನೀಡಲಿಲ್ಲ.



ಎಲೈನ್ ಥಾಮ್ಸನ್– ಎಎಫ್‌ಪಿ ಚಿತ್ರ

'ಅಂಗಣಕ್ಕೆ ಮರಳಿದ ಮೊದಲ ಕೂಟದಲ್ಲೇ 10.89 ಸೆಕೆಂಡುಗಳ ಸಾಧನೆ ಮಾಡಿದ್ದು ಸಂತಸ ತಂದಿದೆ' ಎಂದು ಎಲೈನ್ ಅವರು ಟ್ವೀಟ್ ಮಾಡಿದ್ದಾರೆ.

ಟೋಕಿಯೊ ಒಲಿಂಪಿಕ್ಸ್ 100 ಮತ್ತು 200 ಮೀಟರ್ಸ್ ಓಟಗಳಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದ ಅವರು 4X100 ಮೀಟರ್ಸ್ ರಿಲೇ ವಿಭಾಗದಲ್ಲೂ ಜಮೈಕಾ ತಂಡಕ್ಕೆ ಅಗ್ರಸ್ಥಾನ ಗಳಿಸಿಕೊಟ್ಟಿದ್ದರು.

## ಲಾಟ್ ಗಾಲ್ಫ್: ಕಿಮ್ ಚಾಂಪಿಯನ್

**ಇವಾ ಬೀಚ್, ಹವಾಯ್:** ದಕ್ಷಿಣ ಕೊರಿಯಾದ ಹ್ಯೊ ಜೂ ಕಿಮ್ ಅವರು ಭಾನುವಾರ ಮುಕ್ತಾಯಗೊಂಡ ಎಲ್‌ಪಿಜಿಎ ಟೂರ್ ಲಾಟ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡರು.

ಜಪಾನ್‌ನ ಹಿನಾಕೊ ಶಿಬುವಾನೊ ಅವರ ಪ್ರಬಲ ಸವಾಲನ್ನು ಮೆಟ್ಟಿನಿಂತ ಅವರು ಕೊನೆಯ ಹಂತದಲ್ಲಿ ದಿಟ್ಟ ಆಟವಾಡಿ ಗೆಲುವು ಸಾಧಿಸಿದರು.

ಇದು ಅವರ ಐದನೇ ಎಲ್‌ಪಿಜಿಎ ಟೂರ್ ಪ್ರಶಸ್ತಿಯಾಗಿದೆ.

ಕಿಮ್ – ಎಎಫ್‌ಪಿ ಚಿತ್ರ

## ಫುಟ್‌ಬಾಲ್: ಮುಸ್ಲಿಂ ಹೀರೋಸ್‌ಗೆ ಜಯ

**ಬೆಂಗಳೂರು:** ಚಂತನು ಗಳಿಸಿದ ಗೋಲಿನ ನೆರವಿನಿಂದ ಮುಸ್ಲಿಂ ಹೀರೋಸ್ ತಂಡವು ಬಿಡಿಎಫ್‌ಎ 'ಸಿ' ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಭಾನುವಾರ ಇಲ್ಲಿ ನಡೆದ 'ಎನ್' ಗುಂಪಿನ ಪಂದ್ಯದಲ್ಲಿ 1–0ಯಿಂದ ಹಂಪಿನಗರ ಎಫ್‌ಸಿ ತಂಡವನ್ನು ಮಣಿಸಿತು. ಚಂತನು 58ನೇ ನಿಮಿಷದಲ್ಲಿ ಗೋಲು ಗಳಿಸಿದರು.'ಪಿ' ಗುಂಪಿನ ಹಣಾಹಣಿಯಲ್ಲಿ ಬೆಂಗಳೂರು ಕಿಕರ್ಸ್ ತಂಡವು ಲಾ ಮಾಸಿಯಾ ತಂಡದೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು.